# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣುಕು

## 06-01-2021



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ರ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ವಾರದೊಳಗೆ ಲಸಿಕೆ ನೀಡಿಕೆ

## 13ಕ್ಕೆ ಮುಂಚೆಯೇ ಅಭಿಯಾನ ಆರಂಭಿಸಲು ಸಜ್ಜು: ಆರೋಗ್ಯ ಸಚಿವಾಲಯ

ನವದೆಹಲಿ (ಪಿಟಿಐ): ಕೋವಿಡ್ ಪಿಡುಗು ಇಡೀ ಜಗತ್ತನ್ನು ಕಾಡಲು ಆರಂಭಿಸಿ ವರ್ಷದಲ್ಲಿ ಅದರ ವಿರುದ್ಧದ ಲಸಿಕೆ ಸಿದ್ಧವಾಗಿದೆ. ಎರಡು ಲಸಿಕೆಗಳನ್ನು ಹೊಂದಿರುವ ಭಾರತ, ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲು ಸಂಪೂರ್ಣವಾಗಿ ಸಜ್ಜಾಗಿದೆ.

‘ಇದೇ ತಿಂಗಳ 13ರೊಳಗೆ ಕೋವಿಡ್ ಲಸಿಕೆಯ ತುರ್ತು ಬಳಕೆ ಆರಂಭಿಸಲು ಸಿದ್ಧ’ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಹೇಳಿದ್ದಾರೆ.

ಆಸ್ಟ್ರಾಜೆನೆಕಾ ಮತ್ತು ಆಕ್ಸ್‌ಫರ್ಡ್ ಯುನಿವರ್ಸಿಟಿ ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಕೋವಿಶೀಲ್ಡ್ ಮತ್ತು ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ಕೋವ್ಯಾಕ್ಸಿನ್ ಲಸಿಕೆಗಳ ತುರ್ತು ಬಳಕೆಗೆ ಭಾರತದ ಔಷಧ ಮಹಾನಿಯಂತ್ರಕರು ಭಾನುವಾರ ಅನುಮೋದನೆ ನೀಡಿದ್ದಾರೆ. ಹಾಗಾಗಿ, ಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲು ಹಾದಿ ಸುಗಮವಾಗಿದೆ.

ಕೋವಿಡ್ ಮುಂಚೂಣಿ ಕಾರ್ಯಕರ್ತರು ಲಸಿಕೆಗಾಗಿ ನೋಂದಣಿ ಮಾಡಿಕೊಳ್ಳುವ ಅಗತ್ಯ ಇಲ್ಲ. ಅವರ ಬಗೆಗಿನ ಮಾಹಿತಿಯು ಕೋ–ವಿನ್ ಲಸಿಕೆ ನೀಡಿಕೆ ನಿರ್ವಹಣಾ ವ್ಯವಸ್ಥೆಯಲ್ಲಿ ದಾಖಲಾಗಿದೆ ಎಂದು ಭೂಷಣ್ ತಿಳಿಸಿದ್ದಾರೆ.

ಲಸಿಕೆ ತಯಾರಿಕಾ ಸಂಸ್ಥೆಗಳಾದ ಸೆರಂ ಇನ್‌ಸ್ಟಿಟ್ಯೂಟ್ ಮತ್ತು ಭಾರತ್ ಬಯೋಟೆಕ್ ಜತೆಗೆ ಲಸಿಕೆ ಖರೀದಿಯ ಒಪ್ಪಂದವನ್ನು ಸರ್ಕಾರ ಇನ್ನೂ ಮಾಡಿಕೊಂಡಿಲ್ಲ. ಎರಡೂ ಕಂಪನಿಗಳು ಲಸಿಕೆ ದರದ ಬಗ್ಗೆ ಚೌಕಾಸಿ ನಡೆಸುತ್ತಿವೆ.

ಲಸಿಕೆಯ ರಫ್ತಿಗೆ ನಿಷೇಧ ಇದೆ ಎಂದು ಸೆರಂ ಸಂಸ್ಥೆಯು ಇತ್ತೀಚೆಗೆ ಹೇಳಿತ್ತು. ಆದರೆ, ಅಂತಹ ಯಾವುದೇ ನಿಷೇಧ ಇಲ್ಲ ಎಂದು ಭೂಷಣ್ ಅವರು ಸ್ಪಷ್ಟನೆ ನೀಡಿದ್ದಾರೆ.




ಹುಬ್ಬಳ್ಳಿಯ ಚಾಮುಂಡೇಶ್ವರಿ ನಗರದಲ್ಲಿ ಆಶಾ ಕಾರ್ಯಕರ್ತೆಯರು ಮಂಗಳವಾರ ಮನೆ ಮನೆಗೆ ತೆರಳಿ ಕೋವಿಡ್ ಲಸಿಕೆ ಕುರಿತು ಸಮೀಕ್ಷೆ ನಡೆಸಿದರು

–ಪ್ರಜಾವಾಣಿ ಚಿತ್ರ

### ಲಸಿಕೆ ಹಂಚಿಕೆ ಹೇಗೆ?



- ಸೆರಂ ಮತ್ತು ಭಾರತ್ ಬಯೋಟೆಕ್‌ನಿಂದ ಪರೀಕ್ಷೆಗೆ ಒಳಪಟ್ಟ ಲಸಿಕೆಗಳು ಕೇಂದ್ರ ಸರ್ಕಾರದ ತಾಪಮಾನ ನಿಯಂತ್ರಿತ ಬೃಹತ್ ಡಿಪೋಗಳಿಗೆ ತಲುಪುತ್ತವೆ
- ಕರ್ನಾಲ್, ಮುಂಬೈ, ಚೆನ್ನೈ ಮತ್ತು ಕೋಲ್ಕತ್ತಾದಲ್ಲಿ ಈ ಡಿಪೋಗಳು ಇವೆ
- ಬಳಿಕ, ರಾಜ್ಯ ಮಟ್ಟದ 37 ಡಿಪೋಗಳಿಗೆ ಲಸಿಕೆ ಹಂಚಿಕೆ ಆಗಲಿದೆ
- ಇಲ್ಲಿಂದ ಲಸಿಕೆಗಳು ಜಿಲ್ಲೆಗಳಿಗೆ ಸಾಗಾಟ ಆಗಲಿವೆ. ಅಲ್ಲಿ ಲಸಿಕೆ ನೀಡಿಕೆ ನಡೆಯಲಿದೆ

### ವಾಕ್ಸಮರಕ್ಕೆ ತೆರೆ

ಲಸಿಕೆ ತಯಾರಿಕಾ ಸಂಸ್ಥೆಗಳಾದ ಸೆರಂ ಇನ್‌ಸ್ಟಿಟ್ಯೂಟ್ ಮತ್ತು ಭಾರತ್ ಬಯೋಟೆಕ್ ನಡುವೆ ನಡೆದ ವಾಕ್ಸಮರಕ್ಕೆ ಮಂಗಳವಾರ ತೆರೆಬಿದ್ದಿದೆ. ಎರಡೂ ಸಂಸ್ಥೆಗಳು ಜಂಟಿ ಹೇಳಿಕೆ ನೀಡಿ, ಕೋವಿಡ್–19 ಲಸಿಕೆ ನೀಡಿಕೆಯು ಸುಗಮವಾಗಿ ನಡೆಯುವುದಕ್ಕೆ ಎಲ್ಲ ಸಹಕಾರ ನೀಡುವುದಾಗಿ ಹೇಳಿವೆ.

ಸೆರಂನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅದಾರ್ ಪೂನಾವಾಲಾ ಅವರು ಮಾತನಾಡಿ ‘ಫೈಝರ್, ಮೊಡೆರ್ನಾ ಮತ್ತು ಕೋವಿಶೀಲ್ಡ್ ಮಾತ್ರ ಕೋವಿಡ್ ತಡೆಗೆ ಪರಿಣಾಮಕಾರಿ ಎಂದು ಸಾಬೀತಾಗಿವೆ. ಉಳಿದ ಎಲ್ಲವೂ ನೀರಿನ ಹಾಗೆ’ ಎಂದು ಹೇಳಿದ್ದರು.

ಭಾರತ್ ಬಯೋಟೆಕ್ ಮುಖ್ಯಸ್ಥ ಕೃಷ್ಣ ಎಲ್ಲ ಅವರು ಇದಕ್ಕೆ ತಿರುಗೇಟು ನೀಡಿದ್ದರು. ‘ಭಾರತದಲ್ಲಿ ಮತ್ತು ಬಹುಶಃ ಅಭಿವೃದ್ಧಿಶೀಲ ಜಗತ್ತಿನಲ್ಲಿ ಅತ್ಯಂತ ದೊಡ್ಡ ಪ್ರಯೋಗ ನಡೆಸಿದ ಬಳಿಕವೂ ನಮ್ಮ ವಿರುದ್ಧ ಕಿಡಿಕಾರಲಾಗುತ್ತಿದೆ’ ಎಂದಿದ್ದರು.

ಈಗ, ಎರಡೂ ಕಂಪನಿಗಳು ಜಂಟಿ ಹೇಳಿಕೆ ನೀಡುವ ಮೂಲಕ ಭಿನ್ನಾಭಿಪ್ರಾಯ ಬದಿಗೆ ಸರಿಸಿವೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ರಾಜ್ಯಕ್ಕೆ ಬಂದವರಲ್ಲಿ ಇದುವರೆಗೆ 37 ಮಂದಿಗೆ ಕೋವಿಡ್ ● ಕೇಂದ್ರ ಸರ್ಕಾರದ ಮಾರ್ಗಸೂಚಿ ಮೇರೆಗೆ ಪರೀಕ್ಷೆ

# ಬ್ರಿಟನ್ ವಲಸಿಗರು: 18 ಸಂಪರ್ಕಿತರಿಗೆ ಸೋಂಕು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯಕ್ಕೆ ಬ್ರಿಟನ್‌ನಿಂದ ಬಂದವರಲ್ಲಿ ಈವರೆಗೆ 37 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಅವರೊಂದಿಗೆ ನೇರ ಸಂಪರ್ಕ ಹೊಂದಿದ್ದವರಲ್ಲಿ ಸೋಂಕಿತರಾದವರ ಸಂಖ್ಯೆ 18ಕ್ಕೆ ಏರಿಕೆಯಾಗಿದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 2020ರ ಡಿ.9ರ ಬಳಿಕ ಬ್ರಿಟನ್‌ನಿಂದ ರಾಜ್ಯಕ್ಕೆ ಬಂದವರಿಗೆ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಮಂಗಳವಾರ 815 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.23 ಲಕ್ಷ ದಾಟಿದೆ. ಸೋಂಕಿತರಲ್ಲಿ 8 ಮಂದಿ ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,118ಕ್ಕೆ ತಲುಪಿದೆ. ಒಂದೇ ದಿನ 1.23 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಈ ತಿಂಗಳು ಐದು ದಿನಗಳಲ್ಲಿ 4.58 ಲಕ್ಷ ಮಂದಿ ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದಾರೆ.

ಕೋವಿಡ್ ಪೀಡಿತರಲ್ಲಿ ಮತ್ತೆ 1,377 ಮಂದಿ ಗುಣಮುಖರಾಗಿದ್ದು, ಇದರಿಂದಾಗಿ ಚೇತರಿಸಿಕೊಂಡವರ ಸಂಖ್ಯೆ 9.01 ಲಕ್ಷಕ್ಕೆ ತಲುಪಿದೆ. ಸೋಂಕಿತರಲ್ಲಿ ಸದ್ಯ 9,637 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಲ್ಲಿ 194 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ. ಕಳೆದ 14 ದಿನಗಳ ಅವಧಿಯಲ್ಲಿ 60 ಸಾವಿರ ನೇರ ಸಂಪರ್ಕಿತರು ಹಾಗೂ 69 ಸಾವಿರ ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಲಾಗಿದೆ.

ಬೆಂಗಳೂರಿನಲ್ಲಿ ಮತ್ತೆ 393 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 3.90 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 57 ಪ್ರಕರಣಗಳು ವರದಿಯಾಗಿದೆ. ಅಲ್ಲಿ ಸೋಂಕಿತರ ಸಂಖ್ಯೆ 52,618ಕ್ಕೆ ತಲುಪಿದೆ. ದಕ್ಷಿಣ ಕನ್ನಡದಲ್ಲಿ 44, ಹಾಸನದಲ್ಲಿ 33, ತುಮಕೂರಿನಲ್ಲಿ 27, ಉಡುಪಿಯಲ್ಲಿ 26 ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 6, ಕಲಬುರ್ಗಿ ಮತ್ತು ಉತ್ತರ ಕನ್ನಡದಲ್ಲಿ ತಲಾ ಒಂದು ಮರಣ ಪ್ರಕರಣ ವರದಿಯಾಗಿವೆ.




## ನಾಪತ್ತೆಯಾದ ಬ್ರಿಟನ್ ವಲಸಿಗರ ಸಂಖ್ಯೆಯಲ್ಲಿ ವ್ಯತ್ಯಯ

**ಬೆಂಗಳೂರು:** ನಾಪತ್ತೆಯಾಗಿರುವ ಬ್ರಿಟನ್ ವಲಸಿಗರ ಪತ್ತೆ ಕಾರ್ಯದಲ್ಲಿ ಆರೋಗ್ಯ ಇಲಾಖೆ ಮತ್ತು ಬಿಬಿಎಂಪಿ ನಡುವೆ ಸಮನ್ವಯ ಕೊರತೆ ಉಂಟಾಗಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ 75 ಮಂದಿ ನಾಪತ್ತೆಯಾಗಿದ್ದರೇ, ಬಿಬಿಎಂಪಿ ಆ ಸಂಖ್ಯೆ ನಗರದಲ್ಲಿಯೇ 114 ಇದೆ ಎಂದು ತಿಳಿಸಿದೆ.

ರಾಜ್ಯಕ್ಕೆ ನ.25 ರ ಬಳಿಕ 5 ಸಾವಿರಕ್ಕೂ ಅಧಿಕ ಮಂದಿ ಬ್ರಿಟನ್‌ನಿಂದ ಬಂದಿದ್ದಾರೆ. ಅವರಲ್ಲಿ ಬಹುತೇಕರನ್ನು ಪೊಲೀಸರ ನೆರವಿನಿಂದ ಪತ್ತೆ ಮಾಡಲಾಗಿದೆ. ಕೆಲವರು ಬ್ರಿಟನ್ ದೂರವಾಣಿ ಸಂಖ್ಯೆ ನೀಡಿದ್ದಾರೆ. ಇನ್ನೂ ಕೆಲವರು ಬ್ರಿಟನ್ ವಿಳಾಸ ನೀಡಿರುವುದು ಪತ್ತೆ ಕಾರ್ಯಕ್ಕೆ ಹಿನ್ನಡೆಯಾಗಿದೆ. ಇಲ್ಲಿಗೆ ಬಂದವರಲ್ಲಿ 2 ಸಾವಿರಕ್ಕೂ ಅಧಿಕ ಮಂದಿ ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದಾರೆ.

ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ‘ಬ್ರಿಟನ್‌ನಿಂದ ಬಂದವರ ಪೈಕಿ 75 ಮಂದಿ ಪತ್ತೆಯಾಗಿಲ್ಲ. ಅವರನ್ನು ಪತ್ತೆ ಮಾಡಿಕೊಡಬೇಕು ಎಂದು ಗೃಹ ಸಚಿವರಿಗೆ ಮನವಿ ಮಾಡಿಕೊಂಡಿದ್ದೇವೆ. ಬಿಬಿಎಂಪಿ ಕಮಿಷನರ್ ಮಂಜುನಾಥ್ ಪ್ರಸಾದ್ ಅವರ ಜತೆಗೆ ಕೂಡ ಮಾತನಾಡಿದ್ದೇನೆ. ಬಿಬಿಎಂಪಿಯವರಿಗೆ ಯಾವ ಮಾಹಿತಿ ಬಂದಿದೆ ಎನ್ನುವುದು ಗೊತ್ತಿಲ್ಲ. ಅವರು ಸಂಪರ್ಕಿತರನ್ನೂ ಸೇರಿ ಹೇಳುತ್ತಿರಬೇಕು’ ಎಂದರು.

‘ಅಲ್ಲಿಂದ ವಾಪಸ್ ಆದವರ ಪೈಕಿ 37 ಮಂದಿ ಸೋಂಕಿತರಾಗಿರುವುದು ಆರ್‌ಟಿ-ಪಿಸಿಆರ್ ಪರೀಕ್ಷೆಯಲ್ಲಿ ದೃಢಪಟ್ಟಿದೆ. ಇವರ ಪ್ರಾಥಮಿಕ ಸಂಪರ್ಕದಲ್ಲಿದ್ದ 17 ಜನರಿಗೆ ಸೋಂಕು ತಗುಲಿದೆ. 10 ಮಂದಿಯಲ್ಲಿ ರೂಪಾಂತರಗೊಂಡ ವೈರಾಣು ಕಾಣಿಸಿಕೊಂಡಿದೆ. ಇವರ ನೇರ ಮತ್ತು ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಿ, ಕ್ವಾರಂಟೈನ್‌ಗೆ ಒಳಪಡಿಸಲಾಗುತ್ತಿದೆ’ ಎಂದು ಅವರು ವಿವರಿಸಿದರು.

ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ.ಕೆ. ವಿಜಯೇಂದ್ರ, ‘ವಲಸೆ ಪ್ರಾಧಿಕಾರ ಹಾಗೂ ವಿಮಾನ ನಿಲ್ದಾಣ ಒದಗಿಸಿದ ಮಾಹಿತಿ ಅನುಸಾರ ನಾಪತ್ತೆಯಾದ ವರ ಹುಡುಕಾಟ ನಡೆಯುತ್ತಿದೆ. ಈ ಮಾಹಿತಿಯನ್ನು ವಲಯ ಆರೋಗ್ಯಾಧಿಕಾರಿಗಳಿಗೆ ಕಳುಹಿಸಿ, ಪತ್ತೆ ಮಾಡ ಲಾಗುತ್ತಿದೆ. ಅವರ ಮಾಹಿತಿಯನ್ನು ಗೃಹ ಇಲಾ ಖೆಗೂ ಕಳುಹಿಸಲಾಗಿದೆ. ಇಲ್ಲಿಗೆ ಬಂದವರಲ್ಲಿ 114 ಮಂದಿ ನಾಪತ್ತೆಯಾಗಿದ್ದಾರೆ. ಇವರಲ್ಲಿ ಹಲವರು ಡಿಸೆಂಬರ್ 1ರಂದು ನಗರಕ್ಕೆ ಬಂದವರಾಗಿದ್ದಾರೆ. ಡಿಸೆಂಬರ್ 2ರ ನಂತರ ಬಂದವರಲ್ಲಿ ಬಹುತೇಕರು ಪರೀಕ್ಷೆಗೆ ಒಳಪಟ್ಟಿದ್ದಾರೆ’ ಎಂದು ಅವರು ತಿಳಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಬಿಬಿಎಂಪಿಗೆ ಬಿಡಿಎ ಉದ್ಯಾನಗಳ ಹಸ್ತಾಂತರ ಶೀಘ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ವಿವಿಧ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ಉದ್ಯಾನಗಳನ್ನು ಹಂತ ಹಂತವಾಗಿ ಬಿಬಿಎಂಪಿಗೆ ಹಸ್ತಾಂತರ ಮಾಡಲು ನಿರ್ಧರಿಸಿದೆ.

ಪ್ರಾಧಿಕಾರದ ತೋಟಗಾರಿಕೆ ಮತ್ತು ಅರಣ್ಯ ವಿಭಾಗದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಮಂಗಳವಾರ ಈ ಕುರಿತು ಸಮಾಲೋಚನೆ ನಡೆಸಿದರು.

‘ಈಗಾಗಲೇ ಅಭಿವೃದ್ಧಿಪಡಿಸಿರುವ ಕೆಲವು ಉದ್ಯಾನಗಳನ್ನು ಪ್ರಾಧಿಕಾರವೇ ನಿರ್ವಹಣೆ ಮಾಡುತ್ತಿದೆ. ಇವುಗಳನ್ನು ಹಂತಹಂತವಾಗಿ ಬಿಬಿಎಂಪಿಗೆ ಹಸ್ತಾಂತರಿಸಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸಮ್ಮತಿಸಿದ್ದಾರೆ. ಉದ್ಯಾನ ನಿರ್ಮಾಣಕ್ಕಾಗಿ ಬಿಡಿಎ ಗೊತ್ತುಪಡಿಸಿದ ಜಾಗಗಳನ್ನೂ ಬಿಬಿಎಂಪಿಗೆ ಹಸ್ತಾಂತರಿಸಲಾಗುತ್ತದೆ. ಈ ಕುರಿತು ಸಿದ್ಧತೆ ಮಾಡಿಕೊಳ್ಳಬೇಕು’ ಎಂದು ಅಧಿಕಾರಿಗಳಿಗೆ ವಿಶ್ವನಾಥ್ ಸೂಚಿಸಿದರು.

‘ಉದ್ಯಾನಗಳ ಹಸ್ತಾಂತರದ ಕುರಿತು ಸದ್ಯದಲ್ಲೇ ಬಿಬಿಎಂಪಿ ಆಯುಕ್ತರ ಜೊತೆ ಮತ್ತೊಂದು ಸುತ್ತಿನ ಚರ್ಚೆ ನಡೆಸಲಾಗುತ್ತದೆ’ ಎಂದರು.

**ಟ್ರೀ-ಪಾರ್ಕ್ ನಿರ್ಮಾಣ:** ‘ಇನ್ನು ಮುಂದೆ ಬಿಡಿಎ ಬಡಾವಣೆಗಳಲ್ಲಿ ಮತ್ತು ಬಿಡಿಎ ಅನುಮೋದಿತ ಬಡಾವಣೆಗಳಲ್ಲಿ ಮಾಮೂಲಿ ಉದ್ಯಾನದ ಬದಲು ಟ್ರೀ-ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ದೀರ್ಘಕಾಲ ಉಳಿಯುವ ಮರಗಳನ್ನು ಬೆಳೆಸಲು ಆದ್ಯತೆ ನೀಡಲಾಗುತ್ತದೆ. ಪಾದಚಾರಿ ಮಾರ್ಗ, ವಾಯುವಿಹಾರ ಪಥ, ಜನ ಕುಳಿತುಕೊಳ್ಳಲು ಬೆಂಚುಗಳನ್ನು ನಿರ್ಮಿಸಲಾಗುತ್ತದೆ. ಜಾಗದ ಲಭ್ಯತೆ ನೋಡಿಕೊಂಡು ಮಕ್ಕಳ ಚಟುವಟಿಕೆಗೂ ಸೌಕರ್ಯ ಕಲ್ಪಿಸಲಾಗುತ್ತದೆ’ ಎಂದು ಅವರು ತಿಳಿಸಿದರು.

## ‘ನಾಗರಿಕ ಸೌಕರ್ಯದ ಜಾಗ ಅನ್ಯಉದ್ದೇಶಕ್ಕೆ ಬಳಸುವಂತಿಲ್ಲ’

‘ಬಿಡಿಎಯಿಂದ ಅನುಮೋದನೆ ಪಡೆದ ಬಡಾವಣೆಗಳಲ್ಲಿ ನಾಗರಿಕ ಸೌಕರ್ಯ ಕಲ್ಪಿಸುವ ಉದ್ದೇಶಕ್ಕೆ ಮೀಸಲಿಟ್ಟ ಜಾಗವನ್ನು ಅನ್ಯ ಉದ್ದೇಶಕ್ಕೆ ಬಳಸುವಂತಿಲ್ಲ. ಖಾಸಗಿ ಬಡಾವಣೆಗಳು ಹಾಗೂ ವಸತಿ ಸಹಕಾರ ಸಂಘಗಳು ಈ ರೀತಿ ಅಕ್ರಮವೆಸಗಿದರೆ ಅವುಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಅಂತಹ ಜಾಗವನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಗೊಳ್ಳಬೇಕು’ ಎಂದು ವಿಶ್ವನಾಥ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

## ಬಿಡಿಎ ಸುದ್ದಿ

ಕನ್ನಡಪ್ರಭ

# 1,535 ಸ್ಥಳದಲ್ಲಿ ಕೋವಿಡ್ ಲಸಿಕೆ

## ಲಸಿಕೆ ಹಾಕಲು ನಗರದಲ್ಲಿ ಸ್ಥಳಗಳ ಗುರುತು: ಚೋಳನ್
## ಸಿದ್ಧತೆ ಬಗ್ಗೆ ಸಂಸದ ತೇಜಸ್ವಿ ಸೂರ್ಯ ಜತೆ ಅಧಿಕಾರಿಗಳ ಸಭೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೋವಿಡ್ ಲಸಿಕೆ ಹಾಕುವುದಕ್ಕೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಮೆಡಿಕಲ್ ಹಾಗೂ ನರ್ಸಿಗ್ ಕಾಲೇಜುಗಳು ಸೇರಿದಂತೆ ಒಟ್ಟು 1,535 ಸ್ಥಳಗಳನ್ನು ಗುರುತಿಸಲಾಗಿದೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದ್ದಾರೆ.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಮಂಗಳವಾರ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರೊಂದಿಗೆ ನಗರದಲ್ಲಿ ಕೋವಿಡ್ ಲಸಿಕೆ ಅಭಿಯಾನ ಸಿದ್ಧತೆಗೆ ಸಂಬಂಧಿಸಿದಂತೆ ಸಭೆ ನಡೆಸಿದರು.



ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ರಾಜೇಂದ್ರ ಚೋಳನ್, ಮೊದಲ ಹಂತದಲ್ಲಿ ಕೋವಿಡ್ ಲಸಿಕೆ ಹಾಕುವುದಕ್ಕೆ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಕೇಂದ್ರಗಳು, ಸರ್ಕಾರಿ ಮತ್ತು ಖಾಸಗಿ ಮೆಡಿಕಲ್ ಕಾಲೇಜುಗಳು ಸೇರಿದಂತೆ ಒಟ್ಟು 1,535 ಸ್ಥಳಗಳನ್ನು ಗುರುತಿಸಲಾಗಿದೆ. ಶಾಲೆಗಳು ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಶಾಲೆ ಮತ್ತು ಕಾಲೇಜುಗಳಲ್ಲಿ ಕೋವಿಡ್ ಲಸಿಕೆ ಹಾಕುವುದಕ್ಕೆ ಸದ್ಯ ಬಳಕೆ ಮಾಡಿಕೊಳ್ಳುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಬ್ರಿಟನ್‌ನಿಂದ ಆಗಮಿಸಿದವರು ಹಾಗೂ ಅವರೊಂದಿಗೆ ಸಂಪರ್ಕ ಹೊಂದಿದವರ ಪೈಕಿ ಒಟ್ಟು 33 ಮಂದಿಗೆ ಕೋವಿಡ್ ಸೋಂಕು ಕಾಣಿಸಿಕೊಂಡಿದೆ. 33 ಮಂದಿಯಲ್ಲಿ 11 ಮಂದಿಗೆ ರೂಪಾಂತರ ಸೋಂಕು ದೃಢಪಟ್ಟಿದೆ ಎಂದು ವಿವರಿಸಿದರು.

ಕನ್ನಡಪ್ರಭ

# ಬ್ರಿಟನ್ ರಿಟರ್ನ್ಡ್: ನಾಪತ್ತೆ ಆದವರ ಪತ್ತೆಗೆ ವಿಶೇಷ ತಂಡ

## 121 ಮಂದಿ ಪತ್ತೆಗೆ 8 ವಲಯದಲ್ಲಿ ತಂಡ ರಚನೆ: ಚೋಳನ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ವಾಪಾಸ್ ಆಗಿ ನಾಪತ್ತೆಯಾದ 121 ಮಂದಿ ಪತ್ತೆಗೆ ಬಿಬಿಎಂಪಿಯ ಎಂಟು ವಲಯಗಳಲ್ಲಿ ವಿಶೇಷ ತಂಡ ರಚನೆ ಮಾಡಲಾಗಿದೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ರಾಜೇಂದ್ರ ಚೋಳನ್ ಹೇಳಿದ್ದಾರೆ.



ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಡಿ.1ರಿಂದ 21ವರೆಗೆ 1,426 ಆಗಮಿಸಿದ್ದರು. ಡಿ.30 ರಂದು 553 ಮಂದಿ, ಡಿ.31 ರಂದು 486 ಮಂದಿ ಆಗಮಿಸಿದ್ದಾರೆ. ಈ ಪೈಕಿ ಡಿ.1ರಿಂದ ಡಿ.21 ವರೆಗೆ ಆಗಮಿಸಿದವರಲ್ಲಿ 79 ಮಂದಿ, ಡಿ.30 ರಂದು ಆಗಮಿಸಿದವರ ಪೈಕಿ 28 ಮಂದಿ ಹಾಗೂ ಡಿ.31 ರಂದು ಆಗಮಿಸಿದವರಲ್ಲಿ 14 ಮಂದಿ ಸೇರಿದಂತೆ ಒಟ್ಟು 121 ಮಂದಿ ನಾಪತ್ತೆಯಾಗಿದ್ದಾರೆ. ನಾಪತ್ತೆಯಾದವರ ಪತ್ತೆಗೆ ವಲಯವಾರು ವಿಶೇಷ ತಂಡಗಳನ್ನು ರಚನೆ ಮಾಡಲಾಗಿದೆ. ಎರಡು ಮೂರು ದಿನದಲ್ಲಿ ಎಲ್ಲರನ್ನು ಪತ್ತೆ ಮಾಡಲಾಗುವುದು ಎಂದು ವಿವರಿಸಿದರು.

ನಾಪತ್ತೆಯಾದವರ ಪೈಕಿ ಐಟಿ-ಬಿಟಿ ಕಂಪನಿಗಳು ಹೆಚ್ಚಾಗಿರುವ ಮಹದೇವಪುರ ಭಾಗದವರು ಹೆಚ್ಚಾಗಿದ್ದಾರೆ. ಬಹುತೇಕ ಉದ್ಯೋಗಿಗಳಾಗಿರಬಹುದು. ಅನೇಕರ ಬ್ರಿಟನ್ ಮೊಬೈಲ್ ಸಂಖ್ಯೆ ಹಾಗೂ ವಿಳಾಸ ನೀಡಿದ್ದಾರೆ. ವಾಟ್ಸಪ್ ಕಾಲ್ ಮೂಲಕ ಸಂಪರ್ಕ ಮಾಡುವ ಪ್ರಯತ್ನವನ್ನು ವಿಶೇಷ ತಂಡದ ಅಧಿಕಾರಿಗಳು ಮಾಡುತ್ತಿದ್ದಾರೆ. ಒಂದು ವೇಳೆ ಪತ್ತೆಯಾಗದಿದ್ದಲ್ಲಿ ಅವರ ವಿವರವನ್ನು ಪೊಲೀಸ್ ಇಲಾಖೆಗೆ ನೀಡಿ ಪಾಸ್‌ಪೋರ್ಟ್ ಅಧಿಕಾರಿಗಳ ಸಹಕಾರದೊಂದಿಗೆ ಪತ್ತೆ ಮಾಡುವ ಪ್ರಯತ್ನ ನಡೆಸಲಿದ್ದಾರೆ. ಬ್ರಿಟನ್‌ನಿಂದ ಬಂದವರಲ್ಲಿ ಇನ್ನು 288 ಜನರನ್ನು ಸೋಂಕು ಪರೀಕ್ಷೆಗೆ ಒಳಪಡಿಸಬೇಕಿದೆ ಎಂದರು.

## 3.9 ಲಕ್ಷ ದಾಟಿದ ಸೋಂಕಿತರ ಸಂಖ್ಯೆ

**ಬೆಂಗಳೂರು:** ನಗರದಲ್ಲಿ ಮಂಗಳವಾರ 393 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 931 ಮಂದಿ ಗುಣಮುಖರಾಗಿದ್ದಾರೆ. ಆರು ಮಂದಿ ಮೃತಪಟ್ಟ ವರದಿಯಾಗಿದೆ. ಈ ಮೂಲಕ ನಗರದಲ್ಲಿ ಒಟ್ಟು ಕೊರೋನಾ ಸೋಂಕಿತರ ಸಂಖ್ಯೆ 3,90,348 ಏರಿಕೆಯಾಗಿದ್ದು, ಗುಣಮುಖರ ಸಂಖ್ಯೆ 3,79,867ಕ್ಕೆ ತಲುಪಿದೆ. ಸಕ್ರಿಯ ಸೋಂಕಿತರ ಸಂಖ್ಯೆ 6,147 ಕುಸಿದಿದೆ. ಈ ಪೈಕಿ 83 ಮಂದಿಯ ಆರೋಗ್ಯ ಗಂಭೀರವಾಗಿರುವುದರಿಂದ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಮಂಗಳವಾರ ಆರು ಮಂದಿ ಬಲಿಯಾಗಿದ್ದು, ಮೃತರ ಸಂಖ್ಯೆ 4,333ಗೆ ಏರಿಕೆಯಾಗಿದೆ.

ಕನ್ನಡಪ್ರಭ

# ಅಖಿಲೇಶ್ ವಿರುದ್ಧ ತೇಜಸ್ವಿ ಸೂರ್ಯ ಕಿಡಿ

## ಕೋವಿಡ್ ಲಸಿಕೆಗೆ ಬಿಜೆಪಿ ಲಸಿಕೆ ಎಂದಿದ್ದಕ್ಕೆ ಆಕ್ರೋಶ | ಲಸಿಕೆಯಿಂದ ಅಡ್ಡಪರಿಣಾಮ ಇಲ್ಲ: ಸಂಸದ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೋವಿಡ್ ಲಸಿಕೆಗೆ ಬಿಜೆಪಿ ಲಸಿಕೆ ಎಂದು ಬೇಜವಾಬ್ದಾರಿ ಹೇಳಿಕೆ ನೀಡಿದ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ವಿರುದ್ಧ ಸಂಸದ ತೇಜಸ್ವಿ ಸೂರ್ಯ ಕಿಡಿಕಾರಿದ್ದಾರೆ.

ಬೆಂಗಳೂರಿನಲ್ಲಿ ಕೋವಿಡ್ ಲಸಿಕೆ ವಿತರಣೆ ಕುರಿತ ಬಿಬಿಎಂಪಿ ಅಧಿಕಾರಿಗಳೊಂದಿಗೆ ಮಂಗಳವಾರ ಪೂರ್ವ ಸಿದ್ಧತೆ ಸಭೆ ನಡೆಸಿದರು. ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,



ಕೋವಿಡ್ ಲಸಿಕೆ ಬರುವುದರಿಂದ ಲಕ್ಷಾಂತರ ಜನರ ಜೀವ ಉಳಿಯಲಿದೆ. ಹಲವು ಹಂತದ ಸಂಶೋಧನೆಗಳ ನಂತರವಷ್ಟೇ ಲಸಿಕೆ ಮಾರುಕಟ್ಟೆಗೆ ಮುಕ್ತವಾಗಲಿದೆ. ಆದರೆ, ಕೋವಿಡ್ ಲಸಿಕೆಯನ್ನು ಬಿಜೆಪಿ ಲಸಿಕೆ ಎಂದು ಹೇಳುವುದು ಹಾಗೂ ಲಸಿಕೆಯ ಬಗ್ಗೆ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಮೂಡಿಸುವ ಬೇಜವಾಬ್ದಾರಿ ಹೇಳಿಕೆ ನೀಡುವುದು ಸರಿಯಲ್ಲ. ಉತ್ತರ ಪ್ರದೇಶ ರಾಜಕಾರಣಿ ಅಖಿಲೇಶ್ ಯಾದವ್ ಸೇರಿದಂತೆ ಮತ್ತಿತರರು ಈ ರೀತಿ ಮಾತನಾಡಿದ್ದಾರೆ. ಆದರೆ, ಈ ವಿಚಾರದಲ್ಲಿ ರಾಜ್ಯದ ಯಾವ ಪಕ್ಷದ ನಾಯಕರು ಹಗುರವಾಗಿ ಮಾತನಾಡಿಲ್ಲ ಎಂದರು.

ಲಸಿಕೆ ತೆಗೆದುಕೊಳ್ಳುವುದರಿಂದ ನಿಶ್ಯಕ್ತಿ ಉಂಟಾಗಲಿದೆ, ಮಕ್ಕಳಾಗುವುದಿಲ್ಲ ಎಂದು ವದಂತಿ ಹಬ್ಬಿಸಲಾಗುತ್ತಿದೆ. ಆದರೆ, ಲಸಿಕೆಯಿಂದ ಯಾವುದೇ ಸಮಸ್ಯೆ ಆಗುವುದಿಲ್ಲ ಎಂದು ಭರವಸೆ ನೀಡಿದರು.

ಕನ್ನಡಪ್ರಭ

# ಸಂಕ್ರಾಂತಿಗೆ ಲಸಿಕೆ ಪಕ್ಕಾ!

## 13/14ರ ವೇಳೆಗೆ ಹಂಚಿಕೆ | ಶೀಘ್ರ ಸರ್ಕಾರದಿಂದ ಅಧಿಕೃತ ಘೋಷಣೆ
## 10 ದಿನದಲ್ಲಿ ತುರ್ತು ಹಂಚಿಕೆಗೆ ಸಿದ್ಧ: ಕೇಂದ್ರ ಆರೋಗ್ಯ ಸಚಿವಾಲಯ

**ನವದೆಹಲಿ:** ಕೊರೋನಾ ವೈರಸ್‌ಗೆ ಕಡಿವಾಣ ಹಾಕುವ 2 ಲಸಿಕೆಗಳಿಗೆ ಅನುಮೋದನೆ ದೊರಕಿರುವ ಹಿನ್ನೆಲೆಯಲ್ಲಿ ಸಂಕ್ರಾಂತಿಯ ವೇಳೆಗೆ ಲಸಿಕೆ ನೀಡಿಕೆ ಆರಂಭವಾಗುವ ಸುಳಿವನ್ನು ಕೇಂದ್ರ ಆರೋಗ್ಯ ಸಚಿವಾಲಯ ಮಂಗಳವಾರ ನೀಡಿದೆ. ಈ ಮೂಲಕ ಧನುರ್ಮಾಸ ಮುಗಿದು ಉತ್ತರಾಯಣ ಪರ್ವಕಾಲ ಆರಂಭವಾಗುತ್ತಿರುವ ಸಂದರ್ಭದಲ್ಲಿ ದೇಶವು ಶುಭಗಳಿಗೆ ನೋಡುವ ಸಾಧ್ಯತೆ ಇದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್, 'ದೇಶಾದ್ಯಂತ ಕೊರೋನಾ ಲಸಿಕೆ ಹಂಚಿಕೆಯ ತಾಲೀಮಿನ ಫಲಿತಾಂಶ ಆಧರಿಸಿ, ಲಸಿಕೆಗೆ ಅನುಮತಿ ಸಿಕ್ಕ 10 ದಿನದೊಳಗೆ ಕೊರೋನಾ ಲಸಿಕೆಯ ತುರ್ತು ಹಂಚಿಕೆಗೆ ಸರ್ಕಾರ ಸಿದ್ಧವಿದೆ' ಎಂದರು. ಈ ಮೂಲಕ, ಜನವರಿ 13 ಅಥವಾ 14 ವೇಳೆಗೆ ಲಸಿಕೆ ಹಂಚಿಕೆ ಆರಂಭವಾಗಬಹುದು ಎಂಬ ಸುಳಿವು ನೀಡಿದರು. ಕೋವ್ಯಾಕ್ಸಿನ್ ಹಾಗೂ ಕೋವಿಶೀಲ್ಡ್ ಲಸಿಕೆಯ ತುರ್ತು ಬಳಕೆಗೆ ಭಾರತ್ ಬಯೋಟೆಕ್ ಹಾಗೂ ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಜನವರಿ 3ರಂದು ಅನುಮತಿ ಗಿಟ್ಟಿಸಿದ್ದವು. ಆದರೆ ನಿಖರ ದಿನಾಂಕವನ್ನು ಹೇಳದ ಅವರು, 'ಅಧಿಕೃತ ಘೋಷಣೆಯನ್ನು ಕೇಂದ್ರ ಸರ್ಕಾರವೇ ಮಾಡಲಿದೆ' ಎಂದು ಸ್ಪಷ್ಟಪಡಿಸಿದರು.




'ಲಸಿಕೆಯನ್ನು ಮೊದಲ ಹಂತದಲ್ಲಿ ಆರೋಗ್ಯ ಸಿಬ್ಬಂದಿ ಹಾಗೂ ಮುಂಚೂಣಿಯಲ್ಲಿರುವ ಕೆಲಸಗಾರರಿಗೆ ನೀಡಲಾಗುತ್ತದೆ. ಇವರು ನೋಂದಾಯಿಸಿಕೊಳ್ಳುವ ಅಗತ್ಯವಿಲ್ಲ. ಈಗಾಗಲೇ ಅವರ ದತ್ತಾಂಶ ಲಭ್ಯವಿದ್ದು, ಕೋ-ವಿನ್ ಲಸಿಕೆ ಹಂಚಿಕೆ ನಿರ್ವಹಣಾ ವ್ಯವಸ್ಥೆಯಲ್ಲಿ ಕ್ರೋಢೀಕರಿಸಲಾಗಿದೆ' ಎಂದು ಹೇಳಿದರು. ↘ 7

## ರಾಜ್ಯದಲ್ಲಿ ಮೊದಲು 6 ಲಕ್ಷ ಜನಕ್ಕೆ ಲಸಿಕೆ

### ರಾಜ್ಯ ಸರ್ಕಾರ ಸಕಲ ಸಿದ್ಧತೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಮೊದಲ ಹಂತದಲ್ಲಿ ಕೊರೋನಾ ಲಸಿಕೆಯನ್ನು ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದಲ್ಲಿನ ಒಟ್ಟು 6,30,524 ಆರೋಗ್ಯ ಕಾರ್ಯಕರ್ತರಿಗೆ ನೀಡಲು ಉದ್ದೇಶಿಸಲಾಗಿದ್ದು, ಈ ಸಂಬಂಧ ರಾಜ್ಯ ಸರ್ಕಾರ ಸಕಲ ಸಿದ್ಧತೆ ಮಾಡಿಕೊಂಡಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.



ರಾಜ್ಯಾದ್ಯಂತ 28,427 ಲಸಿಕಾ ಕೇಂದ್ರಗಳನ್ನು ಗುರುತಿಸಲಾಗಿದ್ದು, ಲಸಿಕೆ ನೀಡಲು 9,807 ಮಂದಿ ಅನುಭವಿ ವ್ಯಾಕ್ಸಿನೇಟರ್‌ಗಳಿಗೆ ತರಬೇತಿ ನೀಡಲಾಗಿದೆ. ಈ ಎಲ್ಲ ಮಾಹಿತಿಗಳನ್ನು ಲಸಿಕೆ ಪ್ರಕ್ರಿಯೆ ನಿರ್ವಹಿಸುವ ತಂತ್ರಾಂಶದಲ್ಲಿ ನಮೂದಿಸಲಾಗಿದೆ. ಇನ್ನಷ್ಟು ಲಸಿಕಾ ಕೇಂದ್ರಗಳನ್ನು ಗುರುತಿಸಲಾಗುವುದು ಎಂದು ಆರೋಗ್ಯ ಸಚಿವರು ಟ್ವೀಟ್ ನಲ್ಲಿ ತಿಳಿಸಿದ್ದಾರೆ. ವಿವರ ↘ 9

## ವೈದ್ಯರು ಸೂಚಿಸಿದರಷ್ಟೇ 50ರೊಳಗಿನವರಿಗೆ ಲಸಿಕೆ

**ನವದೆಹಲಿ:** ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ 50 ವರ್ಷದೊಳಗಿನ ವ್ಯಕ್ತಿಗಳು ವೈದ್ಯರಿಂದ ತಮ್ಮ ರೋಗದ ಕುರಿತು ಪ್ರಮಾಣಪತ್ರ ನೀಡಿದರಷ್ಟೇ ಲಸಿಕೆ ನೀಡಲಾಗುವ ಆದ್ಯತಾ ವಿಭಾಗಕ್ಕೆ ಸೇರಿಸಲು ಸರ್ಕಾರ ಮುಂದಾಗಿದೆ. ಈಗ ಇರುವ ದಾಖಲೆಗಳನ್ನು ತೋರಿಸಿಯೇ ಪ್ರಮಾಣಪತ್ರ ಪಡೆಯಬಹುದು. ವಿವರ ↘ 11



## ಲಸಿಕೆ ಹಂಚಿಕೆಗೆ ಆಧಾರ್, ಎಸ್ಸೆಮ್ಮೆಸ್

### 12 ಭಾಷೆಗಳಲ್ಲಿ ಲಸಿಕೆ ಮಾಹಿತಿ

**ನವದೆಹಲಿ:** ಕೊರೋನಾ ಲಸಿಕೆ ವಿತರಣೆಯ ಮೊದಲ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಆದ್ಯತೆ ನೀಡಲಾಗುವುದು. ಹೀಗೆ 3 ಕೋಟಿ ಜನರು ಯಾವುದೇ ಪೂರ್ವ ನೋಂದಣಿ ಇಲ್ಲದೆ ಲಸಿಕೆ ಪಡೆಯಲು ಅರ್ಹರು. ನಂತರದಲ್ಲಿ ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ 50 ವರ್ಷ ಒಳಗಿನವರು ಮತ್ತು ಈ ವಯಸ್ಸಿಗೆ ಮೇಲ್ಪಟ್ಟ ಸಾಮಾನ್ಯ ವಯಸ್ಕರನ್ನು ಆದ್ಯತಾ ವಲಯವೆಂದು ಪರಿಗಣಿಸಿ ಲಸಿಕೆ ನೀಡಲಾಗುವುದು. ಇವರೆಲ್ಲಾ ನೋಂದಣಿ ಮಾಡಿಸಿಕೊಂಡು ಲಸಿಕೆ ಪಡೆಯಲು ಕೆಳಕಂಡ ಮಾರ್ಗ ಅನುಸರಿಸಬೇಕಾಗುತ್ತದೆ.

1. ಕೋ-ವಿನ್ ಆ್ಯಪ್, ವೆಬ್‌ಸೈಟ್‌ನಲ್ಲಿ ಪೂರ್ವ ನೋಂದಣಿ ಕಡ್ಡಾಯ. ತಕ್ಷಣಕ್ಕಿದು ಜನರಿಗೆ ಅಲಭ್ಯ
2. ನೋಂದಣಿಗೆ ವೋಟರ್ ಐಡಿ, ಆಧಾರ್, ಡಿಎಲ್, ಪಾಸ್‌ಪೋರ್ಟ್ ಇತ್ಯಾದಿ 12 ದಾಖಲೆ ಅರ್ಹ
3. ನೋಂದಣಿಯಾದ ತಕ್ಷಣ ಲಸಿಕೆ ನೀಡಿಕೆ ಸ್ಥಳ, ದಿನಾಂಕ ಎಸ್ಸೆಮ್ಮೆಸ್ ಮೂಲಕ ರವಾನೆ
4. ಲಸಿಕೆ ಪಡೆಯುವವರು, ವ್ಯಾಕ್ಸಿನೇಟರ್‌ಗಳಿಗೆ 12 ಭಾಷೆಗಳಲ್ಲಿ ಮಾಹಿತಿ ರವಾನೆ
5. ವಿತರಣೆ ವೇಳೆಯ ಯಾವುದೇ ಗೊಂದಲ, ವಂಚನೆ ತಪ್ಪಿಸಲು ಆಧಾರ್ ಸಂಖ್ಯೆ ಸಂಯೋಜನೆ
6. ಲಸಿಕೆ ಪಡೆದ ಬಳಿಕ ಕೇಂದ್ರದಲ್ಲೇ 30 ನಿಮಿಷ ನಿಗಾ, ವ್ಯತ್ಯಾಸ ಆಗಿಲ್ಲ ಎಂದರಷ್ಟೇ ಮನೆಗೆ
7. ನಂತರದ ದಿನಗಳಲ್ಲಿ ಆರೋಗ್ಯ ವ್ಯತ್ಯಾಸವಾದರೆ ಆ್ಯಪ್/ವೆಬ್‌ನಲ್ಲೇ ವಿಷಯ ತಿಳಿಸಬಹುದು
8. ಮೊದಲ ಡೋಸ್ ಪಡೆದಾಗ 2ನೇ ಡೋಸ್ ದಿನಾಂಕವು ಮೊಬೈಲ್ ಮೂಲಕವೇ ರವಾನೆ
9. ಲಸಿಕೆ ಪ್ರಕ್ರಿಯೆ ಮುಗಿದ ನಂತರ ಕ್ಯುಆರ್ ಕೋಡ್ ಆಧರಿತ ಪ್ರಮಾಣಪತ್ರ ಸೃಷ್ಟಿ
10. ಪ್ರಮಾಣಪತ್ರವನ್ನು ಮೊಬೈಲ್‌ನ ಡಿಜಿ ಲಾಕರ್‌ನಲ್ಲಿ ಇರಿಸಿಕೊಳ್ಳಬಹುದು

ಕನ್ನಡಪ್ರಭ

# ರಸ್ತೆ ದಾಟಲು 300 ಕಡೆ ಎತ್ತರಿಸಿದ ಮಾರ್ಗ

## ಪಾದಚಾರಿಗಳ ಸುರಕ್ಷತೆಗೆ ಬಿಬಿಎಂಪಿ ಕ್ರಮ | ಅತಿ ಹೆಚ್ಚು ವಾಹನ ದಟ್ಟಣೆ ಇರುವ ಕಡೆ ನಿರ್ಮಾಣ | ಈಗಾಗಲೇ ಕಾಮಗಾರಿ ಆರಂಭ

## ಮೊದಲ ಹಂತದಲ್ಲಿ 150 ಕಡೆಗಳಲ್ಲಿ ಎತ್ತರಿಸಿದ ರಸ್ತೆದಾಟುವ ಮಾರ್ಗ | ಒಂದು ಎಸ್‌ಆರ್‌ಪಿಸಿ ನಿರ್ಮಾಣಕ್ಕೆ ಸುಮಾರು ₹65000 ವೆಚ್ಚ

• **ವಿಶ್ವನಾಥ ಮಲೇಬೆನ್ನೂರು**
**ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದ ವಾಹನ ದಟ್ಟಣೆ ಹೆಚ್ಚಾಗುವುದರೊಂದಿಗೆ ಸಂಚರಿಸುವ ವಾಹನಗಳ ವೇಗವೂ ಅಧಿಕ ಕೊಂಡಿದೆ. ಹೀಗಾಗಿ, ಪಾದಚಾರಿಗಳಿಗೆ ಸುರಕ್ಷತೆದೃಷ್ಟಿಯಿಂದ ನಗರದ ಪ್ರಮುಖ ಜಂಕ್ಷನ್, ಮಾರುಕಟ್ಟೆ, ಬಸ್ ನಿಲ್ದಾಣ ಹಾಗೂ ಜನದಟ್ಟಣೆ ಹೆಚ್ಚಿರುವ 300 ಕಡೆ ರಸ್ತೆಗಳಲ್ಲಿ ಬಿಬಿಎಂಪಿ 'ಎತ್ತರಿಸಿದ ರಸ್ತೆದಾಟುವ ಪಾದಚಾರಿ ಮಾರ್ಗ (ಎಚ್‌ಆರ್‌ಪಿಸಿ)' ನಿರ್ಮಿಸುತ್ತಿದೆ.

ನಗರದಲ್ಲಿ 1,400 ಕಿ.ಮೀ. ಉದ್ದದ ಆರ್ಟೀರಿಯಲ್ ಹಾಗೂ ಸಬ್-ಆರ್ಟೀರಿಯಲ್ ರಸ್ತೆಗಳಿವೆ. ಈ ರಸ್ತೆಗಳಲ್ಲಿ ದಿನದ 24 ಗಂಟೆಯೂ ಭಾರೀ ಪ್ರಮಾಣದ ವಾಹನ ದಟ್ಟಣೆ ಇರಲಿದೆ. ಪಾದಚಾರಿಗಳು ರಸ್ತೆ ದಾಟುವುದಕ್ಕೆ ಪರದಾಡುವ ಸ್ಥಿತಿ ಇದೆ.

ಜತೆಗೆ ನಗರ ಸಂಚಾರ ಪೊಲೀಸ್ ಹಾಗೂ ಬಿಬಿಎಂಪಿ ಅಧಿಕಾರಿಗಳು ಅಪಘಾತ ಹೆಚ್ಚಾಗುವ 29 ಡೇಂಜರಸ್ ಸ್ಪಾಟ್‌ಗಳನ್ನು ಗುರುತಿಸಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದಕ್ಕೆ ತೀರ್ಮಾನಿಸಿದ್ದರು. ಅದರಂತೆ ನಗರದ ಪ್ರಮುಖ ಜಂಕ್ಷನ್, ಮಾರುಕಟ್ಟೆ ಪ್ರದೇಶ, ಬಸ್ ನಿಲ್ದಾಣ, ಶಾಲಾ ವಲಯ ಸೇರಿದಂತೆ 300 ಕಡೆ ರಸ್ತೆಗಳಲ್ಲಿ 'ಎತ್ತರಿಸಿದ ರಸ್ತೆದಾಟುವ ಪಾದಚಾರಿ ಮಾರ್ಗ' ನಿರ್ಮಾಣ

### 2 ಹಂತದಲ್ಲಿ ಕಾಮಗಾರಿ

ಎರಡು ಹಂತದಲ್ಲಿ ನಿರ್ಮಿಸುವುದಕ್ಕೆ ಯೋಜನೆ ರೂಪಿಸಲಾಗಿದ್ದು, ಮೊದಲ ಹಂತದಲ್ಲಿ 150 ಕಡೆ ನಿರ್ಮಾಣ ಕಾರ್ಯ ಆರಂಭಗೊಂಡಿದೆ. ಸದ್ಯ ನಗರದ ನವರಂಗ್ ಚಿತ್ರಮಂದಿರ ಮುಂಭಾಗದ ಜಂಕ್ಷನ್ ಹಾಗೂ ಮಲ್ಲೇಶ್ವರದ ಸರ್ಕಲ್ ಬಸ್ ನಿಲ್ದಾಣದ ಬಳಿ ಈಗಾಗಲೇ ನಿರ್ಮಿಸಲಾಗಿದೆ. ಪ್ರತಿ ಎತ್ತರಿಸಿದ ಮಾರ್ಗ ನಿರ್ಮಾಣಕ್ಕೆ ಸುಮಾರು 65 ಸಾವಿರ ರು. ವೆಚ್ಚ ಮಾಡಲಾಗುತ್ತಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.





### ಹೇಗಿರುತ್ತೆ ಈ ಎತ್ತರಿಸಿದ ಮಾರ್ಗ?

ಸಿಗ್ನಲ್ ಜಂಕ್ಷನ್, ರಸ್ತೆ ದಾಟುವುದಕ್ಕೆ ನಿರ್ಮಿಸಲಾದ ಝೀಬ್ರಾ ಕ್ರಾಸಿಂಗ್‌ನಲ್ಲಿ ಈ ಎತ್ತರಿಸಿದ ರಸ್ತೆದಾಟುವ ಪಾದಚಾರಿ ಮಾರ್ಗ ನಿರ್ಮಿಸಲಾಗುವುದು. ರಸ್ತೆಯ ಒಂದು ಬದಿಯಿಂದ ಮತ್ತೊಂದು ಬದಿಯ ವರೆಗೆ ಈ ಪಾದಚಾರಿ ಮಾರ್ಗ ನಿರ್ಮಾಣವಾಗಲಿದೆ. ರಸ್ತೆಗಿಂತ ಸುಮಾರು ಒಂದು ಅಡಿ ಎತ್ತರ ಇರಲಿದೆ. ಸುಮಾರು ಎರಡು ಮೀಟರ್ ಅಗಲ ಪಾದಚಾರಿ ಮಾರ್ಗ ಇರಲಿದ್ದು, ಕೆಂಪು ಮತ್ತು ಬಿಳಿಯ ಬಣ್ಣದ ಕಾಬೂಲ್ ಸ್ಟೋನ್ ಅಳವಡಿಸಲಾಗುತ್ತಿದೆ. ವಾಹನಗಳು ಈ ಎತ್ತರದ ಪಾದಚಾರಿ ಮಾರ್ಗವನ್ನು ಬಳಸಿಕೊಂಡು ಮುಂದೆ ಸಾಗಬೇಕಾಗಲಿದೆ.

### ಪಾದಚಾರಿಗಳಿಗೆ ಸುರಕ್ಷತೆ ಹೇಗೆ?

ಎತ್ತರದ ರಸ್ತೆದಾಟುವ ಪಾದಚಾರಿ ಮಾರ್ಗ ನಿರ್ಮಾಣದಿಂದ ವಾಹನಗಳು ಜಂಕ್ಷನ್ ಅಥವಾ ಜನದಟ್ಟಣೆ ಇರುವ ಜಾಗಕ್ಕೆ ಆಗಮಿಸುತ್ತಿದಂತೆ ವೇಗ ಕಡಿಮೆಯಾಗಲಿದೆ. ಅಲ್ಲದೇ ನಿಧಾನವಾಗಿ ವಾಹನಗಳ ಸಂಚಾರ ಮಾಡಬೇಕಾಗಲಿದೆ. ಈ ವೇಳೆ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಬಹುದಾಗಿದೆ. ಝೀಬ್ರಾ ಕ್ರಾಸಿಂಗ್ ಪೇಟಿಂಗ್ ಮಾರ್ಕಿಂಗ್ ಮಾಡಿದಾಗ ವಾಹನಗಳನ್ನು ಝೀಬ್ರಾ ಕ್ರಾಸಿಂಗ್ ಮೇಲ್ಭಾಗದಲ್ಲಿ ನಿಲ್ಲಿಸಲಾಗುತ್ತಿತ್ತು. ಇದರಿಂದ ಜನರಿಗೆ ರಸ್ತೆ ದಾಟಲು ತೊಂದರೆ ಆಗುತ್ತಿತ್ತು. ಎತ್ತರಿಸಿದ ರಸ್ತೆದಾಟುವ ಪಾದಚಾರಿ ಮಾರ್ಗದಿಂದ

### 20 ಮೀಟರ್ ಅಂತರದಲ್ಲಿ ಫಲಕ

ವಾಹನ ಚಾಲಕರಿಗೆ ರಸ್ತೆಯಲ್ಲಿ ಎತ್ತರಿಸಿದ ರಸ್ತೆದಾಟುವ ಪಾದಚಾರಿ ಮಾರ್ಗ ಇರುವ ಬಗ್ಗೆ ಮಾಹಿತಿ ನೀಡುವುದಕ್ಕೆ ಬಿಬಿಎಂಪಿ 20 ಮೀಟರ್ ಮೊದಲೇ ಫಲಕ ಅಳವಡಿಕೆ ಮಾಡಲಿದೆ.

**ಜಾಗೃತಿ ಇಲ್ಲ:** ಈಗಾಗಲೇ ಎತ್ತರಿಸಿದ ರಸ್ತೆದಾಟುವ ಪಾದಚಾರಿ ಮಾರ್ಗ ನಿರ್ಮಿಸಿದ ಸ್ಥಳದಲ್ಲಿ ಪಾದಚಾರಿಗಳು ರಸ್ತೆಯಲ್ಲಿ ನಡೆಯುತ್ತಿರುವುದು, ವಾಹನ ಚಾಲಕರು ಎತ್ತರಿಸಿದ ಪಾದಚಾರಿ ಮಾರ್ಗದ ಮೇಲೆ ವಾಹನ ನಿಲುಗಡೆ ಮಾಡುತ್ತಿರುವುದು ಕಂಡು ಬರುತ್ತಿದೆ. ಈ ಬಗ್ಗೆ ಬಿಬಿಎಂಪಿ ಹಾಗೂ ಸಂಚಾರಿ ಪೊಲೀಸರು ಅರಿವು ಮೂಡಿಸುವ ಕಾರ್ಯ ಆಗಬೇಕಿದೆ.

VK
ವಿಜಯ ಕರ್ನಾಟಕ

## ವ್ಯಾಕ್ಸಿನ್ ನೀಡಲು ಗುರುತಿಸಿರುವ ಕೇಂದ್ರಗಳು 1507 | 1700 ಸಿಬ್ಬಂದಿಗೆ ತರಬೇತಿ

# 1.67 ಲಕ್ಷ ಆರೋಗ್ಯ ಸಿಬ್ಬಂದಿಗೆ ಲಸಿಕೆ



**1,67,937**
ಫಲಾನುಭವಿಗಳ ವಿವರ ಕೋವಿನ್ ಪೋರ್ಟಲ್‌ನಲ್ಲಿ ಅಪ್‌ಲೋಡ್

**200**
ಶೀತಲೀಕರಣ ಘಟಕಗಳಲ್ಲಿ ಲಸಿಕೆ ದಾಸ್ತಾನು

■ **ನಾಗಪ್ಪ ನಾಗನಾಯಕನಹಳ್ಳಿ**
ಬೆಂಗಳೂರು
nagappa.narayanappa@timesgroup.com

ನಗರದಲ್ಲಿ ಮೊದಲ ಹಂತದಲ್ಲಿ 1.67 ಲಕ್ಷ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ನೀಡಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಇದಕ್ಕಾಗಿ 1507 ಆರೋಗ್ಯ ಕೇಂದ್ರಗಳನ್ನು ಗುರುತಿಸಿದ್ದು, ಲಸಿಕೆ ವಿತರಣೆಗಾಗಿ 1700 ಮಂದಿ ಸಿಬ್ಬಂದಿಗೆ ತರಬೇತಿ ಕೂಡ ನೀಡಲಾಗಿದೆ.

ನಗರದ ಯಲಹಂಕ, ವಿದ್ಯಾಪೀಠ, ಕಾಮಾಕ್ಷಿಪಾಳ್ಯ ಮತ್ತು ಆನೇಕಲ್ ಸಮೀಪದ ಹಾರಗದ್ದೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಜ. 2ರಂದು ನಡೆಸಿದ ಕೋವಿಡ್ ಲಸಿಕೆಯ ತಾಲೀಮು (ಡ್ರೈ ರನ್) ಯಶಸ್ವಿಯಾಗಿದೆ. ಮೊದಲ ಹಂತದಲ್ಲಿ ಲಸಿಕೆ ವಿತರಣೆಗೆ 4300 ಖಾಸಗಿ ಆಸ್ಪತ್ರೆಗಳ 1,46,019 ಸಿಬ್ಬಂದಿ ಹಾಗೂ 292 ಸರಕಾರಿ ಆಸ್ಪತ್ರೆಗಳ 21,918 ಫಲಾನುಭವಿಗಳ ವಿವರಗಳನ್ನು ಕೋವಿನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 25 ಲಕ್ಷ ಲಸಿಕೆ ಸಂಗ್ರಹಕ್ಕೆ ಮೂಲಸೌಕರ್ಯ ಸಜ್ಜು ಮಾಡಿಕೊಳ್ಳಲಾಗಿದೆ. ಲಸಿಕೆ ದಾಸ್ತಾನಿಗೆ ಐಸ್‌ಲೈನ್ಡ್ ರೆಫ್ರಿಜರೇಟರ್‌ಗಳು (ಐಎಲ್ಆರ್) ಮತ್ತು ಡೀಪ್ ಫ್ರೀಜರ್‌ಗಳು ಸೇರಿ 330 ರೆಫ್ರಿಜರೇಟರ್‌ಗಳು ಲಭ್ಯ ಇವೆ. ಪಾಲಿಕೆಯಲ್ಲಿ 44 ಐಎಲ್‌ಆರ್‌ಗಳಿದ್ದು, ಪ್ರತಿಯೊಂದರಲ್ಲಿ 50 ಸಾವಿರ ಲಸಿಕೆ ಸಂಗ್ರಹಿಸಿ ಸಾಗಿಸಬಹುದಾಗಿದೆ. ಪ್ರತಿಯೊಂದು ಐಎಲ್‌ಆರ್‌ಗೆ 3.50 ಲಕ್ಷ ರೂ. ದರವಿದೆ.

ಕೇಂದ್ರ ಸರಕಾರದಿಂದ ಬರುವ ಲಸಿಕೆಗಳನ್ನು ದಾಸಪ್ಪ ಆಸ್ಪತ್ರೆಯಲ್ಲಿ ದಾಸ್ತಾನು ಮಾಡಲಾಗುತ್ತದೆ. 141 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಲಸಿಕೆಗಳನ್ನು ರವಾನಿಸಲಾಗುತ್ತಿದೆ. ಇಲ್ಲಿ ಒಟ್ಟು 200 ಶೀತಲೀಕರಣ ಘಟಕಗಳನ್ನು ಸಿದ್ಧಗೊಳಿಸಲಾಗಿದೆ. ಇಲ್ಲಿಂದ ಲಸಿಕೆ ನೀಡಲು ಗುರುತಿಸಿರುವ ಸರಕಾರಿ, ಖಾಸಗಿ ಆಸ್ಪತ್ರೆಗಳಿಗೆ ತಲುಪಿಸಲಾಗುತ್ತದೆ. 1507 ಕೇಂದ್ರಗಳಲ್ಲಿ ತಲಾ 100 ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲು ಉದ್ದೇಶಿಸಲಾಗಿದೆ. ಖಾಸಗಿ ನರ್ಸಿಂಗ್, ವೈದ್ಯಕೀಯ ಕಾಲೇಜುಗಳಲ್ಲೇ ಕೇಂದ್ರಗಳನ್ನು ತೆರೆದು ಅಲ್ಲಿನ ಸಿಬ್ಬಂದಿಗೆ ಲಸಿಕೆ ನೀಡಲು ತೀರ್ಮಾನಿಸಲಾಗಿದೆ.

''ಪ್ರತಿ ಕೇಂದ್ರದಲ್ಲಿ ವ್ಯಾಕ್ಸಿನೇಟರ್ ಸೇರಿ 5 ಮಂದಿ ಕಾರ್ಯ ನಿರ್ವಹಿಸಲಿದ್ದಾರೆ. ಮೊದಲ ಹಂತದಲ್ಲಿ 500-600 ಕೇಂದ್ರಗಳು ಸಾಕಾಗಲಿವೆ. ಆದಾಗ್ಯೂ, ಶಾಲೆಗಳು, ಅಂಗನವಾಡಿ ಕೇಂದ್ರಗಳಲ್ಲೂ ಕೇಂದ್ರಗಳನ್ನು ತೆರೆದು ಸಿದ್ಧವಾಗಿಟ್ಟುಕೊಳ್ಳಲು ತೀರ್ಮಾನಿಸಲಾಗಿದೆ. ಲಸಿಕೆ ವಿತರಣೆ ಸಂದರ್ಭದಲ್ಲಿ ಸಿಬ್ಬಂದಿ ಕೊರತೆಯಾದರೆ ನರ್ಸಿಂಗ್ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾಗುವುದು. ಸದ್ಯ 48 ಸಾವಿರ ನರ್ಸಿಂಗ್ ವಿದ್ಯಾರ್ಥಿಗಳು ಇದ್ದಾರೆ. ಲಸಿಕೆ ಸಂಗ್ರಹಕ್ಕೆ 200 ಶೀತಲೀಕರಣ ಘಟಕಗಳ ವ್ಯವಸ್ಥೆ ಮಾಡಿಕೊಳ್ಳಲಾಗಿದೆ,'' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ರಾಜೇಂದ್ರ ಚೋಳನ್ ಮಾಹಿತಿ ನೀಡಿದರು.

ಮೊದಲ ಹಂತದಲ್ಲಿ ಕೊರೊನಾ ಸೇನಾನಿಗಳಿಗೆ, ಎರಡನೇ ಹಂತದಲ್ಲಿ ಮುಂಚೂಣಿ ಕಾರ್ಯಕರ್ತರಿಗೆ ಹಾಗೂ ಮೂರನೇ ಹಂತದಲ್ಲಿ 50 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ಲಸಿಕೆ ನೀಡಲು ಕೇಂದ್ರ ಸರಕಾರ ತೀರ್ಮಾನಿಸಿದೆ. ಹಾಗಾಗಿ, ಪಾಲಿಕೆಯು ಅಗತ್ಯ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಂಡು, ಲಸಿಕೆ ವಿತರಣೆಗೆ ಸಜ್ಜಾಗಿದೆ. ಈ ತಿಂಗಳಾಂತ್ಯ ಅಥವಾ ಫೆಬ್ರವರಿ ಮೊದಲ ವಾರದಿಂದ ಲಸಿಕೆ ನೀಡುವ ಕಾರ್ಯಕ್ರಮ ಆರಂಭವಾಗುವ ಸಾಧ್ಯತೆಗಳಿವೆ.



ಮೊದಲ ಹಂತದಲ್ಲಿ ಲಸಿಕೆ ವಿತರಣೆಗೆ 1,67,937 ಆರೋಗ್ಯ ಕಾರ್ಯಕರ್ತರ ವಿವರವನ್ನು ಕೋವಿಡ್ ನಿರ್ವಹಣಾ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡುವ ದಿನ, ಸ್ಥಳ, ಸಮಯದ ಮಾಹಿತಿಯ ಸಂದೇಶ ಕಳುಹಿಸಲಾಗುತ್ತದೆ. ಅವರು ನಿಗದಿತ ದಿನದಂದು ಆಗಮಿಸಿ ಲಸಿಕೆ ಪಡೆಯಲಿದ್ದಾರೆ.

**-ಎನ್.ಮಂಜುನಾಥ ಪ್ರಸಾದ್**
ಬಿಬಿಎಂಪಿ ಆಯುಕ್ತ



### ಕೋ ವ್ಯಾಕ್ಸಿನ್ ವಿತರಣೆ ಹೇಗೆ?

ಕೋವಿಡ್ ಲಸಿಕೆ ಕೇಂದ್ರದಲ್ಲಿ ಮೂರು ಕೊಠಡಿಗಳು ಇರಲಿವೆ. ಕೋವಿನ್ ಪೋರ್ಟಲ್‌ನಲ್ಲಿ ಫಲಾನುಭವಿಗಳ ವಿವರಗಳನ್ನು ಅಪ್‌ಲೋಡ್ ಮಾಡಲಾಗಿದೆ. ಲಸಿಕೆ ನೀಡುವ ದಿನ, ಸ್ಥಳ, ಸಮಯದ ಮಾಹಿತಿಯನ್ನು ಫಲಾನುಭವಿಗಳ ಮೊಬೈಲ್‌ಗೆ ಸಂದೇಶ ಕಳುಹಿಸಲಾಗುತ್ತದೆ. ಅವರು ನಿಗದಿತ ಸಮಯಕ್ಕೆ ಆಗಮಿಸಿ ಲಸಿಕೆ ಪಡೆದುಕೊಳ್ಳುತ್ತಾರೆ. 28 ದಿನಗಳ ಬಳಿಕ ಮತ್ತೊಮ್ಮೆ ಲಸಿಕೆ ನೀಡಲಾಗುತ್ತದೆ. ಕೇಂದ್ರಗಳಿಗೆ ಬರುವ ಫಲಾನುಭವಿಗಳ ದೇಹದ ಉಷ್ಣಾಂಶ, ದಾಖಲೆಗಳ ಪರಿಶೀಲನೆ ನಡೆಸಿ ನಿರೀಕ್ಷಣಾ ಕೊಠಡಿಗೆ ಕಳುಹಿಸಲಾಗುತ್ತದೆ. ಬಳಿಕ ಲಸಿಕೆ ನೀಡಲಾಗುತ್ತದೆ. ಲಸಿಕೆ ಹಾಕುವ ಪ್ರಕ್ರಿಯೆ ನಡೆದ ಬಳಿಕ 30 ನಿಮಿಷಗಳ ಕಾಲ ವೀಕ್ಷಣಾ ಕೊಠಡಿಯಲ್ಲಿ ಕೂರಿಸಿ, ಅವರ ಆರೋಗ್ಯದಲ್ಲಾಗುವ ಏರುಪೇರುಗಳ ಮೇಲೆ ನಿಗಾ ಇಡಲಾಗುತ್ತದೆ. ಆನಂತರ ಮನೆಗೆ ಕಳುಹಿಸಿಕೊಡಲಾಗುತ್ತದೆ.

**ವಿಕ ವಿಶೇಷ**



### ವಲಯವಾರು ಫಲಾನುಭವಿಗಳ ವಿವರ

| ವಲಯ | ಖಾಸಗಿ ಆಸ್ಪತ್ರೆಗಳು | ಆರೋಗ್ಯ ಕಾರ್ಯಕರ್ತರು |
|---|---|---|
| ಪೂರ್ವ | 851 | 32760 |
| ಪಶ್ಚಿಮ | 904 | 25556 |
| ದಕ್ಷಿಣ | 945 | 26452 |
| ಬೊಮ್ಮನಹಳ್ಳಿ | 242 | 7126 |
| ಯಲಹಂಕ | 380 | 12275 |
| ಮಹದೇವಪುರ | 458 | 17747 |
| ಆರ್‌ಆರ್ ನಗರ | 338 | 15902 |
| ದಾಸರಹಳ್ಳಿ | 178 | 8201 |
| ಒಟ್ಟು | 4300 | 1,46,019 |

### ಸರಕಾರಿ ಆಸ್ಪತ್ರೆಗಳು

| ವಲಯ | ಆಸ್ಪತ್ರೆಗಳು | ಆರೋಗ್ಯ ಕಾರ್ಯಕರ್ತರು |
|---|---|---|
| ಪೂರ್ವ | 49 | 4137 |
| ಪಶ್ಚಿಮ | 79 | 5521 |
| ದಕ್ಷಿಣ | 66 | 8337 |
| ಬೊಮ್ಮನಹಳ್ಳಿ | 18 | 1912 |
| ಯಲಹಂಕ | 18 | 952 |
| ಮಹದೇವಪುರ | 18 | 762 |
| ಆರ್‌ಆರ್ ನಗರ | 26 | 714 |
| ದಾಸರಹಳ್ಳಿ | 13 | 466 |
| ಒಟ್ಟು | 292 | 21,918 |

VK ವಿಜಯ ಕರ್ನಾಟಕ

# ನಗರದಲ್ಲಿ ಮತ್ತೊಬ್ಬರಿಗೆ ಬ್ರಿಟನ್ ರೂಪಾಂತರ ಸೋಂಕು

**ವಿಕ ಸುದ್ದಿಲೋಕ** ಬೆಂಗಳೂರು

ಇಂಗ್ಲೆಂಡ್‌ನಿಂದ ನಗರಕ್ಕೆ ಮರಳಿದ್ದ ಪ್ರಯಾಣಿಕರೊಬ್ಬರೊಂದಿಗೆ ಪ್ರಾಥಮಿಕ ಸಂಪರ್ಕ ಹೊಂದಿದ್ದ ಮಹಿಳೆಯೊಬ್ಬರಿಗೆ ಬ್ರಿಟನ್ ರೂಪಾಂತರ ಸೋಂಕು ತಗಲಿರುವುದು ದೃಢಪಟ್ಟಿದೆ. ಇದರಿಂದ ನಗರದಲ್ಲಿ ರೂಪಾಂತರ ಸೋಂಕಿತರ ಸಂಖ್ಯೆ 7ಕ್ಕೇರಿದೆ.

ಲಂಡನ್‌ನಿಂದ ಬಂದಿದ್ದ ಶಿವಮೊಗ್ಗದ ನಿವಾಸಿಯೊಬ್ಬರಿಗೆ ಬ್ರಿಟನ್ ರೂಪಾಂತರ ಸೋಂಕು ತಗಲಿರುವುದು ಖಚಿತವಾಗಿತ್ತು. ಇವರೊಂದಿಗೆ ಪ್ರಾಥಮಿಕ ಸಂಪರ್ಕದಲ್ಲಿದ್ದ ಎಲೆಕ್ಟ್ರಾನಿಕ್ ಸಿಟಿಯ 52 ವರ್ಷದ ಮಹಿಳೆಯನ್ನು ಪರೀಕ್ಷೆಗೆ ಒಳಪಡಿಸಿದಾಗ ರೂಪಾಂತರ ಸೋಂಕು ತಗಲಿರುವುದು ದೃಢಪಟ್ಟಿದೆ.

**ನಗರದಲ್ಲಿ 7ಕ್ಕೇರಿದ ಸೋಂಕಿತರ ಸಂಖ್ಯೆ**

**121 ಪ್ರಯಾಣಿಕರ ನಾಪತ್ತೆ:** ಕಳೆದ ಡಿ. 1ರಿಂದ 31ರವರೆಗೆ 2471 ಮಂದಿ ಲಂಡನ್‌ನಿಂದ ನಗರಕ್ಕೆ ಬಂದಿದ್ದು, ಈ ಪೈಕಿ 121 ಮಂದಿ ಸಂಪರ್ಕಕ್ಕೆ ಸಿಕ್ಕಿಲ್ಲ. 2471 ಪ್ರಯಾಣಿಕರ ಪೈಕಿ 1572 ಮಂದಿಗೆ ಕೋವಿಡ್ ಪತ್ತೆ ಪರೀಕ್ಷೆ ನಡೆಸಲಾಗಿದೆ. ಆರ್‌ಟಿ-ಪಿಸಿಆರ್‌ನಲ್ಲಿ 24 ಮಂದಿಗೆ ಸಾಮಾನ್ಯ ಕೋವಿಡ್ ತಗಲಿರುವುದು ಗೊತ್ತಾಗಿದೆ. ಈ ಪೈಕಿ 7 ಮಂದಿಗೆ ಬ್ರಿಟನ್ ರೂಪಾಂತರ ಸೋಂಕು ತಗಲಿದೆ.

ವಿಜಯ ಕರ್ನಾಟಕ

# ಜ.13ರಿಂದ ಲಸಿಕಾ ಅಭಿಯಾನ ಶುರು?

**ಹೊಸದಿಲ್ಲಿ:** ದೇಶಾದ್ಯಂತ ಇನ್ನು 10 ದಿನಗಳ ಒಳಗೆ ಕೊರೊನಾ ನಿರೋಧಕ



ಲಸಿಕೆ ನೀಡುವ ಅಭಿಯಾನ ಆರಂಭಿಸಲು ಕೇಂದ್ರ ಸಿದ್ಧತೆ ನಡೆಸಿದೆ. ಬಹುತೇಕ ಜ.13ರ ಒಳಗಾಗಿ ಅಭಿಯಾನಕ್ಕೆ ಚಾಲನೆ ಸಿಗಲಿದೆ ಎಂದು ಮೂಲಗಳು ತಿಳಿಸಿವೆ. ಈ ಮಧ್ಯೆ, ಲಸಿಕಾ ಅಭಿಯಾನವನ್ನು ಪರಿಣಾಮಕಾರಿಯಾಗಿಸಲು ಕೋವಿನ್ ಸಾಫ್ಟ್‌ವೇರ್ ಮೂಲಕ ಸ್ವಯಂಚಾಲಿತ ಲಸಿಕೆ ಹಂಚಿಕೆ ಹಾಗೂ ಫಲಾನುಭವಿಗಳಿಗೆ ಎಸ್‌ಎಂಎಸ್ ಸಂದೇಶ ರವಾನಿಸುವ ವ್ಯವಸ್ಥೆಯನ್ನು 12 ಭಾಷೆಗಳಲ್ಲಿ ಅಭಿವೃದ್ಧಿಪಡಿಸಲಾಗಿದೆ.

ವಿವರ»16

VK
ವಿಜಯ ಕರ್ನಾಟಕ

### ಕೋವಿನ್ ಸಾಫ್ಟ್‌ವೇರ್ ಮೂಲಕ ಸ್ವಯಂ ಚಾಲಿತ ಹಂಚಿಕೆ | ಜ.13ರಿಂದ ಆರಂಭ?

# ಲಸಿಕೆ ಅಭಿಯಾನ ನಿಗಾಕ್ಕೆ ಆಧಾರ್ ಅಸ್ತ್ರ



ಉತ್ತರ ಪ್ರದೇಶದ ಲಖನೌನಲ್ಲಿ ಮಂಗಳವಾರ ಕೊರೊನಾ ನಿರೋಧಕ ಲಸಿಕೆ ನೀಡುವ ತಾಲೀಮು ನಡೆಸಲಾಯಿತು.

**ಹೊಸದಿಲ್ಲಿ/ಪುಣೆ:** ಕೊರೊನಾ ಲಸಿಕಾ ಅಭಿಯಾನವನ್ನು ಪರಿಣಾಮಕಾರಿಯಾಗಿಸಲು ಕೋವಿನ್ ಸಾಫ್ಟ್‌ವೇರ್ ಮೂಲಕ ಸ್ವಯಂ ಚಾಲಿತ ಲಸಿಕೆ ಹಂಚಿಕೆ ಹಾಗೂ ಫಲಾನುಭವಿಗಳಿಗೆ ಎಸ್‌ಎಂಎಸ್ ಸಂದೇಶ ರವಾನಿಸುವ ವ್ಯವಸ್ಥೆಯನ್ನು 12 ಭಾಷೆಗಳಲ್ಲಿ ಅಭಿವೃದ್ಧಿಪಡಿಸಲಾಗಿದೆ. ಫಲಾನುಭವಿಗಳ ವಿವರ, ಚುಚ್ಚುಮದ್ದು ಹಾಕಿಸಿಕೊಂಡಿದ್ದರ ದೃಢೀಕರಣಕ್ಕೆ ಫಲಾನುಭವಿಗಳ ಆಧಾರ್ ಸಂಖ್ಯೆಯನ್ನು ಬಳಸಿಕೊಳ್ಳಲಾಗುತ್ತದೆ. ಈ ಮೂಲಕ ಅಕ್ರಮಗಳಿಗೆ ಎಲ್ಲೂ ಆಸ್ಪದ ಇರುವುದಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಇನ್ನು 10 ದಿನಗಳ ಒಳಗೆ ದೇಶಾದ್ಯಂತ ಕೊರೊನಾ ನಿರೋಧಕ ಲಸಿಕೆ ನೀಡುವ ಅಭಿಯಾನ ಆರಂಭಿಸಲು ಕೇಂದ್ರ ಸಿದ್ಧತೆ ನಡೆಸಿದೆ. ಬಹುತೇಕ ಜ.13ರ ಒಳಗಾಗಿ ಅಭಿಯಾನಕ್ಕೆ ಚಾಲನೆ ಸಿಗಲಿದೆ. ಇದರ ನಡುವೆಯೇ ಕೋವಿನ್ ಆ್ಯಪ್‌ಅನ್ನು ಹಲವು ವಿಶೇಷತೆಗಳೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಲಸಿಕೆ ಪಡೆಯಲು ಬಯಸುವವರಿಗೆ ವಿಶಿಷ್ಟ ಆರೋಗ್ಯಕರ ಗುರುತು ನೀಡುವ ಹಾಗೂ ಒಬ್ಬ ವ್ಯಕ್ತಿ ಲಸಿಕೆ ಪಡೆದ ನಂತರ ಸಂಭವನೀಯ ಪ್ರತಿಕೂಲ ಪರಿಣಾಮಗಳ ನಿಕಟ ವರದಿ ಮತ್ತು ಟ್ರ್ಯಾಕಿಂಗ್ ವ್ಯವಸ್ಥೆ ಆ್ಯಪ್ ಮೂಲಕ ನಡೆಯಲಿದೆ ಎಂದು ಸಚಿವಾಲಯ ಹೇಳಿದೆ.

**ಡಿಜಿಲಾಕರ್ ನೆರವು:** ಲಸಿಕೆ ಪಡೆಯಲು ಕಾಯುತ್ತಿರುವವರಿಗೆ ಮತ್ತು ಅಭಿಯಾನದಲ್ಲಿ ತೊಡಗಿರುವ ಆರೋಗ್ಯ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡಲು 12 ಭಾಷೆಗಳಲ್ಲಿ ಎಸ್‌ಎಂಎಸ್ ಕಳುಹಿಸುವ ವ್ಯವಸ್ಥೆ ಇಲ್ಲಿ ರೂಪಿಸಲಾಗಿದೆ. ಎರಡು ಡೋಸ್‌ಗಳ ಚುಚ್ಚುಮದ್ದಿನ ನಂತರ, ಕ್ಯೂಆರ್ ಕೋಡ್ ಆಧಾರಿತ ವ್ಯಾಕ್ಸಿನೇಷನ್ ದೃಢೀಕರಣ ಪತ್ರವನ್ನು ವಿತರಿಸಲಾಗುತ್ತದೆ. ಫಲಾನುಭವಿಗಳು ಅದನ್ನು ತಮ್ಮ ಮೊಬೈಲ್ ಫೋನ್‌ನಲ್ಲಿ ಸಂಗ್ರಹಿಸಿಟ್ಟುಕೊಳ್ಳಬಹುದು. ಕ್ಯೂಆರ್ ಕೋಡ್ ಆಧಾರಿತ ಪ್ರಮಾಣಪತ್ರವನ್ನು ಡಿಜಿಲಾಕರ್ ಆ್ಯಪ್‌ನಲ್ಲಿ ಸಂಗ್ರಹಿಸಿಟ್ಟುಕೊಳ್ಳುವಂತೆ ಇಂಟಿಗ್ರೇಟೆಡ್ ವ್ಯವಸ್ಥೆಯೂ ಕೋವಿನ್ ಆ್ಯಪ್‌ನಲ್ಲಿ ಇರಲಿದೆ ಎಂದು ಸಚಿವಾಲಯ ವಿವರ ನೀಡಿದೆ. ನೋಂದಾಯಿತರ ಗೊಂದಲ ಪರಿಹಾರಕ್ಕೆ 24X7 ಸಹಾಯವಾಣಿಯ ಸೌಲಭ್ಯ ಪಡೆಯಬಹುದಾಗಿರುತ್ತದೆ.

**ಮತ್ತೆ ನೋಂದಣಿ ಅನಗತ್ಯ :** ಕೋವಿನ್ ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ಅದರ ಕಾರ್ಯಕ್ಷಮತೆ ಪರೀಕ್ಷಿಸಲು ವಿವಿಧ ಹಂತಗಳಲ್ಲಿ ಲಸಿಕಾ ಪೂರ್ವ ಅಭಿಯಾನಗಳನ್ನು (ಡ್ರೈ ರನ್) ನಡೆಸಲಾಗಿದೆ. ಇದುವರೆಗೂ 700 ಜಿಲ್ಲೆಗಳಲ್ಲಿ 90 ಸಾವಿರಕ್ಕೂ ಹೆಚ್ಚು ಸಿಬ್ಬಂದಿಗೆ ಸಾಫ್ಟ್‌ವೇರ್ ಬಳಕೆ ಕುರಿತು ತರಬೇತಿ ನೀಡಲಾಗಿದೆ. ಈಗಾಗಲೇ ಸಾಫ್ಟ್‌ವೇರ್‌ನಲ್ಲಿ ಆರೋಗ್ಯ ಕಾರ್ಯಕರ್ತರ ಡೇಟಾಗಳನ್ನು ಅಪ್‌ಲೋಡ್ ಮಾಡಲಾಗಿದ್ದು, ಅವರು ಪ್ರತ್ಯೇಕವಾಗಿ ನೋಂದಾಯಿಸಿಕೊಳ್ಳುವ ಅಗತ್ಯವಿರುವುದಿಲ್ಲ ಎಂದು ಸರಕಾರ ಸ್ಪಷ್ಟಪಡಿಸಿದೆ. ಜನಸಂಖ್ಯೆಗೆ ಅನುಗುಣವಾಗಿ ಆದ್ಯತಾ ಗುಂಪುಗಳಿಗೆ ಲಸಿಕೆ ಹಂಚಿಕೆಯು ಸ್ವಯಂ ಚಾಲಿತವಾಗಿ ನಡೆಯುವ ವ್ಯವಸ್ಥೆಯನ್ನು ಸಾಫ್ಟ್‌ವೇರ್‌ನಲ್ಲಿ ಸಂಯೋಜಿತಗೊಳಿಸಲಾಗಿದೆ. ಲಸಿಕೆ ನೀಡುವ ಕಾರ್ಯ ಕ್ರಮಗಳನ್ನು(ವ್ಯಾಕ್ಸಿನೇಷನ್ ಸೆಷನ್ಸ್) ನಡೆಸುವ ದಿನಾಂಕಗಳನ್ನು ಆಯಾ ಜಿಲ್ಲಾಧಿಕಾರಿಗಳು ನಿರ್ಧರಿಸಬಹುದಾಗಿರುತ್ತದೆ.

### ಸರಕಾರದ ತೀರ್ಮಾನಕ್ಕೆ ಕಾತರ

''ಲಸಿಕೆ ನೀಡುವ ತಾಲೀಮಿನ ಆಧಾರದ ಮೇಲೆ ಆರೋಗ್ಯ ಸಚಿವಾಲಯವು ಲಸಿಕೆ ಅನುಮೋದನೆ ಪಡೆದ ಬಳಿಕ 10 ದಿನಗಳಲ್ಲಿ ಅಭಿಯಾನ ಆರಂಭಿಸಲು ಸಿದ್ಧವಿದೆ. ಆದರೆ ಈ ಬಗ್ಗೆ ಇನ್ನೂ ದಿನಾಂಕ ಅಂತಿಮಗೊಂಡಿಲ್ಲ,'' ಎಂದು ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಹೇಳಿದ್ದಾರೆ. ಹರಿಯಾಣದ ಕರ್ನಾಲ್, ಮುಂಬಯಿ, ಚೆನ್ನೈ ಮತ್ತು ಕೋಲ್ಕೊತಾದಲ್ಲಿ ನಾಲ್ಕು ಪ್ರಮುಖ ಲಸಿಕಾ ಸಂಗ್ರಹ ಕೇಂದ್ರಗಳಿರಲಿವೆ. ಇದರ ಜತೆಗೆ ದೇಶಾದ್ಯಂತ 37 ಕಡೆ ಲಸಿಕಾ ಸಂಗ್ರಹ ಕೇಂದ್ರಗಳಿದ್ದು, ಇಲ್ಲಿಂದ ವಿತರಣೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ. ಬ್ರಿಟನ್‌ನಿಂದ ಬರುತ್ತಿರುವವರಲ್ಲಿ ರೂಪಾಂತರಗೊಂಡ ಕೊರೊನಾ ವೈರಸ್ ಕಾಣಿಸಿಕೊಳ್ಳುತ್ತಿರುವುದು ಹೆಚ್ಚುತ್ತಿರುವುದರ ಮಧ್ಯೆ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

### ಮತ್ತೆ 20 ಜನರಲ್ಲಿ ಲಂಡನ್ ಸೋಂಕು

ಬ್ರಿಟನ್‌ನಲ್ಲಿ ಕಾಣಿಸಿಕೊಂಡ ರೂಪಾಂತರಗೊಂಡ ಕೊರೊನಾ ಸೋಂಕು ಮಂಗಳವಾರ ದೇಶದಲ್ಲಿ ಮತ್ತೆ 20ಜನರಲ್ಲಿ ಕಾಣಿಸಿಕೊಂಡಿದೆ. ಇದರೊಂದಿಗೆ ಬ್ರಿಟನ್ ವೈರಸ್ ಸೋಂಕಿತರ ಸಂಖ್ಯೆ 58ಕ್ಕೆ ಏರಿದೆ. ಬ್ರಿಟನ್‌ನಿಂದ ಮರಳಿದವರ ಸಹ ಪ್ರಯಾಣಿಕರು, ಕುಟುಂಬ ಸದಸ್ಯರು, ಇವರೊಂದಿಗೆ ಸಂಪರ್ಕಕ್ಕೆ ಬಂದಿದ್ದವರನ್ನು ಗುರುತಿಸುವ ಕಾರ್ಯ ನಡೆದಿದೆ. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಕಟ್ಟೆಚ್ಚರ ವಹಿಸುವಂತೆ ರಾಜ್ಯಗಳಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಬ್ರಿಟನ್‌ನಲ್ಲಿ ಪತ್ತೆಯಾದ ರೂಪಾಂತರಿತ ಕೋವಿಡ್ ವೈರಸ್ ಡೆನ್ಮಾರ್ಕ್, ನೆದರ್‌ಲ್ಯಾಂಡ್, ಆಸ್ಟ್ರೇಲಿಯಾ, ಇಟಲಿ, ಸ್ವೀಡನ್, ಫ್ರಾನ್ಸ್ ಸೇರಿ ಇನ್ನೂ ಕೆಲವು ದೇಶಗಳಲ್ಲಿ ಕಾಣಿಸಿಕೊಂಡಿದೆ. ದೇಶದಲ್ಲಿ ಮಂಗಳವಾರ ಬೆಳಗ್ಗೆ 8 ಗಂಟೆಗೆ ಕೊನೆಯಾದ 24 ಗಂಟೆಗಳ ಅವಧಿಯಲ್ಲಿ 16,375 ಹೊಸ ಪ್ರಕರಣಗಳು ವರದಿಯಾಗಿವೆ. ಇದು ಕಳೆದ ಆರು ತಿಂಗಳಲ್ಲೇ ಅತ್ಯಂತ ಕನಿಷ್ಠ ಪ್ರಮಾಣವಾಗಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1

# ಸಂಕ್ರಾಂತಿಗೆ ಲಸಿಕೆ ಶುರು

## ಆರೋಗ್ಯ ಸಿಬ್ಬಂದಿ, ಕರೊನಾ ವಾರಿಯರ್ಸ್‌ಗೆ ಮೊದಲ ಆದ್ಯತೆ

## ನಿರ್ವಹಣೆಗೆ ಕೋ-ವಿನ್ ಸಿಸ್ಟಮ್ | ದೃಢೀಕರಣಕ್ಕೆ ಆಧಾರ್

**ನವದೆಹಲಿ:** ಬಹುನಿರೀಕ್ಷಿತ ಕೋವಿಡ್ 19 ಲಸಿಕೆಗಳು ಸಂಕ್ರಾಂತಿಗೆ ಮುನ್ನ ಸಾಮೂಹಿಕ ಬಳಕೆಗೆ ಮುಕ್ತವಾಗುವುದು ಖಚಿತವಾಗಿದೆ. ಲಸಿಕೆಗಳು ತುರ್ತು ಬಳಕೆಗೆ ಅನುಮೋದನೆ ಪಡೆದುಕೊಂಡ ದಿನದಿಂದ (ಜ.3)10 ದಿನಗಳಲ್ಲಿ ಅಂದರೆ ಜ.13ರ ಒಳಗೆ ಅಭಿಯಾನ ಆರಂಭವಾಗಲಿದೆ. ಆರೋಗ್ಯ ಸೇವಾ ಸಿಬ್ಬಂದಿ ಮತ್ತು ಕರೋನಾ ವಾರಿಯರ್ಸ್‌ಗೆ ಆದ್ಯತೆ ಮೇರೆಗೆ ಮೊದಲು ಲಭ್ಯವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

» ಆರಂಭಿಕ ಹಂತದಲ್ಲಿ 30 ಕೋಟಿ ಜನರಿಗೆ ಸಿಗುತ್ತೆ ಲಸಿಕೆ

ಈ ಅಭಿಯಾನದ ನಿರ್ವಹಣೆಗಾಗಿ ಸರ್ಕಾರ ಕೋ-ವಿನ್ (Co-WIN vaccine delivery management system) ಲಸಿಕೆ ಪೂರೈಕೆ ನಿರ್ವಹಣಾ ವ್ಯವಸ್ಥೆಯನ್ನು ರೂಪಿಸಿದೆ. ಇದು ಸಂಪೂರ್ಣ ಮೇಡ್ ಇನ್ ಇಂಡಿಯಾ ಆಗಿದೆ. ಜಗತ್ತಿನ ಯಾವುದೇ ದೇಶ ಇದನ್ನು ಬಳಸಬಹುದಾಗಿದ್ದು, ಅದಕ್ಕೆ ಭಾರತ ಸರ್ಕಾರ ನೆರವನ್ನೂ ನೀಡುತ್ತದೆ. ಪ್ರಾಯೋಗಿಕ ಅಭಿಯಾನದ ಹಿಮ್ಮಾಹಿತಿ ಆಧರಿಸಿ ಆರೋಗ್ಯ ಸಚಿವಾಲಯವು ಕೋವಿಡ್ -19 ಲಸಿಕೆ ಬಳಕೆಗೆ ಆದೇಶ ನೀಡಿದ ದಿನಾಂಕದಿಂದ ಹತ್ತು ದಿನದೊಳಗೆ ಅದರ ಪ್ರಯೋಗಕ್ಕೂ ಅವಕಾಶ ನೀಡಲು ಸಿದ್ಧವಾಗಿದೆ. ಅಂತಿಮ ನಿರ್ಧಾರ ಏನಿದ್ದರೂ ಅದನ್ನು ಸರ್ಕಾರವೇ ಮಾಡಲಿದೆ ಎಂದು ಭೂಷಣ್ ತಿಳಿಸಿದರು.

### ಹೀಗಿರಲಿದೆ ಲಸಿಕೆ ಪೂರೈಕೆ ವ್ಯವಸ್ಥೆ

ಈಗಾಗಲೇ ಇರುವ ಲಾಜಿಸ್ಟಿಕ್ಸ್ ನಿರ್ವಹಣಾ ವ್ಯವಸ್ಥೆ ಮತ್ತು ನೈಜ ಸಮಯದ ರಿಮೋಟ್ ಉಷ್ಣತೆ ನಿಗಾ ವ್ಯವಸ್ಥೆಯನ್ನು 29,000 ಕೋಲ್ಡ್ ಚೈನ್ ಪಾಯಿಂಟ್ಸ್‌ಗಳಲ್ಲಿ ಅಳವಡಿಸಲಾಗಿದೆ. ಉತ್ಪಾದಕರು ಲಸಿಕೆಯನ್ನು ವಾಯು ಮಾರ್ಗದ ಮೂಲಕ ನಾಲ್ಕು ಪ್ರಮುಖ ಕೇಂದ್ರಗಳಿಗೆ ಅಂದರೆ ಹರಿಯಾಣದ ಕರ್ನಲ್, ಮುಂಬಯಿ, ಚೆನ್ನೈ ಮತ್ತು ಕೋಲ್ಕತಗೆ ತಲುಪಿಸುತ್ತಾರೆ. ಇನ್‌ಸುಲೇಟ್ ಮಾಡಿರುವ ವ್ಯಾನ್‌ಗಳ ಮೂಲಕ ಲಸಿಕೆಯನ್ನು 37 ರಾಜ್ಯ ಲಸಿಕಾ ಕೇಂದ್ರಗಳಿಗೆ ಸಾಗಿಸಲಾಗುತ್ತದೆ. ಹಾಗೆ 41 ಕೇಂದ್ರಗಳಿಗೆ ಲಸಿಕೆ ತಲುಪಿದ ಬಳಿಕ ಅಲ್ಲಿಂದ ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಸರ್ಕಾರಗಳು ಉಷ್ಣತೆ ನಿಯಂತ್ರಿತ ಸೌಲಭ್ಯ ಹೊಂದಿರುವ ಜಿಲ್ಲಾ ಮಟ್ಟದ ಲಸಿಕೆ ಕೇಂದ್ರಗಳಿಗೆ ಲಸಿಕೆಯನ್ನು ರವಾನಿಸುತ್ತವೆ. ಅಲ್ಲಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಲಸಿಕೆ ಪೂರೈಕೆಯಾಗಲಿದೆ. ಆರಂಭಿಕ ಹಂತದಲ್ಲಿ 30 ಕೋಟಿ ಜನರ ಗುಂಪಿಗೆ ಲಸಿಕೆ ತಲುಪಿಸುವ ಉದ್ದೇಶ ಕೋ-ವಿನ್‌ನದ್ದು.



ಉತ್ತರ ಪ್ರದೇಶದಲ್ಲಿ ಕರೊನಾ ಲಸಿಕೆಯ ಪ್ರಯೋಗಾರ್ಥಕ ಪರೀಕ್ಷೆ

### ಫಲಾನುಭವಿಗಳ ನೋಂದಣಿ ಕಡ್ಡಾಯ

ಕೋವಿಡ್ 19 ಲಸಿಕೆ ಪಡೆಯಬೇಕಾದರೆ ಫಲಾನುಭವಿಗಳು ನೋಂದಣಿ ಮಾಡಿಸುವುದು ಕಡ್ಡಾಯ. ಇದಕ್ಕಾಗಿ ಕೋ-ವಿನ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಆಧಾರ್ ಸಂಖ್ಯೆ ದಾಖಲಿಸಿ ದೃಢೀಕರಿಸಬೇಕು. ನಂತರ ಲಸಿಕೆ ಹಾಕುವ ಸಮಯವನ್ನು



ಕೋ-ವಿನ್ ವ್ಯವಸ್ಥೆ ಹಂಚಿಕೆ ಮಾಡುತ್ತದೆ. ಫಲಾನುಭವಿಗೆ ವಿಶಿಷ್ಟ ಆರೋಗ್ಯ ಗುರುತಿನ ಸಂಖ್ಯೆ ಮತ್ತು ಕ್ಯೂಆರ್ ಕೋಡ್ ಆಧಾರಿತ ಪ್ರಮಾಣ ಪತ್ರವನ್ನೂ ಪೂರೈಸುತ್ತದೆ. 12 ಭಾಷೆಗಳಲ್ಲಿ ಫಲಾನುಭವಿಗೆ ಎಸ್‌ಎಂಎಸ್ ಮೂಲಕ ಮಾಹಿತಿ, ಮಾರ್ಗದರ್ಶನವನ್ನೂ ಒದಗಿಸುತ್ತದೆ. ಅದರಲ್ಲಿರುವ ಡೇಟಾ ಬೇಸ್‌ನಲ್ಲಿ ಈಗಾಗಲೇ ಕರೊನಾ ವಾರಿಯರ್ಸ್ ಮತ್ತು ಆರೋಗ್ಯ ಸೇವಾ ಸಿಬ್ಬಂದಿಯ ಮಾಹಿತಿಗಳು ದಾಖಲಾಗಿವೆ. ಅವರು ಮತ್ತೊಮ್ಮೆ ನೋಂದಾಯಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಫಲಾನುಭವಿಗಳು ಎರಡು ಡೋಸ್ ಲಸಿಕೆ ಹಾಕಿಸಿಕೊಂಡ ನಂತರದಲ್ಲಿ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತದೆ. ಲಸಿಕೆ ಹಾಕಿಸಿದ ನಂತರದಲ್ಲಿ ಏನಾದರೂ ಸಮಸ್ಯೆಗಳಾದರೆ ಅಥವಾ ಆರೋಗ್ಯದಲ್ಲಿ ಏರುಪೇರಾದರೆ ಕೂಡಲೇ ಸಂಬಂಧಿತ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. 24X7 ಸಹಾಯವಾಣಿಯೂ ಇದರಲ್ಲಿ ಲಭ್ಯವಿದೆ. ಐಟಿ ವೃತ್ತಿಪರರು ಈ ತಂಡದಲ್ಲಿದ್ದು, ಚಾಟ್-ಬೋಟ್ ಕೂಡ ನೆರವು ನೀಡಲಿದೆ.

### ಯಶ ಕಂಡ ಫೀಲ್ಡ್ ಟೆಸ್ಟಿಂಗ್

**ಕೋ-ವಿನ್** ವ್ಯವಸ್ಥೆಯ ಫೀಲ್ಡ್ ಟೆಸ್ಟಿಂಗ್ ಅನ್ನು ಡಿ.28 ಮತ್ತು 29ರಂದು ಆಂಧ್ರಪ್ರದೇಶ, ಅಸ್ಸಾಂ, ಗುಜರಾತ್, ಪಂಜಾಬ್‌ನ ಏಳು ಜಿಲ್ಲೆಗಳಲ್ಲಿ ನಡೆಸಲಾಗಿತ್ತು. ಆರಂಭಿಕ ಹಂತದಿಂದ ಹಿಡಿದು ಕೊನೆಯ ತನಕದ ಎಲ್ಲ ವ್ಯವಸ್ಥೆಯನ್ನು ಪರಿಶೀಲಿಸಲು ನೆರವಾಗುವಲ್ಲಿ ಯಶಸ್ವಿಯಾಗಿದೆ. ಇದೇ ರೀತಿ ಜ.2ರಂದು ದೊಡ್ಡ ಪ್ರಮಾಣದಲ್ಲಿ ಡ್ರೈ ರನ್ ಮಾಡಿ ವ್ಯವಸ್ಥೆಯನ್ನು ದೇಶದ 125 ಜಿಲ್ಲೆಗಳಲ್ಲಿ ಪರೀಕ್ಷಿಸಲಾಗಿದ್ದು, ಯಶ ಕಂಡಿದೆ.



### ಬೋರಿಸ್ ಭಾರತ ಪ್ರವಾಸ ರದ್ದು

ಬ್ರಿಟನ್‌ನಲ್ಲಿ ರೂಪಾಂತರಿ ಕರೊನಾ ಸೋಂಕಿನ ಸಮಸ್ಯೆ ತೀವ್ರಗೊಂಡಿರುವ ಕಾರಣ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಭಾರತ ಪ್ರವಾಸದಿಂದ ಹಿಂದೆ ಸರಿದಿದ್ದಾರೆ. ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿಗೆ ಕರೆ ಮಾಡಿ ದೇಶದ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಜ. 26ರಂದು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಾನ್ಸನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಬೇಕಿತ್ತು.

Bengaluru Edition
Jan 6, 2021 Page No. 3
Powered by : eReleGo.com

ವಿಜಯವಾಣಿ
ಕನ್ನಡಿಗರ ಧ್ವನಿ

# ಬಿಬಿಎಂಪಿಗೆ ಬಿಡಿಎ ಉದ್ಯಾನ ಹಸ್ತಾಂತರ

**ಬೆಂಗಳೂರು:** ಬಿಡಿಎ ನಿರ್ವಹಣೆಯಲ್ಲಿರುವ ಬಹುತೇಕ ಉದ್ಯಾನಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಲು ನಿರ್ಧರಿಸಲಾಗಿದೆ. ತೋಟಗಾರಿಕೆ ಮತ್ತು ಅರಣ್ಯ ವಿಭಾಗದ ಪ್ರಗತಿ ಪರಿಶೀಲನಾ ಸಭೆ ನಡೆಸಿದ ನಂತರ ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಈ ವಿಷಯ ತಿಳಿಸಿದರು. ಹಂತಹಂತವಾಗಿ ಉದ್ಯಾನಗಳ ಹಸ್ತಾಂತರ ಪ್ರಕ್ರಿಯೆ ನಡೆಯಲಿದೆ. ಈಗಾಗಲೆ ಅಭಿವೃದ್ಧಿಯಾಗಿರುವ ಉದ್ಯಾನಗಳ ಜತೆಗೆ ಅದಕ್ಕಾಗಿ ಮೀಸಲಿಟ್ಟ ಜಾಗವನ್ನು ಬಿಬಿಎಂಪಿಗೆ ನೀಡಲಾಗುವುದು ಎಂದರು.

**» ಎಸ್.ಆರ್. ವಿಶ್ವನಾಥ್ ಮಾಹಿತಿ**

ಉದ್ಯಾನಗಳ ಅಭಿವೃದ್ಧಿಗೆ ಖಾಸಗಿ ಸಹಭಾಗಿತ್ವ ಪಡೆಯಲು ಚಿಂತನೆ ನಡೆಸಲಾಗಿದೆ. ಆ ಕುರಿತಂತೆ ಕೆಲ ಖಾಸಗಿ ಸಂಸ್ಥೆಗಳು, ಬಿಲ್ಡರ್‌ಗಳಿಗೆ ಪತ್ರ ಬರೆಯಲಾಗುತ್ತದೆ. ಅದರ ಜತೆಗೆ ಬಿಡಿಎ ಅನುಮೋದಿತ ಬಡಾವಣೆಗಳಲ್ಲಿ ನಾಗರಿಕ ಉದ್ದೇಶಗಳಿಗೆ ಮೀಸಲಿಟ್ಟ ಜಾಗದಲ್ಲಿ ಅನ್ಯ ಉದ್ಯೇಶಕ್ಕೆ ಬಳಸಿಕೊಂಡಿರುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತದೆ. ಅಗತ್ಯವಿದ್ದರೆ ಜಾಗವನ್ನು ವಶಕ್ಕೆ ಪಡೆಯಲಾಗುವುದು ಎಂದರು.

ವಿಜಯವಾಣಿ
ಕನ್ನಡಿಗರ ಧ್ವನಿ

# ಇರಲಿ ನಂಬಿಕೆ ಬೇಡ ಟೀಕೆ

## ವಿಜ್ಞಾನಿಗಳಿಗೆ ಅಗೌರವ ತೋರದಿರಿ | ಸಚಿವ ಸುಧಾಕರ್ ಮನವಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಭಾರತದಲ್ಲಿ ಸಿದ್ಧಗೊಂಡ ಲಸಿಕೆಯ ಬಗ್ಗೆ ವಿನಾಕಾರಣ ಯಾರೂ ಟೀಕಿಸಬಾರದು. ಈ ಮೂಲಕ ವಿಜ್ಞಾನಿಗಳ ಪರಿಶ್ರಮಕ್ಕೆ ಧಕ್ಕೆ ತರಬಾರದು ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಟೀಕಾಕಾರರಿಗೆ ಸಲಹೆ ನೀಡಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕರೊನಾ ಸಾಂಕ್ರಾಮಿಕ ವಿರುದ್ಧದ ಹೋರಾಟದಲ್ಲಿ ಭಾರತದ ಕಂಪನಿ ಕೊವ್ಯಾಕ್ಸಿನ್ ಅಭಿವೃದ್ಧಿಪಡಿಸಿದೆ. ಈ ಕಂಪನಿ ಬಹಳ ಹೆಸರುವಾಸಿ ಹಾಗೂ ನಂಬಿಕೆಗೆ ಅರ್ಹವಾದದ್ದು, ಎಚ್1 ಎನ್1, ರೋಟಾ ವೈರಸ್, ರೇಬಿಸ್, ಚಿಕೂನ್ ಗುನ್ಯಾ, ಝೀಕಾ ಸೇರಿ 16 ರೋಗಗಳಿಗೆ ಲಸಿಕೆ ಆವಿಷ್ಕರಿಸಿದೆ ಎಂದು ವಿವರಿಸಿದ್ದಾರೆ.

ಕಂಪನಿಯು ಯೂನಿಸೆಫ್ ಸಹಯೋಗದಲ್ಲಿ 150ಕ್ಕೂ ಹೆಚ್ಚು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ವಿವಿಧ ಬಗೆಯ 400 ಕೋಟಿ ಡೋಸ್ ಲಸಿಕೆಗಳನ್ನು ವಿತರಣೆ ಮಾಡಿದೆ. ಕೋವ್ಯಾಕ್ಸಿನ್‌ನ 3 ನೇ ಹಂತದ ಕ್ಲಿನಿಕಲ್ ಟ್ರಯಲ್ ನಲ್ಲಿ 24,000 ಮಂದಿ ಭಾಗವಹಿಸಿದ್ದು, ಈ ಬಗ್ಗೆ ಶೀಘ್ರವೇ ದತ್ತಾಂಶ ಲಭ್ಯವಾಗಲಿದೆ. ಕರೊನಾ ಲಸಿಕೆಗೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕು. ನಂತರ ಮಾತ್ರ ಅದನ್ನು ಅಧಿಕೃತ ಎನ್ನಲಾಗುತ್ತದೆ. ಈ ಲಸಿಕೆಯ ಅಡ್ಡ ಪರಿಣಾಮ ಶೇ.15ಕ್ಕಿಂತಲೂ ಕಡಿಮೆ ಇದೆ. ಇದು ಬಹಳ ಸುರಕ್ಷಿತ ಲಸಿಕೆ ಎಂದು ಸಚಿವರು ಹೇಳಿದರು.

### ಲಸಿಕೆ ವಿತರಣೆಗೆ ಭರದ ಸಿದ್ಧತೆ

- **ಮೊದಲನೇ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲಿದ್ದು, 2,73,211 ಸರ್ಕಾರಿ ಹಾಗೂ 3,57,313 ಖಾಸಗಿ ಸೇರಿ ಒಟ್ಟು 6,30,524 ಆರೋಗ್ಯ ಕಾರ್ಯಕರ್ತರನ್ನು ಗುರುತಿಸಲಾಗಿದೆ.**
- **ಲಸಿಕೆ ನೀಡಲು ತರಬೇತಿ ಪಡೆದ 9,807 ಅನುಭವಿ ವ್ಯಾಕ್ಸಿನೇಟರ್ ಸಿಬ್ಬಂದಿ ಮತ್ತು ರಾಜ್ಯಾದ್ಯಂತ 28,427 ಲಸಿಕಾ ಕೇಂದ್ರಗಳನ್ನು ಗುರುತಿಸಲಾಗಿದ್ದು, ಇನ್ನೂ ಹೆಚ್ಚಿನ ಕೇಂದ್ರಗಳನ್ನು ಗುರುತಿಸಲಾಗುವುದು. ಈ ಎಲ್ಲಾ ದತ್ತಾಂಶವನ್ನು ಕೇಂದ್ರ ಸರ್ಕಾರ ಸಿದ್ಧಪಡಿಸಿರುವ ತಂತ್ರಾಂಶದಲ್ಲಿ ನಮೂದಿಸಲಾಗಿದೆ.**
- **ರಾಜ್ಯಕ್ಕೆ ಅವಶ್ಯಕತೆ ಇರುವ ಹೆಚ್ಚಿನ ಮೂಲಸೌಕರ್ಯವನ್ನು ಕೇಂದ್ರ ಸರ್ಕಾರ ಪೂರೈಸುತ್ತಿದ್ದು, ಈವರೆಗೂ 64 ಬೃಹತ್ ಐಸ್ ಲೈನ್ಡ್ ರೆಫ್ರಿಜರೇಟರ್, 24 ಲಕ್ಷ ಸಿರಿಂಜುಗಳು ರಾಜ್ಯಕ್ಕೆ ಬಂದಿದ್ದು ಜಿಲ್ಲೆಗಳಿಗೆ ರವಾನಿಸಲಾಗಿದೆ. ಇನ್ನುಳಿದ 31 ಲಕ್ಷ ಸಿರಿಂಜುಗಳು ಸೇರಿದಂತೆ ಹೆಚ್ಚುವರಿ ಉಪಕರಣ ಶೀಘ್ರದಲ್ಲೇ ತಲುಪಲಿವೆ.**



ಸಾಂದರ್ಭಿಕ ಚಿತ್ರ

### ಹಾಜರಾತಿ ಹೆಚ್ಚಳ

**ಶಾಲೆಗಳು ಆರಂಭಗೊಂಡು ನಾಲ್ಕು ದಿನ ಕಳೆದಿದ್ದು, ಮಂಗಳವಾರ ಶೇ.50ಕ್ಕೂ ಅಧಿಕ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಿದ್ದಾರೆ. ಪಿಯುಸಿ ವಿದ್ಯಾರ್ಥಿಗಳ ಹಾಜರಾತಿ ಪ್ರಮಾಣ ನಿರೀಕ್ಷೆಗೂ ಮೀರಿ ಏರಿಕೆಯಾಗಿದೆ. ವಿದ್ಯಾಗಮ ತರಗತಿಗೂ ಎಲ್ಲ ಜಿಲ್ಲೆಗಳಲ್ಲೂ ಅತ್ಯಂತ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ ಎಂದು ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.**

ಕರೊನಾ ಯಮರ್ಜೆನ್ಸಿ EMERGENCY

### ಸೋಂಕಿತ ಶಿಕ್ಷಕರ ಸಂಖ್ಯೆ ಹೆಚ್ಚಳ

**ಒಂದೆಡೆ ಶಾಲಾ-ಕಾಲೇಜು ಪ್ರಾರಂಭವಾಗಿ ದಿನೇ ದಿನೇ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಳವಾಗುತ್ತಿದ್ದರೆ, ಮತ್ತೊಂದು ಕಡೆ ಕರೊನಾ ಸೋಂಕಿಗೆ ತುತ್ತಾಗುತ್ತಿರುವ ಶಿಕ್ಷಕರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಸೋಮವಾರ ಒಂದೇ ದಿನ 20ಕ್ಕೂ ಹೆಚ್ಚು ಹೊಸ ಪ್ರಕರಣಗಳು ವರದಿಯಾಗಿದ್ದು, ಈವರೆಗೆ 50ಕ್ಕೂ ಅಧಿಕ ಶಿಕ್ಷಕರು ಕರೊನಾ ಸೋಂಕಿಗೆ ಒಳಗಾಗಿದ್ದಾರೆ. ಇದರಿಂದ ಶಿಕ್ಷಕರು ಮತ್ತು ಮಕ್ಕಳಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ.**

**ಕೋವಿಡ್** ಲಸಿಕೆಯಿಂದ ಲಕ್ಷಾಂತರ ಜನರ ಜೀವ ಉಳಿಯಲಿದೆ. ಹೀಗಾಗಿ, ತಪ್ಪು ಮಾಹಿತಿ ನೀಡದಂತೆ ಮನವಿ ಮಾಡುತ್ತೇನೆ. ಯಾರೊಬ್ಬರು ಲಸಿಕೆ ಬಗ್ಗೆ ಸುಳ್ಳು ವದಂತಿಗಳನ್ನು ನಂಬಬಾರದು. ಲಸಿಕೆ ವಿತರಣೆಯ ಮೊದಲ ಹಂತದಲ್ಲಿ 1.68 ಲಕ್ಷ ಜನರಿಗೆ, ಎರಡನೇ ಹಂತದಲ್ಲಿ 2 ಲಕ್ಷ ಜನರಿಗೆ ಹಾಗೂ ಮೂರನೇ ಹಂತದಲ್ಲಿ 50 ವರ್ಷ ಮೇಲ್ಪಟ್ಟವರು ಮತ್ತು ದೀರ್ಘಕಾಲಿಕ ರೋಗವುಳ್ಳವರಿಗೆ ಲಸಿಕೆ ನೀಡಲಾಗುವುದು.

| **ತೇಜಸ್ವಿ ಸೂರ್ಯ** ಸಂಸದ

## ತಪ್ಪಿದ ಲೆಕ್ಕ, ತಪ್ಪದ ಸೋಂಕಿನ ಆತಂಕ

**ಬೆಂಗಳೂರು:** ಆರೋಗ್ಯ ಇಲಾಖೆ ಮತ್ತು ಬಿಬಿಎಂಪಿ ನಡುವಿನ ಸಮನ್ವಯದ ಕೊರತೆಯಿಂದ ಬ್ರಿಟನ್‌ನಿಂದ ರಾಜ್ಯಕ್ಕೆ ಆಗಮಿಸಿ ಸಂಪರ್ಕಕ್ಕೆ ಸಿಗದವರ ವಿಚಾರದಲ್ಲಿ ಗೊಂದಲ ಸೃಷ್ಟಿಯಾಗಿದೆ. ಆರೋಗ್ಯ ಇಲಾಖೆ ನಾಪತ್ತೆಯಾದವರ ಸಂಖ್ಯೆ 75 ಎಂದರೆ, ಬಿಬಿಎಂಪಿ 121 ಎಂದು ಹೇಳುತ್ತಿದೆ. ರಾಜ್ಯಕ್ಕೆ ನ.25ರ ನಂತರ 5 ಸಾವಿರಕ್ಕೂ ಅಧಿಕ ಮಂದಿ ಬ್ರಿಟನ್‌ನಿಂದ ಆಗಮಿಸಿದ್ದಾರೆ. ಅವರಲ್ಲಿ 2,176 ಮಂದಿಯನ್ನು ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗಿದ್ದು, 37 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಇವರ ಪ್ರಾಥಮಿಕ ಸಂಪರ್ಕದಲ್ಲಿದ್ದ 17 ಮಂದಿಗೂ ಸೋಂಕು ತಗುಲಿದೆ. ಈವರೆಗೂ 11 ಮಂದಿಯಲ್ಲಿ ರೂಪಾಂತರ ವೈರಸ್ ಪತ್ತೆಯಾಗಿದೆ. 38 ಜನರ ವರದಿ ಬಾಕಿ ಉಳಿದಿದೆ.

ಸಂಪರ್ಕಕ್ಕೆ ಸಿಗದ ಬಹುತೇಕರನ್ನು ಪೊಲೀಸರ ನೆರವಿನಿಂದ ಪತ್ತೆ ಮಾಡಲಾಗಿದೆ. ಈ ನಡುವೆ ನಾಪತ್ತೆಯಾದವರಲ್ಲಿ ಕೆಲವರು ಬೆಂಗಳೂರಿನಿಂದ ನೆರೆಯ ರಾಜ್ಯಗಳಿಗೆ ಹೋಗಿರಬಹುದು ಎಂಬ ಹೇಳಿಕೆ ನೀಡುತ್ತಿದ್ದಾರೆ. ಇದಲ್ಲದೆ ನಾಪತ್ತೆಯಾದವರು ಬ್ರಿಟನ್ ವಿಳಾಸ ಹಾಗೂ ಅಲ್ಲಿನ ದೂರವಾಣಿ ಸಂಖ್ಯೆ ನೀಡಿರುವುದರಿಂದ ಪತ್ತೆ ಕಾರ್ಯಕ್ಕೆ ಹಿನ್ನಡೆಯಾಗಿದೆ.

**ಬ್ರಿಟನ್‌ನಿಂದ ಬಂದವರ ಪೈಕಿ 75 ಮಂದಿ ಪತ್ತೆಯಾಗಿಲ್ಲ. ಅವರನ್ನು ಪತ್ತೆ ಮಾಡಿಕೊಡುವಂತೆ ಗೃಹ ಸಚಿವರಿಗೆ ಮನವಿ ಮಾಡಿಕೊಂಡಿದ್ದೇವೆ. ಬಿಬಿಎಂಪಿಯವರಿಗೆ ಯಾವ ಮಾಹಿತಿ ಬಂದಿದೆ ಎಂಬುದು ತಿಳಿದಿಲ್ಲ. ಅವರು ಸೋಂಕಿತರ ಸಂಪರ್ಕಿತರನ್ನೂ ಸೇರಿಸಿ ಹೇಳುತ್ತಿರಬೇಕು.**

| **ಡಾ. ಕೆ. ಸುಧಾಕರ್** ಆರೋಗ್ಯ ಸಚಿವ

**121 ಮಂದಿ ನಾಪತ್ತೆ:** ಬಿಬಿಎಂಪಿ ಅಧಿಕಾರಿಗಳ ಮಾಹಿತಿ ಪ್ರಕಾರ, ವಲಸೆ ಪ್ರಾಧಿಕಾರ ಹಾಗೂ ವಿಮಾನ ನಿಲ್ದಾಣ ಒದಗಿಸಿದ ಮಾಹಿತಿ ಆಧರಿಸಿ ಸಂಪರ್ಕಕ್ಕೆ ಸಿಗದವರ ಹುಡುಕಾಟ ನಡೆಯುತ್ತಿದೆ. ಈ ಮಾಹಿತಿಯನ್ನು ವಲಯ ಆರೋಗ್ಯಾಧಿಕಾರಿಗಳಿಗೆ ಕಳುಹಿಸಿ, ಪತ್ತೆ ಮಾಡಲಾಗುತ್ತಿದೆ. ಅವರ ಮಾಹಿತಿಯನ್ನು ಗೃಹ ಇಲಾಖೆಗೂ ಕಳುಹಿಸಲಾಗಿದೆ. ರಾಜ್ಯಕ್ಕೆ ಬಂದವರಲ್ಲಿ 121 ಮಂದಿ ನಾಪತ್ತೆಯಾಗಿದ್ದಾರೆ. ಇವರಲ್ಲಿ ಹಲವರು ಡಿ.1ರಂದು ನಗರಕ್ಕೆ ಬಂದವರಾಗಿದ್ದಾರೆ. ಡಿ.2ರ ನಂತರ ಬಂದವರಲ್ಲಿ ಬಹುತೇಕರು ಪರೀಕ್ಷೆಗೆ ಒಳಪಟ್ಟಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

ರಾಜ್ಯದಲ್ಲಿ ಮೊದಲ ಹಂತದಲ್ಲಿ 1.68 ಲಕ್ಷ ಕರೊನಾ ಯೋಧರಿಗೆ ವ್ಯಾಕ್ಸಿನ್ | ಸಂಸದ ತೇಜಸ್ವಿ ಸೂರ್ಯ ಮಾಹಿತಿ

# ಎರಡನೇ ಹಂತದಲ್ಲಿ 2 ಲಕ್ಷ ಜನರಿಗೆ ಲಸಿಕೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜಧಾನಿಯಲ್ಲಿ ಕೋವಿಡ್ ಲಸಿಕೆ ವಿತರಣೆಯ ಮೊದಲ ಹಂತದಲ್ಲಿ 1.68 ಲಕ್ಷ ಹಾಗೂ ಎರಡನೇ ಹಂತದಲ್ಲಿ 2 ಲಕ್ಷ ಹಾಗೂ ಮೂರನೇ ಹಂತದಲ್ಲಿ 50 ವರ್ಷ ಮೇಲ್ಪಟ್ಟವರು ಮತ್ತು ದೀರ್ಘಕಾಲಿಕ ರೋಗವುಳ್ಳವರಿಗೆ ಲಸಿಕೆ ನೀಡಲಾಗುವುದು ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

ರಾಜ್ಯ ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಕರೊನಾ ಲಸಿಕೆ ಪಡೆಯುವವರು ಮತ್ತು ಹಂಚಿಕೆ ಮಾಡುವ ಕಾರ್ಯಕರ್ತರನ್ನು ಗುರುತಿಸಲಾಗಿದೆ.

» **ಹಗುರ ಮಾತಿನ ಬಗ್ಗೆ ಬೇಸರ**

ಮೊದಲ ಹಂತದಲ್ಲಿ 1.68 ಲಕ್ಷ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಕರೊನಾ ಯೋಧರಿಗೆ ನೀಡಲಾಗುತ್ತದೆ. 2ನೇ ಹಂತದಲ್ಲಿ ಪೊಲೀಸರು, ಪೌರಕಾರ್ಮಿಕರು, ಪಾಲಿಕೆ ಸಿಬ್ಬಂದಿ ಹಾಗೂ ಪತ್ರಕರ್ತರು ಸೇರಿ 2 ಲಕ್ಷ ಮಂದಿಗೆ ನೀಡಲಾಗುವುದು. 3ನೇ ಹಂತದಲ್ಲಿ 50 ವರ್ಷ ಮೀರಿದ ಮತ್ತು 50 ವರ್ಷದೊಳಗಿನ ಕೋಮಾರ್ಬಿಡ್‌ದಿಂದ (ದೀರ್ಘಕಾಲಿಕ ರೋಗ) ಬಳಲುವವರಿಗೆ ಲಸಿಕೆ ನೀಡಲು ಚಿಂತನೆ ಮಾಡಲಾಗಿದ್ದು, ಅವರ ಸಮೀಕ್ಷೆ ಕಾರ್ಯ ಶೀಘ್ರ ಆರಂಭವಾಗಲಿದೆ ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

**ಕೆಲವರ ಸಣ್ಣತನ ಪ್ರದರ್ಶನ:** ಜಾಗತಿಕ ಪೈಪೋಟಿಯ ನಡುವೆ ನಮ್ಮ ದೇಶದಲ್ಲಿಯೇ ಎರಡು ಸಂಸ್ಥೆಗಳು ಕೋವಿಡ್ ಲಸಿಕೆ ಸಂಶೋಧನೆ ಮಾಡಿದ್ದು, ಅವುಗಳ ಬಳಕೆಗೆ ಸರ್ಕಾರ ಅನುಮೋದನೆ ನೀಡಿದೆ. ಆದರೆ, ಉತ್ತರ ಪ್ರದೇಶದ ಮಾಜಿ ಸಿಎಂ ಅಖಿಲೇಶ್ ಯಾದವ್ ಕೋವಿಡ್ ಲಸಿಕೆಯನ್ನು ಬಿಜೆಪಿ ಲಸಿಕೆ ಎಂದು ಹೇಳಿ ಸಣ್ಣತನ ಪ್ರದರ್ಶನ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದ ಎಲ್ಲ ಜನಪ್ರತಿನಿಧಿಗಳು ಮತ್ತು ಮುಖಂಡರು ಲಸಿಕೆ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದ್ದು, ಸ್ವಾಗತಿಸಿದ್ದಾರೆ ಎಂದರು.

ನಂ.1 ವಿಜಯವಾಣಿ ದಿಗ್ವಿಜಯ 24X7 NEWS
ಇವರ ಸಹಯೋಗದೊಂದಿಗೆ
kannada matrimony
ವಧು ಅಥವಾ ವರರನ್ನು ಹುಡುಕಲು ಸಹಾಯ ಬೇಕೆ?
ನಮಗೆ ಕರೆ ಮಾಡಿ 70928 77888, ನೋಂದಣಿ ಉಚಿತ!



## ವದಂತಿಗಳನ್ನು ನಂಬಬೇಡಿ

**ಕೋವಿಡ್ ಲಸಿಕೆ ಬಂದ ನಂತರವೇ, ಜನಜೀವನ ಮೊದಲ ಸ್ಥಿತಿಗೆ ಬರಲು ಸಾಧ್ಯ. ಹಲವು ಬಾರಿ ಪ್ರಯೋಗ ಮಾಡಿ ಅಡ್ಡ ಪರಿಣಾಮವಿಲ್ಲ ಎಂದು ಸಾಬೀತಾದ ಮೇಲೆ ಸರ್ಕಾರ ಬಳಕೆಗೆ ಅನುಮೋದನೆ ನೀಡಿದೆ. ಯಾರೂ ಸುಳ್ಳು ಸುದ್ದಿ ನಂಬಬಾರದು. ಲಸಿಕೆ ಪಡೆಯಲು ನಗರದ ಕೆಲವು ಸಂಸ್ಥೆಗಳು ವ್ಯಾಕ್ಸಿನ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡಿಲ್ಲ. ಕೂಡಲೇ, ಅವರೆಲ್ಲ ಕೋವಿಡ್ ವ್ಯಾಕ್ಸಿನ್ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ತೇಜಸ್ವಿ ಸೂರ್ಯ ಹೇಳಿದರು.**

## ಬಿಬಿಎಂಪಿ ಶಾಲಾ-ಕಾಲೇಜು ಶಿಕ್ಷಕರಿಗಿಲ್ಲ ಕರೊನಾ

**ಬೆಂಗಳೂರು:** ಬಿಬಿಎಂಪಿಯ 64 ಶಾಲೆ-ಕಾಲೇಜುಗಳಲ್ಲಿ 447 ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಕರೊನಾ ಸೋಂಕು ದೃಢಪಟ್ಟಿಲ್ಲ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಜೆ. ಮಂಜುನಾಥ್ ತಿಳಿಸಿದ್ದಾರೆ. ಜ.1 ರಿಂದ 33 ಪ್ರೌಢಶಾಲೆಗಳು, 15 ಪದವಿ ಪೂರ್ವ ಕಾಲೇಜುಗಳಲ್ಲಿ ದಿನನಿತ್ಯ ತರಗತಿ ಹಾಗೂ 16 ಪ್ರಾಥಮಿಕ ಶಾಲೆಗಳಲ್ಲಿ 6 ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾಗಮ ತರಗತಿ ಆರಂಭಿಸಲಾಗಿದೆ. ಶಾಲೆಗೆ ಹಾಜರಾಗುವ ಮುನ್ನ 275 ಶಿಕ್ಷಕರು ಹಾಗೂ 172 ಉಪನ್ಯಾಸಕರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಯಾರೊಬ್ಬರಿಗೂ ಸೋಂಕು ದೃಢಪಟ್ಟಿಲ್ಲ. ಎಲ್ಲ ತರಗತಿಗಳು ಸುಸೂತ್ರವಾಗಿ ನಡೆಯುತ್ತಿವೆ ಎಂದು ಮಾಹಿತಿ ನೀಡಿದ್ದಾರೆ. ಶಾಲೆಗೆ ಆಗಮಿಸುವ ಮಕ್ಕಳಿಗೆ ಥರ್ಮಲ್ ಸ್ಕ್ರೀನಿಂಗ್ ಮಾಡಿ, ಕೈಗಳಿಗೆ ಸ್ಯಾನಿಟೈಸರ್ ಹಾಕಲಾಗುತ್ತಿದೆ. ಕೋಣೆಗೆ 15 ರಿಂದ 20 ಮಕ್ಕಳನ್ನು ಕೂರಿಸಿ ಬೋಧಿಸಲಾಗುತ್ತಿದೆ. ಕೋವಿಡ್ ಮಾರ್ಗಸೂಚಿಗಳ ಪಾಲನೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ಹೇಳಿದ್ದಾರೆ.

» **ಬೋಧನೆ ಸುಸೂತ್ರ**

## ನೇರ ಸಂಪರ್ಕದ ಮಹಿಳೆಗೆ ರೂಪಾಂತರಿ ದೃಢ

**ಬೆಂಗಳೂರು:** ಸಿಲಿಕಾನ್ ಸಿಟಿಯಲ್ಲಿ ಬ್ರಿಟನ್‌ನಿಂದ ಬಂದ ರೂಪಾಂತರ ಕರೊನಾ ಸೋಂಕು ದೃಢಪಟ್ಟ ಶಿವಮೊಗ್ಗದ ಪ್ರಯಾಣಿಕರ ನೇರ ಸಂಪರ್ಕದಲ್ಲಿದ್ದ 53 ವರ್ಷದ ಮಹಿಳೆಗೂ ಮಂಗಳವಾರ ರೂಪಾಂತರಿ ಕರೊನಾ ಸೋಂಕು ದೃಢಪಟ್ಟಿದೆ.

ಬ್ರಿಟನ್‌ನಿಂದ ವಾಪಸಾಗಿದ್ದ ಶಿವಮೊಗ್ಗದ ನಾಲ್ಕು ಪ್ರಯಾಣಿಕರಿಗೆ ರೂಪಾಂತರಿ ಕರೊನಾ ಸೋಂಕು ದೃಢಪಟ್ಟಿತ್ತು. ಈ ವ್ಯಕ್ತಿಗಳ ಸಂಪರ್ಕಕ್ಕೆ ಬಂದಿದ್ದ ಮಹಿಳೆ ಎಲೆಕ್ಟ್ರಾನಿಕ್ ಸಿಟಿಯಲ್ಲಿ ವಾಸವಿದ್ದರು. ಅವರಿಗೆ ಆರ್‌ಟಿಪಿಸಿಆರ್ ಮತ್ತು ವಿಶೇಷ ಪರೀಕ್ಷೆಯಲ್ಲಿ ರೂಪಾಂತರ ಕೋವಿಡ್ ಸೋಂಕು ಕಾಣಿಸಿಕೊಂಡಿದೆ. ಈಗಾಗಲೇ ಅವರು ಕ್ವಾರಂಟೈನ್‌ನಲ್ಲಿದ್ದಾರೆ.

» **ಶಿವಮೊಗ್ಗದ ಸೋಂಕಿತರೊಂದಿಗೆ ಸಂಪರ್ಕ**

ವಿಶ್ವವಾಣಿ

# ಕೋವಿಡ್ ಲಸಿಕೆ ಪಡೆವ ವಿಧಾನ: ಏನು, ಎತ್ತ?

ಕೇಂದ್ರ ಸರಕಾರವು ಈಗಾಗಲೇ ಎರಡು ಕರೋನಾ ಲಸಿಕೆಗಳಿಗೆ ಅನುಮೋದನೆ ನೀಡಿದೆ. ಜತೆಗೆ, ಲಸಿಕೆ ನೀಡುವ ಅಣಕು ಕಾರ್ಯಾಚರಣೆಯನ್ನೂ ನಡೆಸಿದೆ. ಲಸಿಕೆ ಸಿದ್ಧವಾದ ಹತ್ತು ದಿನಗಳಲ್ಲಿ ಜನಸಾಮಾನ್ಯರಿಗೆ ಲಸಿಕೆ ವಿತರಿಸಲು ಸಿದ್ಧ ಎಂದು ಆರೋಗ್ಯ ಸಚಿವಾಲಯ ಕೂಡ ಹೇಳಿದೆ. ಈ ಹಿನ್ನೆಲೆಯಲ್ಲಿ ಲಸಿಕೆ ಪಡೆಯುವ ವಿಧಾನದ ಕುರಿತು ಪ್ರಶ್ನೋತ್ತರ ರೂಪದ ಮಾಹಿತಿ ಇಲ್ಲಿದೆ.

### ರಿಜಿಸ್ಟರ್ ಮಾಡದೆಯೇ ವ್ಯಾಕ್ಸೀನ್ ಪಡೆಯಬಹುದೆ?

- ನೊಂದಣಿ ಮಾಡಿಕೊಳ್ಳುವುದು ಕಡ್ಡಾಯ. ನಂತರವೇ ನಿಮಗೆ ಲಸಿಕೆ ನೀಡುವ ಸಮಯ, ದಿನಾಂಕ ನಿಗದಿಯಾಗಲಿದೆ.

### ಲಸಿಕೆ ಪಡೆಯುವವರು ಲಸಿಕೆ ಸಿಗುವ ದಿನಾಂಕದ ಬಗ್ಗೆ ಹೇಗೆ ತಿಳಿದುಕೊಳ್ಳುತ್ತಾರೆ?

- ಲಸಿಕೆ ಪಡೆಯುವ ದಿನಾಂಕ, ಸ್ಥಳ ಮತ್ತು ಸಮಯವನ್ನು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿದ ನಂತರ ರಿಜಿಸ್ಟರ್ ಆದ ಮೊಬೈಲಿಗೆ ಎಸ್‌ಎಂಎಸ್ ಮೂಲಕ ಮಾಹಿತಿ ಬರಲಿದೆ.

### ಲಸಿಕೆ ಪಡೆಯುವ ವೇಳೆ ಫೋಟೋ ಐಡಿ ಇರಲೇಬೇಕೆ?

- ಹೌದು. ಲಸಿಕೆ ಪಡೆದವರ ಬಗ್ಗೆ ನಿಖರ ಮಾಹಿತಿ ಸಂಗ್ರಹಿಸುವ ಕಾರಣ, ಫೋಟೋ ಐಡಿ ಕಡ್ಡಾಯವಾಗಿ ನೀಡಬೇಕು.

### ಯಾವ ಮಾಹಿತಿಗಳನ್ನು ಒದಗಿಸಿಬೇಕು.

ಈ ಕೆಳಗಿನ ಯಾವುದಾದರೂ ಐಡಿಗಳಾದರೂ ಇರಲೇಬೇಕು



- ಡ್ರೈವಿಂಗ್ ಲೈಸೆನ್ಸ್/ ವೋಟರ್ ಐಡಿ/ ಪ್ಯಾನ್ ಕಾರ್ಡ್/ ಪಾಸ್‌ಪೋರ್ಟ್/ ಜಾಬ್ ಕಾರ್ಡ್/ ಪೆನ್ಷನ್ ಡಾಕ್ಯುಮೆಂಟ್
- ಕಾರ್ಮಿಕ ಇಲಾಖೆಯಿಂದ ನೀಡಿರುವ ಹೆಲ್ತ್ ಇನ್ಸುರೆನ್ಸ್ ಸ್ಮಾರ್ಟ್ ಕಾರ್ಡ್
- ನರೇಗಾ ಯೋಜನೆಯ ಕೆಲಸದ ಕಾರ್ಡ್
- ಸಂಸದ, ಶಾಸಕರ ಅಧಿಕೃತ ಐಡಿ ಕಾರ್ಡ್
- ಬ್ಯಾಂಕ್ ಮತ್ತು ಪೋಸ್ಟ್ ಆಫೀಸ್‌ಗಳಲ್ಲಿ ನೀಡಿರುವ ಪಾಸ್‌ಬುಕ್
- ಕೇಂದ್ರ, ರಾಜ್ಯ, ಪಬ್ಲಿಕ್ ಸೆಕ್ಟರ್ ಕಂಪನಿಯ ಉದ್ಯೋಗಿಗಳಾಗಿದ್ದರೆ, ಅದರ ಸರ್ವಿಸ್ ಐಡಿ ಕಾರ್ಡ್.

### ಎಷ್ಟು ಡೋಸ್ ವ್ಯಾಕ್ಸೀನ್ ಪಡೆದುಕೊಳ್ಳಬೇಕು ಮತ್ತು ಯಾವಾಗ ತೆಗೆದುಕೊಳ್ಳಬೇಕು?

- ಎರಡು ಡೋಸ್‌ಗಳಲ್ಲಿ ಲಸಿಕೆಯನ್ನು 28 ದಿನಗಳ ಅಂತರದಲ್ಲಿ ನೀಡಲಾಗುತ್ತದೆ.



### ಲಸಿಕೆ ಪಡೆದ ನಂತರ ಏನು ಮಾಡಬೇಕು?

- ಲಸಿಕೆ ಪಡೆದು ಅರ್ಧ ಗಂಟೆ ಕೇಂದ್ರದಲ್ಲೇ ವಿಶ್ರಾಂತಿ ಪಡೆಯಬೇಕು.
- ನಿಮಗೇನಾದರೂ ತೊಂದರೆ ಎನಿಸಿದರೆ ಕೇಂದ್ರದ ಕಾರ್ಯಕರ್ತರಿಗೆ ತಿಳಿಸಬೇಕು.
- ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ, ಸ್ಯಾನಿಟೈಸರ್ ಬಳಕೆ ನಿರ್ಲಕ್ಷಿಸಬೇಡಿ.

### ಲಸಿಕೆ ಪಡೆದ ನಂತರವೂ ಬೇರೇನು ಮಾಹಿತಿ ಸಿಗುತ್ತದೆ?

- ವ್ಯಾಕ್ಸೀನ್ ಪಡೆದ ನಂತರ ಎಷ್ಟು ಡೋಸ್ ಲಸಿಕೆ ನೀಡಲಾಯಿತು ಎಂಬ ಮಾಹಿತಿ ಮೊಬೈಲ್ ನಂಬರಿಗೆ ಬರಲಿದೆ. ಎಲ್ಲ ಕೋರ್ಸ್‌ಗಳು ಮುಗಿದ ನಂತರ ಕ್ಯೂ ಆರ್ ಕೋಡ್ ತಂತ್ರಜ್ಞಾನದ ಇ-ಸರ್ಟಿಫಿಕೇಟ್ ಕಳಿಸಲಾಗುತ್ತದೆ.

### ಕರೋನಾ ಲಸಿಕೆಯಿಂದ ಆಗಬಹುದಾದ ಸಂಭಾವ್ಯ ಅಡ್ಡಪರಿಣಾಗಳೇನು?

- ಇತರ ವ್ಯಾಕ್ಸೀನ್‌ಗಳಂತೆ ಇದರಲ್ಲೂ ಸಾಮಾನ್ಯ ಜ್ವರ, ಚಳಿ,ಇಂಜೆಕ್ಷನ್ ಚುಚ್ಚಿದ ಜಾಗದಲ್ಲಿ ನೋವು ಕಾಣಿಸಬಹುದು.
- ಒಂದೊಮ್ಮೆ ಅಡ್ಡ ಪರಿಣಾಮವಾದರೆ, ಆಯಾ ರಾಜ್ಯಗಳಿಗೆ ಆ ಬಗ್ಗೆ ಕೂಡಲೇ ಕ್ರಮ ವಹಿಸಲು ಕೇಂದ್ರ ಸರಕಾರ ಸೂಚನೆ ನೀಡಿದೆ.

### ರೋಗ ಪ್ರತಿರೋಧಕಗಳು ಯಾವಾಗ ಉತ್ಪತ್ತಿಯಾಗುತ್ತವೆ?

- ಎರಡನೇ ಡೋಸ್ ಲಸಿಕೆ ಪಡೆದ ಎರಡು ವಾರಗಳಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಯಾಗಲಿದೆ.

### ಕ್ಯಾನ್ಸರ್, ಹೈಪರ್‌ಟೆನ್ಷನ್‌ನಂಥ ಕಾಯಿಲೆಗಳಿಗೆ ಔಷಧ ಪಡೆಯುತ್ತಿದ್ದವರೂ ಕರೋನಾ ಲಸಿಕೆ ಪಡೆಯಬಹುದೇ?

- ಧೈರ್ಯವಾಗಿ ಕರೋನಾ ಲಸಿಕೆ ಪಡೆಯಬಹುದು. ಇಂತಹವರನ್ನು 'ಹೈ ರಿಸ್ಕ್' ಎಂದು ವಿಂಗಡಣೆ ಮಾಡಿರುವ ಕಾರಣ ಲಸಿಕೆ ಪಡೆಯುವುದೇ ಉತ್ತಮ.

### ಆರೋಗ್ಯ ಕಾರ್ಯಕರ್ತರ ಕುಟುಂಬಗಳಿಗೆ ಲಸಿಕೆ ಸಿಗಲಿದೆಯೇ?

- ಲಸಿಕೆಯ ಲಭ್ಯತೆ ಆರಂಭದಲ್ಲಿ ಕಡಿಮೆ ಇರುವ ಕಾರಣ, ತುರ್ತು ಇರುವವರಿಗೆ ಲಸಿಕೆ ಕೊಡಲಾಗುತ್ತದೆ. ಕ್ರಮೇಣ ಎಲ್ಲರಿಗೂ ಲಸಿಕೆ ದೊರೆಯಲಿದೆ.

ವಿಶ್ವವಾಣಿ

## ಬ್ರಿಟನ್ ಸೋಂಕು ಸಾವು ತರುವುದಿಲ್ಲ। ಹಾಗೆಂದು ಮೈ ಮರೆಯುವಂತಿಲ್ಲ

# ಕರೋನಾ ಎರಡನೇ ಅಲೆ ಏಳುವುದೇ ಇಲ್ಲ

**ಶಿವಕುಮಾರ್ ಬೆಳ್ಳಿತಟ್ಟೆ** ಬೆಂಗಳೂರು

ಬಹು ಜನರನ್ನು ಬೆಚ್ಚಿ ಬೀಳಿಸಿರುವ ಬ್ರಿಟನ್ ವೈರಸ್‌ನ ಬೆನ್ನ ಹಿಂದೆಯೇ ಕರೋ ನಾ ಎರಡನೇ ಅಲೆ ಎದ್ದೇಳುತ್ತದೆ ಎನ್ನುವುದನ್ನು ವೈದ್ಯ ಲೋಕ ತಳ್ಳಿ ಹಾಕಿದೆ.

ದೇಶದಲ್ಲಿ ಕರೋನಾ ಎರಡನೇ ಅಲೆ ಬರುವ ಸಾಧ್ಯತೆ ಇಲ್ಲವೇ ಇಲ್ಲ, ಈಗಾಗಲೇ ಬಂದಿರುವ ಬ್ರಿಟನ್ ವೈರಸ್ ಕೂಡ ಹೆಚ್ಚು ಕಾಲ ಉಳಿಯಲಾರದು. ಸದ್ಯ ಜನರನ್ನು ಅಲ್ಪಸ್ವಲ್ಪ ಕಾಡುತ್ತಿರುವ ಕರೋನಾ ಸೋಂಕು ಕೂಡ ಸದ್ಯದಲ್ಲೇ ದೂರವಾಗುವ ಲಕ್ಷಣಗಳು ಗೋಚರವಾಗುತ್ತಿವೆ ಎಂದು ವೈದ್ಯ ಲೋಕ ಹೇಳುತ್ತಿದೆ. ಹಾಗಂತ ಸಾಮಾ ಜಿಕ ಅಂತರ ಮತ್ತು ಮಾಸ್ಕ್ ಮರೆತರೆ ಅದೇ ಎರಡನೇ ಅಲೆಯಾಗಿ ಅಪ್ಪಳಿಸಬಹುದು ಎಂದು ತಜ್ಞವೈದ್ಯರು ಎಚ್ಚರಿಸಿದ್ದಾರೆ.

ಹೌದು, ದೇಶದಲ್ಲಿ ಕರೋನಾ ಬಡಿದೋಡಿಸುವ ಲಸಿಕೆಗಳ ಡ್ರೈರನ್ ಆರಂಭವಾಗಿದೆ. ಇದನ್ನು ಅಣಕಿಸುವಂತೆ ಬ್ರಿಟನ್‌ನ ಹೊಸ ವೈರಸ್ ಕೂಡ ಲಗ್ಗೆ ಹಾಕಿದೆ. ಅಂದಹಾಗೆ ಈ ರೂಪಾಂತರ ಸೋಂಕು ರಾಜ್ಯಕ್ಕೂ ಕಾಲಿಟ್ಟಿದ್ದು, ಈಗಾಗಲೇ 10ಕ್ಕೂ ಹೆಚ್ಚು ಮಂದಿಯನ್ನು ಬಾಧಿಸುತ್ತಿದೆ. ಇದರಿಂದ ಜನತೆಯಲ್ಲಿ ಕರೋನಾ ಎರಡನೇ ಅಲೆ ಹೊಸ ರೀತಿಯ ವೈರಸ್ ಮೂಲಕ ಅಪ್ಪಳಿಸಬಹುದು ಎಂಬ ಆತಂಕ ಶುರುವಾಗಿತ್ತು. ಇದನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ವಿವಿಧ ವಿಭಾಗಗಳ ತಜ್ಞವೈದ್ಯರು ಕರೋನಾ ಎರಡನೇ ಅಲೆಯನ್ನು ಅಲ್ಲಗಳೆದಿದ್ದಾರೆ. ರಾಜ್ಯ ದಲ್ಲಿ ರುವ ಕರೋನಾ ಸೋಂಕು ಇನ್ನೂ ಕ್ಷೀಣಿಸ ಲಿದ್ದು, ಹೊಸದಾಗಿ ಬಂದಿರುವ ಬ್ರಿಟನ್ ಸೋಂಕು ಕೂಡ ಹೆಚ್ಚು ಕಾಲ ಉಳಿಯು ವುದಿಲ್ಲ ಎಂದಿದ್ದಾರೆ. ಆದರೆ ಲಸಿಕೆ ಪ್ರಯೋಜನಕ್ಕಿಂತ ಅಡ್ಡ ಪರಿಣಾಮಗಳ ಬಗ್ಗೆ ಆತಂಕಗೊಳ್ಳುತ್ತಿರುವ ತಜ್ಞರು ಲಸಿಕೆ ಯಿಂದ ಸೋಂಕು ಸಂಪೂರ್ಣ ನಿವಾರಣೆ ಯಾಗುತ್ತದೆ ಎಂದು ಹೇಳಲು ಹಿಂಜರಿಯುತ್ತಿದ್ದಾರೆ.

### ಎರಡನೇ ಅಲೆ ಏಕೆ ಬರುವುದಿಲ್ಲ?

ಯೂರೋಪಿಯನ್ ದೇಶಗಳಲ್ಲಿ ಕರೋನಾ ಸೋಂಕು ಕುಸಿತ ಕಂಡ 60 ದಿನಗಳಲ್ಲಿ ಹೆಚ್ಚಾಗುತ್ತಾ ಹೋಗಿದೆ. ಆದರೆ ನಮ್ಮಲ್ಲಿ ಇಳಿಕೆ ಆರಂಭವಾಗಿ 30 ದಿನಗಳಿಗೂ ಹೆಚ್ಚಾಗಿದ್ದರೂ ಎರಡನೇ ಅಲೆ ಸೂಚನೆ ಇಲ್ಲ. ಕಾರಣ ದೇಶದಲ್ಲಿ ಶೇ.90ರಷ್ಟು ಜನ ಸೋಂಕಿಗೆ ಎಕ್ಸ್‌ಪೋಸ್ ಆಗಿದ್ದಾರೆ. ಆದರೆ ವಿದೇಶಗಳ ಪರಿಸ್ಥಿತಿಯೇ ಬೇರೆಯೇ ಆಗಿರುತ್ತದೆ. ಸಾಮಾನ್ಯವಾಗಿ ಉಸಿರಾಟ ಸಂಬಂಧಿ ಕಾಯಿಲೆಗಳು ಮತ್ತು ಸೋಂಕು ಹೆಚ್ಚಾಗುವುದು ಚಳಿಗಾಲದಲ್ಲಿ. ಅದು ಡಿಸೆಂಬರ್ ಎಂದರೆ ಚಳಿಗಾಲದ ಪೀಕ್ ಸಮಯವಾದ್ದರಿಂದ ಇಷ್ಟೊತ್ತಿಗಾಗಲೇ ಹೆಚ್ಚಾಗಿ ಎರಡನೇ ಅಲೆಯಲ್ಲಿ ಸಾಕಷ್ಟು ಸಾವು, ಸಮಸ್ಯೆಗಳು ಕಾಣಿಸಿಕೊಳ್ಳಬೇಕಿತ್ತು. ಆದರೆ ಆ ಸೂಚನೆ ಇಲ್ಲವೇ ಇಲ್ಲ. ಇನ್ನು ಜನವರಿ ಅಂತ್ಯಕ್ಕೆ ಚಳಿಗಾಲವೇ ಮುಗಿಯುತ್ತದೆ. ಆಗ ಇಂಥ ಸೋಂಕುಗಳು ಹೆಚ್ಚಾಗುವ ಸಾಧ್ಯತೆ ತೀರಾ ಕಡಿಮೆ. ಹೀಗಾಗಿ ಎರಡನೇ ಅಲೆ ಸಾಧ್ಯತೆ ಇಲ್ಲ ಎನ್ನುತ್ತಾರೆ ಕೋವಿಡ್ ಕೇಂದ್ರಗಳ ನೋಡಲ್ ಅಧಿಕಾರಿ, ತಜ್ಞವೈದ್ಯ ಡಾ.ಶ್ರೀನಿವಾಸ್.

### ಶೇ.98 ಜನರಿಗೆ ಕರೋನಾ ಏನೂ ಮಾಡಿಲ್ಲ

ಇದೆಲ್ಲದಕ್ಕಿಂತ ಮುಖ್ಯವಾಗಿ ಕರೋನಾ ಕಾಲದಲ್ಲಿ ಜನರು ಕಷಾಯ ಮತ್ತು ಊಟ ಪದ್ಧತಿ ಸೇರಿದಂತೆ ಜೀವನ ಕ್ರಮವನ್ನು ಸಾಕಷ್ಟು ಬದಲಿಸಿಕೊಂಡಿದ್ದಾರೆ. ಈ ಮೂಲಕ ಸಾಕಷ್ಟು ರೋಗ ನಿರೋಧಕ ಶಕ್ತಿಯನ್ನೂ ತಂದುಕೊಂಡಿದ್ದಾರೆ. ಹೀಗಾಗಿಯೇ ರಾಜ್ಯದಲ್ಲಿ 7ಕೋಟಿ ಜನಸಂಖ್ಯೆಯಲ್ಲಿ 9 ಲಕ್ಷ ಜನರಿಗೆ ಕರೋನಾ ಸೋಂಕು ಬಂದಿದ್ದರೂ ಸಾವಿನ ಪ್ರಮಾಣ ತೀರಾ ಕಡಿಮೆ. ಅಂದರೆ ಶೇ.98ಕ್ಕೂ ಜನರಿಗೆ ಸೋಂಕು ಏನೂ ಮಾಡಲೇ ಇಲ್ಲ ಎನ್ನುತ್ತಾರೆ ತಜ್ಞವೈದ್ಯರು. ಈ ಮಧ್ಯೆ, ಖ್ಯಾತ ಆಯುರ್ವೇದ ತಜ್ಞ ಡಾ. ಗಿರಿಧರ್ ಕಜೆ ಅವರು, ರಾಜ್ಯದಲ್ಲಿ 5ಲಕ್ಷಕ್ಕೂ ಹೆಚ್ಚು ಮಂದಿ ನಮ್ಮ ಆಯುರ್ವೇದ ಔಷಧಗಳು ಮತ್ತು ಕಷಾಯ ಸೂತ್ರಗಳಿಂದಲೇ ಗುಣವಾಗಿದ್ದಾರೆ. ಅಂದರೆ ಇವರೆಲ್ಲಾ ಲಸಿಕೆ ಇಲ್ಲದೆ ಸೋಂಕು ತಡೆದಿದ್ದಾರೆ ಎನ್ನುತ್ತಾರೆ.

### ಬ್ರಿಟನ್ ಸೋಂಕು ಬದುಕುವುದಿಲ್ಲ

ಬ್ರಿಟನ್‌ನಲ್ಲಿ ಸೋಂಕು ಹೆಚ್ಚಾಗುತ್ತಿದ್ದು, ಭಾರತಕ್ಕೂ ಕಾಲಿಟ್ಟಿದೆ. ರಾಜ್ಯದಲ್ಲೂ ಈ ಸೋಂಕು 10ಮಂದಿಯನ್ನು ಬಾಧಿಸುತ್ತಿದ್ದು, ಈ ಬ್ರಿಟನ್ ಸೋಂಕು ಸಾವು ಹೆಚ್ಚಿಸುತ್ತದೆ ಎನ್ನುವುದಕ್ಕಿಂತ ಹೆಚ್ಚು ವೇಗವಾಗಿ ಹರಡುತ್ತದೆ ಎನ್ನಲಾಗುತ್ತಿದೆ. ಆದರೆ ಇದು ಹಿಂದಿನ ಸೋಂಕಿನಷ್ಟು ತೀವ್ರತೆ ಇಲ್ಲ. ಏಕೆಂದರೆ, ಸಾಮಾನ್ಯ ವೈರಸ್‌ಗಳ ಸ್ವರೂಪ ಪ್ರತಿ ಆರು ತಿಂಗಳಿಗೆ ಬದಲಾಗುತ್ತಾ ಹೋಗುತ್ತದೆ. ಆದ್ದರಿಂದ ಈ ಸೋಂಕು ಹೆಚ್ಚು ಪ್ರಬಲವಾಗಿರುವುದಿಲ್ಲ. ಅಷ್ಟೇ ಅಲ್ಲದೆ, ಬ್ರಿಟನ್ ಸೋಂಕು ಕಳೆದ ಸೆಪ್ಟೆಂಬರ್ ನಲ್ಲೇ ಆಫ್ರಿಕಾ ಸೇರಿದಂತೆ ಅನೇಕ ದೇಶಗಳಲ್ಲಿ ಕಾಣಿಸಿಕೊಂಡಿದ್ದು, ಇದು ತೀವ್ರವಾಗಿ ಹರಡುವುದೇ ವಿನಃ ಹೆಚ್ಚು ಸಾವು ತರುವುದಿಲ್ಲ ಎಂದು ವೈದ್ಯರು ಹೇಳುತ್ತಿದ್ದಾರೆ.

ಕರೋನಾ ಎರಡನೇ ಅಲೆ ಇರುವುದಿಲ್ಲ. ಒಂದೊಮ್ಮೆ ಸೋಂಕು ಹೆಚ್ಚಾದರೆ ಅದಕ್ಕೆ ಏನು ಮಾಡಬೇಕೆಂದು ವೈದ್ಯ ಲೋಕಕ್ಕೆ ಗೊತ್ತಿದೆ. ಆಸ್ಪತ್ರೆಗಳೂ ಸಿದ್ಧವಾಗಿದೆ. ಜನರೂ ಸಿದ್ಧವಾಗಿದ್ದಾರೆ. ಅಂದರೆ ಸೋಂಕು ಹೆಚ್ಚಾದರೂ ಅದನ್ನು ಎರಡನೇ ಅಲೆ ಎನ್ನಲಾಗದು.

- ಡಾ.ಬಿ.ಎಸ್.ಸುಧೀರ್ ತಜ್ಞ ವೈದ್ಯರು

ದೇಶದ ಬಹುತೇಕ ಜನರು ಈಗಾಗಲೇ ಸೋಂಕಿಗೆ ಹೊಂದುಕೊಳ್ಳುವಷ್ಟು ರೋಗ ನಿರೋಧಕ ಶಕ್ತಿ ಹೊಂದಿದ್ದಾರೆ. ಹೀಗಾಗಿ ದೇಶಕ್ಕೆ ಕರೋನಾ ಎರಡನೇ ಅಲೆ ಬರುತ್ತದೆ ಎನ್ನುವುದು ನಂಬಲಿಕ್ಕೆ ಸಾಧ್ಯವಿಲ್ಲದ ಮಾತು.

-ಡಾ.ಗಿರಿಧರ್ ಕಜೆ ಆಯುರ್ವೇದ ತಜ್ಞ ವೈದ್ಯರು

ಸೋಂಕು ಕಡಿಮೆ ಯಾಗುತ್ತಿದೆ ಎಂದು ಜನರು ಮೈಮರೆಯಬಾರದು. ಗುಂಪು ಸೇರಬಾರದು. ಮಾಸ್ಕ್ ಮರೆಯಬಾರದು. ಲಸಿಕೆ ಬಂದರೂ ಆಲಕ್ಷ್ಯ ಮಾಡ ಬಾರದು. ಈ ಜಾಗ್ರತೆ ಇನ್ನೂ ಮೂರ್ನಾಲ್ಕು ತಿಂಗಳ ವರೆಗೂ ಇರಬೇಕು.

-ಡಾ.ಸಿ.ಎನ್.ಮಂಜುನಾಥ್ ಆರೋಗ್ಯ ಕಾರ್ಯಪಡೆ ಮುಖಂಡರು

ವಿಶ್ವವಾಣಿ

ಹಂತ ಹಂತವಾಗಿ ಹಸ್ತಾಂತರ ಮಾಡಲು ನಿರ್ಧಾರ । ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಹೇಳಿಕೆ

# ಬಿಬಿಎಂಪಿಗೆ ಬಿಡಿಎ ಪಾರ್ಕ್‌ಗಳ ಹಸ್ತಾಂತರ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಬಿಡಿಎಗೆ ಸೇರಿರುವ ಪಾರ್ಕ್‌ಗಳನ್ನು ಬಿಬಿಎಂಪಿ ಗೆ ಹಸ್ತಾಂತರಿಸುವ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಎಸ್‌ಆರ್ ವಿಶ್ವನಾಥ್ ತಿಳಿಸಿದರು.



ಮಂಗಳವಾರ ಬಿಡಿಎ ತೋಟಗಾರಿಕೆ ಮತ್ತು ಅರಣ್ಯ ವಿಭಾಗದ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿ, ಇನ್ನು ಮುಂದೆ ಬಿಡಿಎಗೆ ಸೇರಿದ ಬಡಾವಣೆಗಳಲ್ಲಿ ಇದುವರೆಗೆ ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ಉದ್ಯಾನಗಳನ್ನು ಹಂತಹಂತವಾಗಿ ಬಿಬಿಎಂಪಿಗೆ ಹಸ್ತಾಂತರ ಮಾಡಲು ನಿರ್ಧರಿಸಲಾಗಿದೆ.

ಇದಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಮ್ಮತಿ ಸೂಚಿಸಿದ್ದಾರೆ.ಈಗಾಗಲೇ ಅಭಿವೃದ್ಧಿಪಡಿಸಿರುವ ಕೆಲವು ಪಾರ್ಕ್‌ಗಳನ್ನು ಬಿಡಿಎ ತನ್ನ ಸುಪರ್ದಿಯಲ್ಲಿಟ್ಟುಕೊಂಡು ನಿರ್ವಹಣೆ ಮಾಡುತ್ತಿದ್ದು, ಬಹುತೇಕ ಪಾರ್ಕ್ ಗಳನ್ನು ಬಿಬಿಎಂಪಿಗೆ ಹಸ್ತಾಂತರ ಮಾಡಲಾಗುತ್ತಿದೆ.

## ಕ್ರಿಮಿನಲ್ ಪ್ರಕರಣ ದಾಖಲಿಸಲು ಸೂಚನೆ

**ಬಿಡಿಎನಿಂದ ಅನುಮೋದನೆ ಪಡೆದ ಬಡಾವಣೆಗಳಲ್ಲಿ ನಾಗರಿಕ ಉದ್ದೇಶಗಳಿಗೆಂದು ಮೀಸಲಾಗಿರುವ ಜಾಗವನ್ನು ಅನ್ಯ ಉದ್ದೇಶಕ್ಕೆ ಬಳಸಿಕೊಂಡಿರುವ ವಸತಿ ಸಹಕಾರ ಸಂಘಗಳು ಸೇರಿದಂತೆ ಇನ್ನಿತರೆ ಸಂಘಸಂಸ್ಥೆಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಮತ್ತು ಅಗತ್ಯವಿದ್ದರೆ ಜಾಗವನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.**

ಇವುಗಳಲ್ಲಿ ಬಿಡಿಎ ಅಭಿವೃದ್ಧಿಪಡಿಸಿರುವ ಪಾರ್ಕ್ ಗಳು ಮತ್ತು ಅಭಿವೃದ್ಧಿ ಮಾಡಬೇಕಾಗಿರುವ ಪಾರ್ಕ್ ನಿರ್ಮಾಣಕ್ಕೆ ಮೀಸಲಾಗಿರುವ ಜಾಗಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಲಾಗುತ್ತದೆ ಎಂದರು.

ಇದಕ್ಕೆ ಸಂಬಂಧಿಸಿದಂತೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ ಅವರು, ಸದ್ಯದಲ್ಲೇ ಬಿಬಿಎಂಪಿ ಆಯುಕ್ತರೊಂದಿಗೆ ಮತ್ತೊಂದು ಸುತ್ತಿನ ಚರ್ಚೆ ನಡೆಸಲಾಗುತ್ತದೆ ಎಂದು ತಿಳಿಸಿದರು.

**ಟ್ರೀ ಪಾರ್ಕ್ ನಿರ್ಮಾಣಕ್ಕೆ ಒತ್ತು**

ಇನ್ನು ಮುಂದೆ ಬಿಡಿಎ ಅನುಮೋದಿತ ಪಾರ್ಕ್ ಗಳನ್ನು ಟ್ರೀಪಾರ್ಕ್ ಗಳನ್ನಾಗಿ ಅಭಿವೃದ್ಧಿಪಡಿಸಲಾಗುತ್ತದೆ.

ಇದರಲ್ಲಿ ದೀರ್ಘಕಾಲೀನವಾಗಿ ಬೆಳೆಯುವ ಮರಗಳನ್ನು ಬೆಳೆಸುವುದು, ಪಾದಚಾರಿ ಮಾರ್ಗ, ವಾಯು ವಿಹಾರಿಗಳಿಗೆ ಕುಳಿತುಕೊಳ್ಳಲು ಬೆಂಚುಗಳು, ಜಾಗದ ಲಭ್ಯತೆಯ ಆಧಾರದಲ್ಲಿ ಮಕ್ಕಳ ಚಟುವಟಿಕೆಗಳಿಗೆ ಅವಕಾಶ ಸೇರಿದಂತೆ ಇತರೆ ಸೌಕರ್ಯಗಳನ್ನು ಒದಗಿಸಲಾಗುತ್ತದೆ ಎಂದರು.

**ಖಾಸಗಿ ಸಹಭಾಗಿತ್ವದಲ್ಲಿ ಪಾರ್ಕ್ ಅಭಿವೃದ್ಧಿ**

ಪಾರ್ಕ್‌ಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಚಿಂತಿಸಲಾಗಿದ್ದ, ಸದ್ಯದಲ್ಲಿಯೇ ಕಂಪನಿಗಳು ಮತ್ತು ಬಿಲ್ಡರ್‌ಗಳಿಗೆ ಪತ್ರ ಬರೆದು ಇಂತಿಷ್ಟು ಪಾರ್ಕ್‌ಗಳನ್ನು ವಹಿಸಿಕೊಂಡು ಅವುಗಳ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ಕೋರಲಾಗುತ್ತದೆ ಎಂದು ತಿಳಿಸಿದರು.

ವಿಶ್ವವಾಣಿ

# ಎಲೆಕ್ಟ್ರಾನಿಕ್ ಸಿಟಿಯಲ್ಲಿ ಬ್ರಿಟನ್ ವೈರಸ್

**ಬೆಂಗಳೂರು:** ಎಲೆಕ್ಟ್ರಾನಿಕ್ ಸಿಟಿ ಬ್ರಿಟನ್ ವೈರಸ್‌ನಿಂದಾಗಿ ಸುದ್ದಿಯಲ್ಲಿದೆ. ಬ್ರಿಟನ್‌ನಿಂದ ಬಂದಿದ್ದ ವ್ಯಕ್ತಿಗೆ ವೈರಸ್ ಇರುವುದು ದೃಢವಾಗಿದ್ದು ಎಲೆಕ್ಟ್ರಾನಿಕ್ ಸಿಟಿಯ ಎರಡನೆಯ ಹಂತದ ಆನಂದ ರೆಡ್ಡಿ ಬಡಾವಣೆಯಲ್ಲಿ ಕಂಡುಬಂದಿದೆ. ವ್ಯಕ್ತಿಯ ಸಹೋದರಿ ಹಾಗೂ ಆಕೆಯ ಗಂಡ(ಭಾವ)ನಿಗೆ ಸೋಂಕು ದೃಢವಾಗಿದ್ದ ಹಿನ್ನಲೆ ಇವರ ಮನೆಯಲ್ಲಿ ಬಾಡಿಗೆಗೆ ಇದ್ದವರನ್ನು 3 ದಿನಗಳ ಹಿಂದೆಯೇ ಇವರನ್ನು ಹೋಂ ಕ್ವಾರಂಟೈನ್‌ಗೆ ಒಳಪಡಿಸಲಾಗಿತ್ತು.



ಇದೀಗ ಮೂರೂ ಮನೆಯ ಬಾಡಿಗೆದಾರರನ್ನು ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಿರುವುದಾಗಿ ತಾಲೂಕು ವೈದ್ಯಾಧಿಕಾರಿ ತಿಳಿಸಿದ್ದಾರೆ.

ಈ ವಿಷಯ ಹರಡುತ್ತಿದ್ದಂತೆ ಇತರ ಮನೆಗಳ ಬಾಡಿಗೆದಾರರು ತಾವು ವಾಸವಿದ್ದ ಮನೆಗಳನ್ನು ತೊರೆದು ಹೊರಗೆ ಹೋಗುತ್ತಿರುವುದು ಕಂಡುಬಂದಿದೆ. ತಾಲೂಕು ವೈದ್ಯಾಧಿಕಾರಿ ಮಾತನಾಡಿ ಜನರು ಭಯಭೀತರಾಗುವುದು ಬೇಡ. ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಲಾಗಿದೆ.

ಸ್ವಚ್ಛತೆ, ಮಾಸ್ಕ್ ಧಾರಣೆ, ಅಂತರ ಕಾಪಾಡುವುದು ಕಡ್ಡಾಯವಾಗಿ ಮಾಡಿ ಎಂದು ವಿನಂತಿ ಮಾಡಿದ ಅವರು ಬೆಡ್ ಮತ್ತು ಇತರ ಸೌಲಭ್ಯ ಸಿದ್ಧವಾಗಿದೆ ಎಂದರು.

ವಿಶ್ವವಾಣಿ

### ಜನವರಿ 13ರಂದು ದೇಶದ ಜನತೆಗೆ ಔಷಧ ವಿತರಣೆಗೆ ಸಿದ್ಧ

# ಸಂಕ್ರಾಂತಿಗೆ ಲಸಿಕೆ ಸಿಹಿ?

**ದೆಹಲಿ:** ಜನವರಿ 3 ರಂದು ತುರ್ತು ಬಳಕೆಗೆ ಅನುಮೋದನೆ ಪಡೆದಿರುವ ಕರೋನಾ ಲಸಿಕೆಗಳನ್ನು ಅನುಮೋದನೆ ಪಡೆದ ದಿನದಿಂದ 10 ದಿನಗಳಲ್ಲಿ ಜನರಿಗೆ ನೀಡುವ ಪ್ರಕ್ರಿಯೆ ಆರಂಭಿಸಲು ಸಿದ್ಧವಾಗಿದ್ದೇವೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ. ಅಂದರೆ ಜನವರಿ 13ರಂದು ಜನರಿಗೆ ಲಸಿಕೆ ಲಭ್ಯವಾಗಬಹುದು ಎನ್ನಲಾಗುತ್ತಿದೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಕಾರ್ಮಿಕರು ಲಸಿಕೆ ಹಾಕಿಸಿಕೊಳ್ಳಲು ತಮ್ಮನ್ನು ನೋಂದಾಯಿಸಿಕೊಳ್ಳುವ ಅಗತ್ಯವಿಲ್ಲ, ಏಕೆಂದರೆ, ಅವರ ಡೇಟಾಬೇಸ್ ಅನ್ನು ಕೋ-ವಿನ್ ಲಸಿಕೆ ವಿತರಣಾ ನಿರ್ವಹಣಾ ವ್ಯವಸ್ಥೆಗೆ ಸೇರಿಸಲಾಗಿದೆ.ಕೋವಿನ್ ವ್ಯವಸ್ಥೆಯನ್ನು ಭಾರತ ಮತ್ತು ಜಾಗತಿಕ ದೃಷ್ಟಿಯಿಂದ ಸಿದ್ಧಪಡಿಸಲಾಗಿದೆ. ಯಾವುದೇ ದೇಶ ಈ ವ್ಯವಸ್ಥೆಯನ್ನು ಬಳಸಲು ಮುಂದೆ ಬಂದರೆ ಸರಕಾರ ನೆರವು ನೀಡಲಿದೆ ಎಂದು ತಿಳಿಸಿದ್ದಾರೆ.

ಈ ಮಧ್ಯೆ, ಲಸಿಕೆ ತಯಾರಿಕೆ ಕಂಪನಿಗಳಾದ ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ಭಾರತ್ ಬಯೋಟೆಕ್ ಎರಡೂ ಕಂಪನಿಗಳು ಜಂಟಿಯಾಗಿ ದೇಶದಲ್ಲಿ ಮತ್ತು ಜಾಗತಿಕವಾಗಿ ಲಸಿಕೆಗಳನ್ನು ಸುಗಮವಾಗಿ ತಲುಪಿಸುವ ಬದ್ಧವಾಗಿರುವುದಾಗಿ ಹೇಳಿವೆ.

**ಮೋದಿ ಮೊದಲು ಲಸಿಕೆ ಪಡೆಯಲಿ:** ಕರೋನಾ ಲಸಿಕೆಯ ಬಗ್ಗೆ ಜನರಲ್ಲಿರುವ ಗೊಂದಲ ನಿವಾರಣೆ ಮಾಡಲು ಪ್ರಧಾನಿ ನರೇಂದ್ರ ಮೋದಿ ಮೊದಲು ಲಸಿಕೆ ಸ್ವೀಕರಿಸಬೇಕು ಎಂದು ಬಿಹಾರ ಕಾಂಗ್ರೆಸ್ ಮುಖಂಡ ಅಜಿತ್ ಶರ್ಮಾ ಹೇಳಿದ್ದಾರೆ.




## ಲಸಿಕೆ ಬಗ್ಗೆ ಶಂಕಿಸುವವರು, ಹತಾಶ ರಾಜಕಾರಣಿಗಳು

ರಾಜಕೀಯದಲ್ಲಿ ಹತಾಶಗೊಂಡ ಕೆಲ ನಾಯಕರು ಭಾರತದಲ್ಲಿ ತಯಾರಿಸಲಾಗಿರುವ ಲಸಿಕೆ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಮುಕ್ತಾರ್ ಅಬ್ಬಾಸ್ ನಖ್ವಿ ಟೀಕಿಸಿದ್ದಾರೆ. ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆಯುತ್ತಿರುವಾಗಲೇ ತುರ್ತು ಬಳಕೆಗೆ ಅನುಮತಿ ನೀಡಿರುವ ಭಾರತ್ ಬಯೋಟೆಕ್ ಲಸಿಕೆ ಕುರಿತು ಕಾಂಗ್ರೆಸ್ ಪಕ್ಷದ ಕೆಲವು ನಾಯಕರು ಅನುಮಾನ ವ್ಯಕ್ತಪಡಿಸಿರುವುದಕ್ಕೆ ನಖ್ವಿ ಈ ರೀತಿ ಪ್ರತಿಕ್ರಿಯಿಸಿದ್ದಾರೆ. ಭಾರತೀಯ ಹಜ್ ಸಮಿತಿ ಸಭೆಯ ನಂತರ ಮಾತನಾಡಿದ ಅವರು, ರಾಜಕೀಯದಲ್ಲಿ ಸೋಲು ಕಂಡು, ಹತಾಶರಾಗಿರುವವರು ಹೀಗೆ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ.



ನಾವು ಕೇವಲ ಭಾರತದಲ್ಲಿ ಕ್ಲಿನಿಕಲ್ ಪ್ರಯೋಗಗಳನ್ನು ನಡೆಸುತ್ತಿಲ್ಲ. ಬ್ರಿಟನ್ ಸೇರಿದಂತೆ 12ಕ್ಕೂ ಹೆಚ್ಚು ದೇಶಗಳಲ್ಲಿ ಕ್ಲಿನಿಕಲ್ ಪ್ರಯೋಗಗಳನ್ನು ಮಾಡಿದ್ದೇವೆ. ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ ಮತ್ತು ಇತರ ದೇಶಗಳಲ್ಲಿ ಕ್ಲಿನಿಕಲ್ ಪ್ರಯೋಗಗಳನ್ನು ಕೈಗೊಳ್ಳುತ್ತಿದ್ದೇವೆ. ನಮ್ಮದು ಕೇವಲ ಭಾರತೀಯ ಕಂಪನಿಯಲ್ಲ. ಭಾರತ್ ಬಯೋಟೆಕ್ ಎನ್ನುವುದು ಜಾಗತಿಕ ಕಂಪನಿ

**- ಕೃಷ್ಣ ಎಲ್ಲಾ**, ಭಾರತ್ ಬಯೋಟೆಕ್ ವ್ಯವಸ್ಥಾಪಕ ನಿರ್ದೇಶಕ

ಲಸಿಕೆ ತಾಲೀಮಿನ ಆಧಾರದ ಮೇಲೆ ಆರೋಗ್ಯ ಇಲಾಖೆಯು, ಲಸಿಕೆ ಅನುಮೋದನೆ ಪಡೆದ ಬಳಿಕ 10 ದಿನಗಳಲ್ಲಿ ಲಸಿಕೆ ಅಭಿಯಾನ ಆರಂಭಿಸಲು ಸಿದ್ಧವಿದೆ. ಆದರೆ, ಲಸಿಕೆ ಅಭಿಯಾನ ಯಾವಾಗ ಆರಂಭವಾಗಲಿದೆ ಎಂಬ ಆ ನಿರ್ಧಾರವನ್ನು ಸರಕಾರ ಕೈಗೊಳ್ಳಲಿದೆ.

**- ರಾಜೇಶ್ ಭೂಷಣ್**
ಕೇಂದ್ರ ಆರೋಗ್ಯ ಕಾರ್ಯದರ್ಶಿ

ಭಾರತದಲ್ಲಿ ಕೊರೊನಾ ಸಕ್ರಿಯ ಪ್ರಕರಣಗಳು ಮತ್ತು ಹೊಸ ಸಾವುಗಳು ಪ್ರಮಾಣ ಕ್ಷೀಣಿಸುತ್ತಿರುವುದರಿಂದ ಸಕಾರಾತ್ಮಕ ಸನ್ನಿವೇಶ ಹೊರಹೊಮ್ಮುತ್ತಿದೆ

**- ಡಾ ವಿ ಕೆ ಪಾಲ್** ನೀತಿ
ಆಯೋಗದ (ಆರೋಗ್ಯ) ಸದಸ್ಯ

## ಭಾರತ್ ಬಯೋಟೆಕ್ ವ್ಯವಸ್ಥಾಪಕ ನಿರ್ದೇಶಕರ ಬೇಸರ

ಲಸಿಕೆ ಕುರಿತು ಕೇಳಿಬಂದಿರುವ ಟೀಕೆಗಳ ಕುರಿತು ಭಾರತ್ ಬಯೋಟೆಕ್‌ನ ವ್ಯವಸ್ಥಾಪಕ ನಿರ್ದೇಶಕ ಡಾ. ಕೃಷ್ಣ ಎಲ್ಲಾ ಬೇಸರ ವ್ಯಕ್ತಪಡಿಸಿದ್ದಾರೆ. ನಾವು ಸಿದ್ಧಪಡಿಸಿರುವ ಲಸಿಕೆ ಸುರಕ್ಷಿತವಾಗಿದೆ. ನಮ್ಮ ಕಂಪನಿಯು ಭಾರತವನ್ನು ಹೊರತುಪಡಿಸಿ 12ಕ್ಕೂ ಹೆಚ್ಚು ದೇಶಗಳಲ್ಲಿ ಕೊವ್ಯಾಕ್ಸಿನ್‌ಗೆ ಸಂಬಂಧಿತ ಪ್ರಯೋಗಗಳನ್ನು ನಡೆಸುತ್ತಿದೆ. ಲಸಿಕೆಗಳನ್ನು ತಯಾರಿಸುವುದರಲ್ಲಿ ನಮಗೆ ಅಪಾರ ಅನುಭವವಿದೆ. ಲಸಿಕೆಯನ್ನು ರಾಜಕೀಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ನನ್ನ ಕುಟುಂಬದ ಸದಸ್ಯರು ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಬಂಧ ಹೊಂದಿಲ್ಲ. ಇದನ್ನು ನಾನು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ ಎಂದಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

# ಮಹಿಳೆಗೆ ಬ್ರಿಟನ್ ರೂಪಾಂತರ: ಒಟ್ಟು 11 ಕೇಸ್

## ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ■ 9 ಮಂದಿಯ ವಂಶವಾಹಿನಿ ಪರೀಕ್ಷೆ ಫಲಿತಾಂಶ

**ಬೆಂಗಳೂರು:** ಇಂಗ್ಲೆಂಡ್‌ನಿಂದ ಬಂದ ಪ್ರಯಾಣಿಕರ ಸಂಪರ್ಕ ಹೊಂದಿದ್ದ ನಗರದ ಮತ್ತೊಬ್ಬ ಮಹಿಳೆಯಲ್ಲಿ (53) ಬ್ರಿಟನ್ ರೂಪಾಂತರ ಕೊರೊನಾ ಸೋಂಕು ದೃಢಪಟ್ಟಿದ್ದು, ಒಟ್ಟಾರೆ ಸಂಖ್ಯೆ 11ಕ್ಕೆ ಏರಿಕೆಯಾಗಿದೆ.

ಸೋಂಕಿತ ಮಹಿಳೆ ಎಲೆಕ್ಟ್ರಾನಿಕ್ ಸಿಟಿಯ ನಿವಾಸಿಯಾಗಿದ್ದು, ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯ ಸೋಂಕಿನ ಲಕ್ಷಣಗಳು ಇಲ್ಲ. ನಿಮ್ಹಾನ್ಸ್‌ನಿಂದ ಮಂಗಳವಾರ ಒಟ್ಟು 9 ಮಂದಿಯ ವಂಶವಾಹಿನಿ ಪರೀಕ್ಷೆ ಫಲಿತಾಂಶ ಬಂದಿದ್ದು, ಒಬ್ಬರದ್ದು ಪಾಸಿಟಿವ್ ಬಂದಿದೆ.

ಬಾಕಿ 18 ವರದಿ ಬರಬೇಕಿದೆ. ಈವರೆಗೂ ಬೆಂಗಳೂರಿನಲ್ಲಿ ಏಳು, ಶಿವಮೊಗ್ಗದಲ್ಲಿ ನಾಲ್ಕು ಮಂದಿ ಸೇರಿ 11 ಮಂದಿಯಲ್ಲಿ ಬ್ರಿಟನ್ ರೂಪಾಂತರ ವೈರಸ್ ಪತ್ತೆಯಾಗಿವೆ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

**ಹೇಗೆ ಸಂಪರ್ಕ?:** ಇತ್ತೀಚೆಗೆ ಇಂಗ್ಲೆಂಡ್‌ನಿಂದ ಬಂದ ಶಿವಮೊಗ್ಗದ ನಾಲ್ವರಲ್ಲಿ ಕೊರೊನಾ ರೂಪಾಂತರ ದೃಢಪಟ್ಟಿತ್ತು. ಈ ನಾಲ್ವರು ಶಿವಮೊಗ್ಗಕ್ಕೆ ತೆರಳುವ ಮುಂಚೆ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಸಂಬಂಧಿಕರ ಮನೆಗೆ ಭೇಟಿ ನೀಡಿದ್ದಾರೆ. ಮೂವರು ಸಂಬಂಧಿಕರನ್ನು ಸಂಪರ್ಕಿತರು ಎಂದು ಗುರುತಿಸಿ ಕೊರೊನಾ ಸೋಂಕು ಪರೀಕ್ಷೆಗೊಳಪಡಿಸಿ, ಆ ನಂತರ ವಂಶವಾಹಿನಿ ಪರೀಕ್ಷೆಯನ್ನೂ ನಡೆಸಲಾಗಿತ್ತು. ಇನ್ನು ಪ್ರಯಾಣಿಕರ ಸಂಪರ್ಕದಿಂದ ರೂಪಾಂತರ ಸೋಂಕು ತಗಲುತ್ತಿರುವ ಎರಡನೇ ಮಹಿಳೆ ಇವರಾಗಿದ್ದಾರೆ. ಜ.1 ರಂದು ರಾಜಾಜಿನಗರದಲ್ಲಿ 73 ವರ್ಷದ ವೃದ್ಧೆಗೆ ಇಂಗ್ಲೆಂಡ್‌ನಿಂದ ಬಂದ ಮಗಳ ಸಂಪರ್ಕದಿಂದ ರೂಪಾಂತರ ವೈರಸ್ ತಗುಲಿರುವುದು ವರದಿಯಾಗಿತ್ತು.

### ಒಟ್ಟು 55 ಪಾಸಿಟಿವ್

ಡಿಸೆಂಬರ್‌ನಿಂದೀಚೆಗೆ ರಾಜ್ಯಕ್ಕೆ ಬಂದ 2176 ಪ್ರಯಾಣಿಕರು, 120 ಅವರ ಸಂಪರ್ಕಿತರನನ್ನು ಆರೋಗ್ಯ ಇಲಾಖೆ ಪತ್ತೆ ಮಾಡಿ ಕೊರೊನಾ ಪರೀಕ್ಷೆಗೆ ಒಳಪಡಿಸಿದೆ. ಈ ಪೈಕಿ ಇಲ್ಲಿಯವರೆಗೂ 37 ಪ್ರಯಾಣಿಕರಲ್ಲಿ, 18 ಸಂಪರ್ಕಿತರದಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ. ಇವರ ಕೊರೊನಾ ವಂಶವಾಹಿನಿ ಪರೀಕ್ಷೆ ನಡೆಯುತ್ತಿದ್ದು, ಒಂಬತ್ತು ಪ್ರಯಾಣಿಕರಲ್ಲಿ, ಇಬ್ಬರು ಸಂಪರ್ಕಿತರದಲ್ಲಿ ಬ್ರಿಟನ್ ರೂಪಾಂತರ ವೈರಸ್ ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ಬುಲಿಟಿನ್‌ನಲ್ಲಿ ತಿಳಿಸಲಾಗಿದೆ.

### ಲಸಿಕೆ ನೀಡುವುದಕ್ಕೆ 1,535 ಸ್ಥಳ ಗುರುತು

ನಗರದಲ್ಲಿ ಮೂರು ಹಂತದಲ್ಲಿ ಕೋವಿಡ್ ಲಸಿಕೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಇಲ್ಲಿಯವರೆಗೆ ಕೋವಿಡ್ ಲಸಿಕೆ ನೀಡುವುದಕ್ಕೆ 1,535 ಸ್ಥಳಗಳನ್ನು ಗುರುತಿಸಲಾಗಿದೆ ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಆರೋಗ್ಯ) ರಾಜೇಂದ್ರ ಚೋಳನ್ ತಿಳಿಸಿದರು. ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಜೊತೆಗೆ ಪಾಲಿಕೆ ವ್ಯಾಪ್ತಿಯಲ್ಲಿನ ಮೆಡಿಕಲ್ ಕಾಲೇಜು, ಹೆಲ್ತ್ ಸೆಂಟರ್ ಹಾಗೂ ಮೆಡಿಕಲ್ ಆಸ್ಪತ್ರೆಗಳನ್ನು ಗುರುತಿಸಲಾಗಿದೆ. ಸದ್ಯಕ್ಕೆ ಪಾಲಿಕೆ ವ್ಯಾಪ್ತಿಯ ಸರ್ಕಾರಿ ಹಾಗೂ ಪಾಲಿಕೆ ಶಾಲಾ- ಕಾಲೇಜುಗಳನ್ನು ಲಸಿಕೆ ನೀಡಲು ಬಳಸಿಕೊಳ್ಳುವ ಚಿಂತನೆ ಇಲ್ಲ ಎಂದು ಸ್ಪಷ್ಟಪಡಿಸಿದರು.

### ಲಸಿಕೆ ವಿಚಾರದಲ್ಲಿ ರಾಜಕೀಯ ಬೇಡ: ತೇಜಸ್ವಿ ಸೂರ್ಯ



**ಬೆಂಗಳೂರು:** ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳು ವದಂತಿ ಹಬ್ಬಿಸುವುದು ಹಾಗೂ ಜನರಿಗೆ ತಪ್ಪು ಸಂದೇಶ ನೀಡುವುದು ಸಾರ್ವಜನಿಕರ ಜೀವದೊಂದಿಗೆ ಚೆಲ್ಲಾಟವಾಡಿದಂತೆ ಎಂದು ಸಂಸದ ತೇಜಸ್ವಿ ಸೂರ್ಯ ಕಿಡಿಕಾರಿದರು. ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಮಂಗಳವಾರ ಪಾಲಿಕೆಯ ಕೇಂದ್ರ ಕಚೇರಿಯಲ್ಲಿ ಪಾಲಿಕೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋವಿಡ್ ಲಸಿಕೆಗೆ ಬಿಜೆಪಿ ಲಸಿಕೆ ಎಂದು ಹೇಳುವುದು ಹಾಗೂ ಇದರ ಬಗ್ಗೆ ಸಾರ್ವಜನಿಕರನ್ನು ತಪ್ಪು ದಾರಿಗೆ ಎಳೆಯುವುದು ಬೇಜವಾಬ್ದಾರಿಯ ನಡೆ ಎಂದರು. ಲಸಿಕೆಗೆ ಸಂಬಂಧಿಸಿದಂತೆ ಉತ್ತರ ಪ್ರದೇಶ ರಾಜಕಾರಣಿ ಅಖಿಲೇಶ್ ಯಾದವ್ ಸೇರಿದಂತೆ ಮತ್ತಿತರರು ಈ ರೀತಿ ಮಾತನಾಡಿದ್ದಾರೆ. ಇಲ್ಲಿಯ ವರೆಗೆ ರಾಜ್ಯದ ಯಾವುದೇ ರಾಜಕಾರಣಿಯೂ ಲಸಿಕೆಯ ಬಗ್ಗೆ ಹಗುರವಾಗಿ ಮಾತನಾಡಿಲ್ಲ, ಕೋವಿಡ್ ಲಸಿಕೆ ಬರುವುದರಿಂದ ಲಕ್ಷಾಂತರ ಜನರ ಜೀವ ಉಳಿಯಲಿದೆ. ಕೊರೊನಾ ಮುಂದೆ ಇದ್ದ ಪರಿಸ್ಥಿತಿ ನಿರ್ಮಾಣವಾಗಲಿದೆ. ಹೀಗಾಗಿ, ರಾಜ್ಯದ ಎಲ್ಲ ರಾಜಕೀಯ ನಾಯಕರು ತಪ್ಪು ಮಾಹಿತಿ ನೀಡದಂತೆ ಮನವಿ ಮಾಡಿದರು. ಕೋವಿಡ್ ಲಸಿಕೆಗೆ ಸಂಬಂಧಿಸಿದ ಸುಳ್ಳು ಸುದ್ದಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು. ಲಸಿಕೆಗಾಗಿ ಜನ ಕಾತುರದಿಂದ ಕಾಯುತ್ತಿದ್ದಾರೆ. ಹಲವು ಹಂತದ ಸಂಶೋಧನೆಗಳ ನಂತರವಷ್ಟೇ ಲಸಿಕೆ ಮಾರುಕಟ್ಟೆಗೆ ಮುಕ್ತವಾಗಲಿದೆ. ಲಸಿಕೆ ತೆಗೆದುಕೊಳ್ಳುವುದರಿಂದ ನಿತ್ರಾಣವಾಗುವುದಾಗಲಿ, ಮಕ್ಕಳಾಗದೆ ಇರುವುದಾಗಲಿ ಅಥವಾ ದೈಹಿಕವಾಗಿ ಯಾವುದೇ ಸಮಸ್ಯೆ ಆಗುವುದಿಲ್ಲ. ಮೊದಲ ಬಾರಿಗೆ ಉಳಿದ ದೇಶಗಳಷ್ಟೇ ವೇಗವಾಗಿ ಭಾರತದ ಎರಡು ವ್ಯಾಕ್ಸಿನ್ ಸಿದ್ಧವಾಗಿದೆ ಎಂದರು. ಬೆಂಗಳೂರಿನಲ್ಲಿ ಮೂರು ಹಂತದಲ್ಲಿ ಕೋವಿಡ್ ವ್ಯಾಕ್ಸಿನ್ ನೀಡಲು ನಿರ್ಧರಿಸಲಾಗಿದೆ. ಮೊದಲ ಹಂತದಲ್ಲಿ 1.68 ಲಕ್ಷ ಜನ ಕೊರೊನಾ ವಾರಿಯರ್ಸ್ (ಆರೋಗ್ಯ ಕಾರ್ಯಕರ್ತರಿಗೆ), ಎರಡನೇ ಹಂತದಲ್ಲಿ ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು ಸೇರಿದಂತೆ ಎರಡರಿಂದ ಮೂರು ಲಕ್ಷ ಜನರಿಗೆ ಹಾಗೂ ಮೂರನೇ ಹಂತದಲ್ಲಿ 50 ವರ್ಷಕ್ಕಿಂತ ಮೇಲ್ಪಟ್ಟಿರುವವರು ಹಾಗೂ ಆರೋಗ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಲಸಿಕೆ ನೀಡಲು ಯೋಜನೆ ರೂಪಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

### ಬ್ರಿಟನ್‌ನಿಂದ ರಾಜ್ಯಕ್ಕೆ 3,137 ಪ್ರಯಾಣಿಕರು

**ಬೆಂಗಳೂರು:** ಬ್ರಿಟನ್‌ನಿಂದ ರಾಜ್ಯಕ್ಕೆ ಒಟ್ಟು 3,137 ಪ್ರಯಾಣಿಕರು ಬಂದಿದ್ದು, 3,061 ಪ್ರಯಾಣಿಕರನ್ನು ಪತ್ತೆ ಹಚ್ಚಲಾಗಿದೆ. ಆ ಪೈಕಿ 2,292 ಮಂದಿಗೆ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಲಾಗಿದೆ ಎಂದು ಸರ್ಕಾರ ಹೈಕೋರ್ಟ್‌ಗೆ ಮಾಹಿತಿ ನೀಡಿದೆ. ರಾಜ್ಯದಲ್ಲಿ ಕೊರೊನಾ ಸೋಂಕು ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರ ಹಾಗೂ ಬಿಬಿಎಂಪಿಗೆ ನಿರ್ದೇಶಿಸಲು ಕೋರಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕ್ ಅವರ ನೇತೃತ್ವದ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದಿತ್ತು. ವಿಚಾರಣೆ ವೇಳೆ ಸರ್ಕಾರಿ ವಕೀಲ ವಿಕ್ರಂ ಹುಯಿಲಗೋಳ್ ಲಿಖಿತ ಹೇಳಿಕೆ ಸಲ್ಲಿಸಿ, ಡಿ.7ರ ನಂತರ ಬ್ರಿಟನ್‌ನಿಂದ ರಾಜ್ಯಕ್ಕೆ ಒಟ್ಟು 3,137 ಪ್ರಯಾಣಿಕರು ಬಂದಿದ್ದಾರೆ. ಅವರಲ್ಲಿ 3,061 ಪ್ರಯಾಣಿಕರನ್ನು ಪತ್ತೆ ಹಚ್ಚಲಾಗಿದೆ. ಇಂಗ್ಲೆಡ್‌ನಿಂದ ರಾಜ್ಯಕ್ಕೆ ಬಂದು ಹೊರ ರಾಜ್ಯಕ್ಕೆ ತೆರಳಿದ ಪ್ರಯಾಣಿಕರ ಸಂಖ್ಯೆ 594 ಆಗಿದೆ. ಅವರಲ್ಲಿ 75 ಪ್ರಯಾಣಿಕರು ಈವರೆಗೆ ಪತ್ತೆಯಾಗಿಲ್ಲ ಎಂದು ತಿಳಿಸಿದರು. ಅಲ್ಲದೆ, ಈವರೆಗೆ ಒಟ್ಟು 2,292 ಪ್ರಯಾಣಿಕರಿಗೆ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಲಾಗಿದೆ. 176 ಪ್ರಯಾಣಿಕರ ತಪಾಸಣಾ ಫಲಿತಾಂಶ ಬರಬೇಕಿದೆ. ಒಟ್ಟು 34 ಪ್ರಯಾಣಿಕರಿಗೆ ಕೋವಿಡ್-19 ಸೋಂಕು ಪತ್ತೆಯಾಗಿದೆ. 14 ಪ್ರಾಥಮಿಕ ಸಂಪರ್ಕಿರಿಗೆ ಕೋವಿಡ್-19 ಹಾಗೂ 9 ಪ್ರಯಾಣಿಕರಲ್ಲಿ ಇಂಗ್ಲೆಂಡ್ ರೂಪಾಂತರಿ ಸೋಂಕು ಪತ್ತೆಯಾಗಿದೆ ಎಂದು ಸರ್ಕಾರ ನೀಡಿದ ಲಿಖಿತ ಹೇಳಿಕೆಯಲ್ಲಿ ಮಾಹಿತಿ ನೀಡಲಾಗಿದೆ. ಅದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಪತ್ತೆಯಾಗಿರುವ 3,061 ಪ್ರಯಾಣಿಕರ ಪೈಕಿ 2,292 ಪ್ರಯಾಣಿಕರನ್ನು ಮಾತ್ರ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗಿದೆ. ಉಳಿದ 700ಕ್ಕೂ ಹೆಚ್ಚು ಪ್ರಯಾಣಿಕರಿಗೆ ಏಕೆ ಪರೀಕ್ಷೆ ನಡೆಸಿಲ್ಲ ಎಂದು ಪ್ರಶ್ನಿಸಿತು. ಜತೆಗೆ, ಈ ಕುರಿತು ಸ್ಪಷ್ಟನೆ ನೀಡುವಂತೆ ಸರ್ಕಾರಕ್ಕೆ ಸೂಚಿಸಿ ವಿಚಾರಣೆಯನ್ನು ಜ.12ಕ್ಕೆ ಮಾಹಿತಿ ನೀಡಿತು.

### ಏಳು ಲ್ಯಾಬ್‌ಗಳಿಗೆ ದಂಡ

ಆರ್‌ಟಿಪಿಆರ್ ಪರೀಕ್ಷೆಯ ಫಲಿತಾಂಶವನ್ನು 48 ಗಂಟೆಗಳಿಗಿಂತ ವಿಳಂಬವಾಗಿ ನೀಡುವ ಮತ್ತು ಐಸಿಎಂಆರ್ ವೆಬ್ ಪೋರ್ಟಲ್‌ನಲ್ಲಿ ವಿಳಂಬವಾಗಿ ದಾಖಲಿಸುವ ಖಾಸಗಿ ಪ್ರಯೋಗಾಲಯಗಳಿಗೆ ಪರೀಕ್ಷೆಗೆ ತಗುಲಿರುವ ಮೊತ್ತದಲ್ಲಿ ಶೇ.10ರಷ್ಟು ದಂಡ ವಿಧಿಸಬೇಕಾಗುತ್ತದೆ. ಅದರಂತೆ ನಗರದ ಏಳು ಖಾಸಗಿ ಪ್ರಯೋಗಾಲಯಗಳಲ್ಲಿ ಒಟ್ಟು 410 ಪ್ರಕರಣಗಳಲ್ಲಿ ಫಲಿತಾಂಶ ನೀಡುವಲ್ಲಿ ವಿಳಂಬವಾಗಿದೆ. ಅದಕ್ಕಾಗಿ ಅವುಗಳಿಗೆ ದಂಡ ವಿಧಿಸಲಾಗಿದೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

## ಬ್ರಿಟನ್‌ನಿಂದ ಬಂದ 121 ಮಂದಿ ನಾಪತ್ತೆ; ವಿಶೇಷ ತಂಡ ರಚನೆ

**ಬೆಂಗಳೂರು:** ನಗರಕ್ಕೆ ಬ್ರಿಟನ್‌ನಿಂದ ಬಂದಿರುವವರಲ್ಲಿ ಇಲ್ಲಿಯ ವರೆಗೆ ಒಟ್ಟು 121 ಜನ ನಾಪತ್ತೆ ಆಗಿದ್ದು, ಇವರ ಪತ್ತೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ವಲಯವಾರು ವಿಶೇಷ ತಂಡಗಳನ್ನು ರಚನೆ ಮಾಡಲಾಗಿದೆ ಎಂದು ಬಿಬಿಎಂಪಿ ವಿಶೇಷ (ಆರೋಗ್ಯ) ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರಕ್ಕೆ ಬ್ರಿಟನ್‌ನಿಂದ ಹಿಂದಿರುಗಿದವರ ಪತ್ತೆಗೆ ಪೊಲೀಸ್ ಇಲಾಖೆಯ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದೇವೆ. ಎರಡು ಮೂರು ದಿನದಲ್ಲಿ ಎಲ್ಲರೂ ಸಿಗಲಿದ್ದಾರೆ ಎಂದರು.

ಕಾಣೆಯಾಗಿರುವವರ ಪೈಕಿ ಐಟಿ-ಬಿಟಿ ಕಂಪನಿಗಳು ಹೆಚ್ಚಾಗಿರುವ ಮಹದೇವಪುರ ವ್ಯಾಪ್ತಿಯಲ್ಲಿ ಬ್ರಿಟನ್‌ನಿಂದ ಬಂದಿರುವವರು ಇರುವ ಸಾಧ್ಯತೆ ಇದೆ. ನಾಪತ್ತೆ ಆಗಿರುವವರು ತಪ್ಪು ವಿಳಾಸ ನೀಡಿರುವುದೇ ಸಮಸ್ಯೆ ಆಗಿದ್ದು, ವಾಟ್ಸ್ಆ್ಯಪ್ ಕಾಲ್ ಮೂಲಕ ಸಂಪರ್ಕಿಸಲು ಪ್ರಯತ್ನಿಸಲಾಗುತ್ತಿದೆ. ಪೊಲೀಸ್ ಇಲಾಖೆಯ ಅಧಿಕಾರಿಗಳ ಸಹಕಾರವನ್ನೂ ಕೋರಲಾಗಿದೆ. ಪೊಲೀಸ್ ಸಿಬ್ಬಂದಿ ಪಾಸ್‌ಪೋರ್ಟ್ ಅಧಿಕಾರಿಗಳ ಸಹಕಾರದೊಂದಿಗೆ ಪತ್ತೆ ಕಾರ್ಯ ನಡೆಸಲಿದ್ದಾರೆ ಎಂದರು.

ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಡಿ.1ರಿಂದ 21ವರೆಗೆ 1,426 ಆಗಮಿಸಿದ್ದರು. ಡಿ.30 ರಂದು 553 ಮಂದಿ, ಡಿ.31 ರಂದು 486 ಮಂದಿ ಆಗಮಿಸಿದ್ದಾರೆ. ಈ ಪೈಕಿ ಡಿ.1ರಿಂದ ಡಿ.21 ವರೆಗೆ ಆಗಮಿಸಿದವರಲ್ಲಿ 79 ಮಂದಿ, ಡಿ.30 ರಂದು ಆಗಮಿಸಿದವರ ಪೈಕಿ 28 ಮಂದಿ ಹಾಗೂ ಡಿ.31 ರಂದು ಆಗಮಿಸಿದವರಲ್ಲಿ 14 ಮಂದಿ ಸೇರಿದಂತೆ ಒಟ್ಟು 121 ಜನ ನಾಪತ್ತೆಯಾಗಿದ್ದಾರೆ ಎಂದು ಹೇಳಿದರು.

### ಒಟ್ಟು 33 ಮಂದಿಗೆ ಕೊರೊನಾ

ನಗರಕ್ಕೆ ಬ್ರಿಟನ್‌ನಿಂದ ಬಂದವರು ಹಾಗೂ ಇವರ ಪ್ರಾಥಮಿಕ ಸಂಪರ್ಕದಲ್ಲಿದ್ದವರು ಸೇರಿ ಒಟ್ಟು 33 ಜನರಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಇವರಲ್ಲಿ 24 ಜನ ಬ್ರಿಟನ್‌ನಿಂದ ಬಂದವರು ಹಾಗೂ 9 ಜನ ಇವರ ಪ್ರಾಥಮಿಕ ಸಂಪರ್ಕದಲ್ಲಿ ಇದ್ದವರು ಆಗಿದ್ದಾರೆ. ಬ್ರಿಟನ್‌ನಿಂದ ಬಂದವರಲ್ಲಿ ಒಟ್ಟು 2,471 ಜನ ಬೆಂಗಳೂರಿಗೆ ಸೇರಿದ್ದು, ಇವರಲ್ಲಿ 1,860 ಜನ ಕೊರೊನಾ ಸೋಂಕು ಪರೀಕ್ಷೆಗೆ ಲಭ್ಯವಿದ್ದು, ಇವರಲ್ಲಿ 1,572 ಜನರನ್ನು ಕೊರೊನಾ ಸೋಂಕು ಪರೀಕ್ಷೆಗೆ ಒಳಪಡಿಸಲಾಗಿದೆ. ಇನ್ನು 288 ಜನರನ್ನು ಕೊರೊನಾ ಸೋಂಕು ಪರೀಕ್ಷೆಗೆ ಒಳಪಡಿಸಬೇಕಿದೆ ಎಂದು ಪಾಲಿಕೆಯ ಆರೋಗ್ಯ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

# 13ಕ್ಕೆ ಫಸ್ಟ್ ಡೋಸ್

## ಲಸಿಕೆ ನೀಡಿಕೆಗೆ ದಿನಾಂಕ ಫಿಕ್ಸ್ ■ 13ರಿಂದ ಆದ್ಯತಾ ವಲಯಕ್ಕೆ ವಿತರಣೆ
## 12 ಭಾಷೆಗಳಲ್ಲಿ ಎಸ್ಸೆಮ್ಮೆಸ್ ರವಾನೆ ■ ಡಿಜಿಲಾಕರ್‌ನಲ್ಲಿ ಪ್ರಮಾಣಪತ್ರ

**ನವದೆಹಲಿ:** ಹೊಸ ವರುಷದ ಮೊದಲ ಹಬ್ಬಕ್ಕೂ ಮುನ್ನಾದಿನವೇ ದೇಶದಲ್ಲಿ ಲಸಿಕೆಯ 'ಸಂಕ್ರಾಂತಿ' ಆರಂಭವಾಗಲಿದೆ. ಕೊವ್ಯಾಕ್ಸಿನ್ ಮತ್ತು ಕೊವಿಶೀಲ್ಡ್ ಲಸಿಕೆಗಳ ನಿರ್ಬಂಧಿತ ತುರ್ತು ಬಳಕೆಗೆ ಅನುಮತಿ ಸಿಕ್ಕ ಬೆನ್ನಲ್ಲೇ ಕೇಂದ್ರ ಸರ್ಕಾರ ಈ ಸಿಹಿಸುದ್ದಿಯನ್ನು ನೀಡಿದೆ.

ಜನವರಿ 13ರಿಂದಲೇ ದೇಶಾದ್ಯಂತ ಲಸಿಕೆ ವಿತರಣೆ ಪ್ರಕ್ರಿಯೆ ಆರಂಭವಾಗಲಿದೆ ಎಂದು ಮಂಗಳವಾರ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಮಾಹಿತಿ ನೀಡಿದ್ದಾರೆ. ಲಸಿಕೆ ಬಳಕೆಗೆ ಅನುಮತಿ ಸಿಕ್ಕ ದಿನ(ಜ.3ರ ಭಾನುವಾರ)ದಿಂದ 10 ದಿನಗಳೊಳಗಾಗಿ ಆದ್ಯತೆಯ ಫಲಾನುಭವಿಗಳಿಗೆ ವ್ಯಾಕ್ಸಿನೇಷನ್ ಆರಂಭಿಸುವುದಾಗಿ ಅವರು ಹೇಳಿದ್ದಾರೆ.

ಸರ್ಕಾರ ಆರಂಭಿಸಿರುವ ಕೋ-ವಿನ್ ಆ್ಯಪ್‌ನಲ್ಲಿ ಈಗಾಗಲೇ ಆರೋಗ್ಯ ಮತ್ತು ಮುಂಚೂಣಿ ಕಾರ್ಯಕರ್ತರ ದತ್ತಾಂಶ ಸಂಗ್ರಹಿಸಲಾಗಿದೆ. ಇವರ್‍ಯಾರೂ ಹೊಸದಾಗಿ ನೋಂದಣಿ ಮಾಡಿಕೊಳ್ಳುವ ಅಗತ್ಯವಿಲ್ಲ ಎಂದೂ ಭೂಷಣ್ ಸ್ಪಷ್ಟಪಡಿಸಿದ್ದಾರೆ.

**ಲಸಿಕೆ ಕಂಪನಿಗಳ ಸ್ಪಷ್ಟನೆ:** ಲಸಿಕೆಯ ಪರಿಣಾಮಕಾರಿತ್ವದ ಕುರಿತು ಪರಸ್ಪರ ವಾಕ್ಸಮರ, ವಾದ-ಪ್ರತಿವಾದಗಳು ನಡೆದ ಬೆನ್ನಲ್ಲೇ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ಭಾರತ್ ಬಯೋಟೆಕ್ ಮಂಗಳವಾರ ಜಂಟಿ ಹೇಳಿಕೆ ಬಿಡುಗಡೆ ಮಾಡಿವೆ. ಸುಸೂತ್ರವಾಗಿ ಲಸಿಕೆಯನ್ನು ದೇಶಕ್ಕೆ ಮತ್ತು ಜಗತ್ತಿಗೆ ಹಂಚುವುದೇ ನಮ್ಮ ಗುರಿಯಾಗಿದ್ದು, ಜೀವಗಳನ್ನು ರಕ್ಷಿಸುವುದೇ ಸದ್ಯ ನಮ್ಮ ಮುಂದಿರುವ ಮಹತ್ತರ ಹೊಣೆಗಾರಿಕೆಯಾಗಿದೆ. ಇದು ದೇಶಕ್ಕೆ ನಾವು ಮಾಡಬೇಕಾದ ಕರ್ತವ್ಯವೂ ಹೌದು ಎಂದು ಹೇಳಿವೆ.




## ಏನೇನು ಕ್ರಮಗಳು?

- ಲಸಿಕೆ ಪಡೆಯುವವರು ಮತ್ತು ಲಸಿಕೆ ವಿತರಿಸುವ ಸಿಬ್ಬಂದಿಗೆ ಮಾರ್ಗದರ್ಶನ ನೀಡಲು 12 ಭಾಷೆಗಳಲ್ಲಿ ಎಸ್ಸೆಮ್ಮೆಸ್ ರವಾನೆ
- ಪ್ರತಿ ಡೋಸ್ ನೀಡಿದ ಬಳಿಕ ಕ್ಯೂಆರ್ ಕೋಡ್ ಆಧರಿತ ಲಸಿಕಾ ಪ್ರಮಾಣಪತ್ರ ವಿತರಣೆ. ಅದನ್ನು ಲಸಿಕೆ ಪಡೆದವರು ತಮ್ಮ ಮೊಬೈಲ್ ಫೋನ್‌ಗಳಲ್ಲಿ ಸ್ಟೋರ್ ಮಾಡಿಟ್ಟುಕೊಳ್ಳಬಹುದು
- ಕ್ಯೂಆರ್ ಕೋಡ್ ಆಧರಿತ ಪ್ರಮಾಣ ಪತ್ರಗಳನ್ನು ಸಂಗ್ರಹಿಸಿಡಲು ಸರ್ಕಾರದ ದಾಖಲೆ ಸಂಗ್ರಹ ಆ್ಯಪ್ ಡಿಜಿಲಾಕರ್ ಬಳಕೆ
- ದುರ್ಬಳಕೆ ತಪ್ಪಿಸಲು ಆಧಾರ್ ದೃಢೀಕರಣ ಹಾಗೂ ವಿಶಿಷ್ಟ ಆರೋಗ್ಯ ಐಡಿ ವ್ಯವಸ್ಥೆ
- ಕೊವ್ಯಾಕ್ಸಿನ್, ಕೊವಿಶೀಲ್ಡ್‌ಗಳನ್ನು ಸುರಕ್ಷಿತವಾಗಿಡಲು 29,000 ಕೋಲ್ಡ್ ಚೈನ್ ಪಾಯಿಂಟ್ ಸ್ಥಾಪನೆ

## ಸರ್ಕಾರದಿಂದ ಶಿಬಿರ ?

ಕೋವಿನ್ ಆ್ಯಪ್‌ನಲ್ಲಿ ನೋಂದಣಿಗೆ 3 ಆಯ್ಕೆಗಳನ್ನು ನೀಡಲಾಗಿರುತ್ತದೆ. ಸ್ವಯಂ ನೋಂದಣಿ, ವೈಯಕ್ತಿಕ ನೋಂದಣಿ(ಇಲ್ಲಿ ಅಧಿಕಾರಿಯೊಬ್ಬರು ವ್ಯಕ್ತಿಗಳ ಮಾಹಿತಿ ಅಪ್‌ಲೋಡ್ ಮಾಡಲು ನೆರವಾಗುತ್ತಾರೆ) ಮತ್ತು ಸಾಮೂಹಿಕ ಅಪ್‌ಲೋಡ್. ಇವುಗಳ ಮೂಲಕ ಜನರು ಲಸಿಕೆಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು. ಈ ಕುರಿತು ಇನ್ನೂ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಆದರೆ, ಸರ್ಕಾರವೇ ವಿವಿಧ ಸ್ಥಳಗಳಲ್ಲಿ ಶಿಬಿರಗಳನ್ನು ಆಯೋಜಿಸುವ ಸಾಧ್ಯತೆಯಿದ್ದು, ಜನರು ಅಂಥ ಶಿಬಿರಗಳಿಗೆ ತೆರಳಿ ನೋಂದಣಿ ಮಾಡಿಸಿಕೊಳ್ಳಲು ಅವಕಾಶ ನೀಡಬಹುದು.

## ಪ್ರಮಾಣಪತ್ರ ಅಪ್‌ಲೋಡ್

**ಕೋವಿನ್‌ನಲ್ಲಿ ಹೆಸರು ಸೇರ್ಪಡೆ ಆಗಿರದಿದ್ದರೆ, 50 ವರ್ಷ ಮೇಲ್ಪಟ್ಟವರು ಜಿಲ್ಲಾ ಅಥವಾ ಬ್ಲಾಕ್ ಅಧಿಕಾರಿಯನ್ನು ಸಂಪರ್ಕಿಸಿ, ನೋಂದಣಿ ಮಾಡಿಸಿಕೊಳ್ಳಬಹುದು. 50 ವರ್ಷದ ಕೆಳಗಿನವರು (ಹೃದಯ ಸಂಬಂಧಿ ಕಾಯಿಲೆ, ಕ್ಯಾನ್ಸರ್ ಇರುವವರು) ಸಿಸ್ಟಂಗೆ ತಮ್ಮ ವೈದ್ಯಕೀಯ ಪ್ರಮಾಣಪತ್ರ ಅಪ್ ಲೋಡ್ ಮಾಡಬೇಕು.**

> 2,73,211 ಸರ್ಕಾರಿ, 3,57,313 ಖಾಸಗಿ ಸೇರಿ ಒಟ್ಟು 6,30,524 ಆರೋಗ್ಯ ಕಾರ್ಯಕರ್ತರನ್ನು ಗುರುತಿಸಲಾಗಿದೆ. ಈವರೆಗೂ 64 ಬೃಹತ್ ಐಸ್ ಲೈನ್ಡ್ ರೆಫ್ರಿಜರೇಟರ್ (ಐಎಲ್‌ಆರ್), 24 ಲಕ್ಷ ಸಿರಿಂಜುಗಳು ರಾಜ್ಯಕ್ಕೆ ಬಂದಿದ್ದು, ಜಿಲ್ಲೆಗಳಿಗೆ ರವಾನಿಸಲಾಗಿದೆ.
>
> • **ಡಾ.ಕೆ.ಸುಧಾಕರ್**, ಆರೋಗ್ಯ ಸಚಿವ

## ಸಂದೇಹಕ್ಕೆ ಚುಚ್ಚುಮದ್ದು



**1 ಸೋಂಕಿತರ ಚಿಕಿತ್ಸೆ ವೇಳೆ ಲಸಿಕೆ ಕೊಡುತ್ತಾರೆಯೇ?**
ಇಲ್ಲ, ಸೋಂಕಿನ ಲಕ್ಷಣ ಆಧರಿಸಿ ಇತರೆ ಔಷಧ ನೀಡಲಾಗುತ್ತದೆ. ಗುಣಮುಖರಾದ ನಂತರ ಭವಿಷ್ಯದಲ್ಲಿ ಲಸಿಕೆ ಪಡೆಯಬಹುದು.

**2 ಹಾಗಾದರೆ ಲಸಿಕೆ ಯಾಕೆ? ಸದ್ಯ ಯಾರಿಗೆ?**
ಭವಿಷ್ಯದಲ್ಲಿ ಕೊರೊನಾ ವಿರುದ್ಧ ಹೋರಾಡಲು ದೇಹದಲ್ಲಿ ರೋಗಪ್ರತಿರೋಧಕ ಶಕ್ತಿ ಹೆಚ್ಚಿಸುವುದಕ್ಕೆ. ಮೊದಲ ಹಂತದಲ್ಲಿ ಆರೋಗ್ಯ ಮತ್ತು ಮುಂಚೂಣಿ ಕಾರ್ಯಕರ್ತರು, 2ನೇ ಹಂತದಲ್ಲಿ 50 ವರ್ಷ ಮೇಲ್ಪಟ್ಟವರು, ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿರುವವರಿಗೆ.

**3 ಸೋಂಕಿನ ಲಕ್ಷಣ ಇದ್ದರೆ ಲಸಿಕೆ ನೀಡುತ್ತಾರೆಯೇ?**
ಇಲ್ಲ, ಲಕ್ಷಣವಿದ್ದ ಸಂದರ್ಭದಲ್ಲಿ ಲಸಿಕೆ ಪಡೆದರೆ ವ್ಯತ್ಯಯವಾಗುವ ಸಾಧ್ಯತೆಗಳಿರುತ್ತವೆ. ಜತೆಗೆ ಆ ವ್ಯಕ್ತಿ ಲಸಿಕೆ ಹಾಕಿಸಿಕೊಳ್ಳಲು ಬಂದಾಗ ಆತನಿಂದ ಇತರರಿಗೆ ಹರಡುವ ಸಾಧ್ಯತೆ ಇರುತ್ತದೆ.

**4 ಅಡ್ಡ ಪರಿಣಾಮ ಕಾಣಿಸಿಕೊಳ್ಳಲಿದೆಯೇ?**
ಎಲ್ಲಾ ವಿಧದ ಸಾಂಕ್ರಾಮಿಕ ರೋಗ ಲಸಿಕೆಗಳು ಕೆಲವರಿಗೆ ಸಣ್ಣ ಪ್ರಮಾಣದ ಅಡ್ಡಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಅದೇ ರೀತಿ ಕೊರೊನಾ ಲಸಿಕೆ ಪಡೆದಾಗಲೂ ಕೆಲವರಿಗೆ ಲಸಿಕೆ (ಚುಚ್ಚುಮದ್ದು) ಪಡೆದ ಜಾಗದಲ್ಲಿ ನೋವು, ಜತೆಗೆ ಜ್ವರ, ತಲೆ ನೋವು, ಅಲರ್ಜಿ ಕಾಣಿಸಿಕೊಳ್ಳಬಹುದು.

**5 ಲಸಿಕೆ ಚುಚ್ಚುಮದ್ದೋ ಅಥವಾ ಹನಿಮಾದರಿ?**
ಮೊದಲ ಹಂತದ ಲಸಿಕೆ ಚುಚ್ಚುಮದ್ದಾಗಿರುತ್ತದೆ. 28 ದಿನಗಳ ಅಂತರದಲ್ಲಿ ತೋಳಿಗೆ 2 ಬಾರಿ ನೀಡಲಾಗುತ್ತದೆ. 2 ಅಥವಾ 3ನೇ ಹಂತದಲ್ಲಿ ಹನಿ ಮಾದರಿಯಲ್ಲಿದ್ದು, ಮೂಗಿಗೆ ಹಾಕಲಾಗುತ್ತದೆ.

## ಬ್ರಹ್ಮಾಸ್ತ್ರ ಪ್ರಯೋಗಕ್ಕೆ ಗುರುಬಲ

# ದೇಶಕ್ಕೆ ಸಂಕ್ರಾಂತಿ ಕೊಡುಗೆ



- ಅನುಮೋದನೆ ನೀಡಿರುವ 10 ದಿನದೊಳಗೆ ಲಸಿಕೆ ಕಾರ್ಯಕ್ರಮ
- ವೈದ್ಯಕೀಯ ಸಿಬ್ಬಂದಿ ಮತ್ತು ಮುಂಚೂಣಿ ಕಾರ್ಯಕರ್ತರಿಗೆ ಆದ್ಯತೆ
- ದೇಶದಲ್ಲಿ 4 ಲಸಿಕಾ ಸಂಗ್ರಹ ಕೇಂದ್ರ, 37 ಕಡೆ ವ್ಯಾಕ್ಸಿನ್ ಸ್ಟೋರ್‌ಗಳು

**ನವದೆಹಲಿ:** ಲಸಿಕೆಗಾಗಿ ಕಾಯುತ್ತಿರುವ ಜನರಿಗೆ ಕೇಂದ್ರ ಆರೋಗ್ಯ ಇಲಾಖೆ ಶುಭ ಸುದ್ದಿ ನೀಡಿದೆ. ತುರ್ತು ಬಳಕೆಗೆ ಅನುಮೋದನೆ ನೀಡಿರುವ ಹತ್ತು ದಿನಗಳೊಳಗೆ ಲಸಿಕಾ ಕಾರ್ಯಕ್ರಮ ಶುರುವಾಗಲಿದೆ ಎಂದು ಆರೋಗ್ಯ ಇಲಾಖೆ ಕಾರ್ಯದರ್ಶಿ ರಾಜೇಶ್ ಭೂಷಣ್ ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ಸಂಕ್ರಾಂತಿಗೂ ಮುನ್ನವೇ ಲಸಿಕಾ ಕಾರ್ಯಕ್ರಮ ಆರಂಭವಾಗಲಿದೆ.

ವೈದ್ಯಕೀಯ ಸಿಬ್ಬಂದಿ ಮತ್ತು ಮುಂಚೂಣಿ ಕಾರ್ಯಕರ್ತರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಲಾಗುವುದು. ಅವರ ಮಾಹಿತಿಗಳನ್ನು ಈಗಾಗಲೇ ಕೊವಿನ್ ಜಾಲದಲ್ಲಿ ಸೇರಿಸಿರುವುದರಿಂದ ಅವರು ಇನ್ನೊಮ್ಮೆ ನೋಂದಣಿ ಮಾಡಿಕೊಳ್ಳುವ ಅಗತ್ಯವಿಲ್ಲ. ಯಾವ್ಯಾವ ಕೇಂದ್ರಗಳಲ್ಲಿ ಎಷ್ಟು ಲಸಿಕೆಗಳಿವೆ ಮತ್ತು ಉಷ್ಣಾಂಶ ಎಷ್ಟಿದೆ ಎನ್ನುವುದರ ಮೇಲೆ ಆನ್‌ಲೈನ್ ಮೂಲಕವೇ ನಿಗಾ ಇಡಬಹುದಾಗಿದೆ ಎಂದು ಅವರು ಹೇಳಿದ್ದಾರೆ.

**ಕೊರೊನಾ ಹೆಮ್ಮಾರಿ**

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ, ಆಸ್ಟ್ರಾಜೆನಿಕಾಗಳು ಅಭಿವೃದ್ಧಿಪಡಿಸಿದ್ದು, ಸೀರಮ್ ಇನ್‌ಸ್ಟಿಟ್ಯೂಟ್ ತಯಾರಿಸುತ್ತಿರುವ ಕೊವಿಶೀಲ್ಡ್ ಹಾಗೂ ಐಸಿಎಂಆರ್ ಮತ್ತು ಎನ್‌ಐವಿ ಮಾರ್ಗದರ್ಶನದಲ್ಲಿ ಭಾರತ್ ಬಯೋಟೆಕ್ ಸಂಸ್ಥೆ ಅಭಿವೃದ್ಧಿಪಡಿಸಿರುವ ಕೊವ್ಯಾಕ್ಸಿನ್ ಲಸಿಕೆಗಳ ತುರ್ತು ಬಳಕೆಗೆ ಭಾರತೀಯ ಔಷಧ ಮಹಾ ನಿಯಂತ್ರಕರಿಂದ ಈಗಾಗಲೇ ಅನುಮೋದನೆ ದೊರೆತಿದೆ. ಜೊತೆಗೆ ದೇಶಾದ್ಯಂತ ಲಸಿಕೆ ಕಾರ್ಯಕ್ರಮದ ಪೂರ್ವಾಭ್ಯಾಸ ನಡೆಸಿ ವ್ಯವಸ್ಥೆಯನ್ನು ಪರಿಶೀಲನೆ ಮಾಡಲಾಗಿದೆ. ಅಲ್ಲಿಂದ ಬಂದಿರುವ ಪ್ರತಿಕ್ರಿಯೆಯ ಆಧಾರದ ಮೇಲೆ ತುರ್ತಾಗಿ ಲಸಿಕಾ ಕಾರ್ಯಕ್ರಮವನ್ನು ಜಾರಿಗೊಳಿಸಲು ನಿರ್ಧರಿಸಲಾಗಿದೆ. ಲಸಿಕೆ ಪಡೆದುಕೊಳ್ಳುವವರ ಮಾಹಿತಿಗಳನ್ನು ಸಂಗ್ರಹಿಸಲು ಕೊವಿನ್ ಎನ್ನುವ ಆನ್‌ಲೈನ್ ಜಾಲ ರೂಪಿಸಿದ್ದು, ಇದು ಸೂಕ್ತವಾಗಿ ಕೆಲಸ ನಿರ್ವಹಿಸುತ್ತಿದೆಯೇ ಎಂದು ಪರಿಶೀಲಿಸಲಾಗಿದೆ.

ಕರ್ನೂಲ್, ಮುಂಬೈ, ಚೆನ್ನೈ ಮತ್ತು ಕೊಲ್ಕತ್ತಾಗಳಲ್ಲಿ ಪ್ರಾಥಮಿಕ ವ್ಯಾಕ್ಸಿನ್ ಸಂಗ್ರಹ ಕೇಂದ್ರಗಳನ್ನು ರಚಿಸಲಾಗಿದೆ. ಬಾರಿ ಪ್ರಮಾಣದಲ್ಲಿ ಲಸಿಕೆಯನ್ನು ಸಂಗ್ರಹಿಸಲು ಸಾಧ್ಯವಾಗುವ 37 ಕಡೆಗಳಲ್ಲಿ ವ್ಯಾಕ್ಸಿನ್ ಸ್ಟೋರ್‌ಗಳನ್ನು ರೂಪಿಸಲಾಗಿದೆ.

ಸಂಯುಕ್ತ ಕರ್ನಾಟಕ

# ನಾಪತ್ತೆಯಾದವರ ಪತ್ತೆಗೆ ವಿಶೇಷ ತಂಡ

ಸಂ.ಕ.ಸಮಾಚಾರ ಬೆಂಗಳೂರು

ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಬಂದು ನಾಪತ್ತೆಯಾದವರ ಪತ್ತೆಗೆ ಬಿಬಿಎಂಪಿಯ ಎಂಟು ವಲಯಗಳಲ್ಲಿ ವಿಶೇಷ ತಂಡ ರಚನೆ ಮಾಡಲಾಗಿದೆ.

ಈ ಕುರಿತು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ರಾಜೇಂದ್ರ ಚೋಳನ್ ಸುದ್ದಿಗಾರರಿಗೆ ತಿಳಿಸಿ, ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಡಿ.1ರಿಂದ 21ರವರೆಗೆ 1,426 ಆಗಮಿಸಿದ್ದರು. ಡಿ.30ರಂದು 553 ಮಂದಿ, ಡಿ.31ರಂದು 486 ಮಂದಿ ಆಗಮಿಸಿದ್ದಾರೆ. ಈ ಪೈಕಿ ಡಿ.1ರಿಂದ ಡಿ.21ರವರೆಗೆ ಆಗಮಿಸಿದವರಲ್ಲಿ 78 ಮಂದಿ, ಡಿ.30ರಂದು ಆಗಮಿಸಿದವರ ಪೈಕಿ 21 ಮಂದಿ ಹಾಗೂ ಡಿ.31ರಂದು ಆಗಮಿಸಿದವರಲ್ಲಿ 14 ಮಂದಿ ಸೇರಿದಂತೆ ಒಟ್ಟು 114 ಮಂದಿ ನಾಪತ್ತೆಯಾಗಿದ್ದಾರೆ. ನಾಪತ್ತೆಯಾದವರ ಪತ್ತೆಗೆ ವಲಯವಾರು ವಿಶೇಷ ತಂಡಗಳನ್ನು ರಚನೆ ಮಾಡಲಾಗಿದೆ. ಎರಡು ಮೂರು ದಿನದಲ್ಲಿ ಎಲ್ಲರನ್ನು ಪತ್ತೆ ಮಾಡಲಾಗುವುದು ಎಂದು ವಿವರಿಸಿದರು.

ನಾಪತ್ತೆಯಾದವರ ಪೈಕಿ ಐಟಿ–ಬಿಟಿ ಕಂಪನಿಗಳು ಹೆಚ್ಚಾಗಿರುವ ಮಹದೇವಪುರ ಭಾಗದವರು ಹೆಚ್ಚಾಗಿದ್ದಾರೆ. ಬಹುತೇಕ ಉದ್ಯೋಗಿಗಳಾಗಿರಬಹುದು. ಅನೇಕರ ಬ್ರಿಟನ್ ಮೊಬೈಲ್ ಸಂಖ್ಯೆ ಹಾಗೂ ವಿಳಾಸ ನೀಡಿದ್ದಾರೆ. ವಾಟ್ಸಾಪ್ ಕಾಲ್ ಮೂಲಕ ಸಂಪರ್ಕ ಮಾಡುವ ಪ್ರಯತ್ನವನ್ನು ವಿಶೇಷ ತಂಡ ಅಧಿಕಾರಿಗಳು ಮಾಡುತ್ತಿದ್ದಾರೆ. ಒಂದು ವೇಳೆ ಪತ್ತೆಯಾಗದ ಪಕ್ಷದಲ್ಲಿ ಅವರ ವಿವರವನ್ನು ಪೊಲೀಸ್ ಇಲಾಖೆ ನೀಡಲಾಗುತ್ತದೆ. ಪೊಲೀಸ್ ಇಲಾಖೆ ಪಾಸ್‌ಪೋರ್ಟ್ ಅಧಿಕಾರಿಗಳ ಸಹಕಾರದೊಂದಿಗೆ ಪತ್ತೆ ಮಾಡುವ ಪ್ರಯತ್ನ ನಡೆಸುತ್ತಿದ್ದಾರೆ. ಶೀಘ್ರದಲ್ಲಿ ನಾಪತ್ತೆಯಾಗಿರುವ ಎಲ್ಲರನ್ನೂ ಪತ್ತೆ ಮಾಡಲಾಗುವುದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂಯುಕ್ತ ಕರ್ನಾಟಕ

### 447 ಮಂದಿ ಕಾರ್ಯನಿರ್ವಹಣೆ । 15 ರಿಂದ 20 ಮಕ್ಕಳಿಗೆ ನಿತ್ಯ ಪಾಠ

# ಪಾಲಿಕೆ ಶಿಕ್ಷಕರು ನಂಜು ಮುಕ್ತ

**ಸಂ.ಕ.ಸಮಾಚಾರ ಬೆಂಗಳೂರು**

ಬಿಬಿಎಂಪಿ ವತಿಯಿಂದ ನಡೆಸಲಾಗುತ್ತಿರುವ ಶಾಲಾ–ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರು ಹಾಗೂ ಉಪನ್ಯಾಸಕರು ಕೊರೊನಾ ಸೋಂಕಿನಿಂದ ಮುಕ್ತರಾಗಿದ್ದಾರೆ.

ಜ.1ರಿಂದ ಶಾಲಾ ಕಾಲೇಜುಗಳು ಆರಂಭವಾಗಿದ್ದವು. ಇದಕ್ಕೂ ಮುನ್ನ ಎಲ್ಲ ಶಿಕ್ಷಕರು, ಉಪನ್ಯಾಸಕರು ಕಡ್ಡಾಯವಾಗಿ ಕೊರೊನಾ ಸೋಂಕಿನ ಪರೀಕ್ಷೆ ಮಾಡಿಸಿಕೊಳ್ಳಬೇಕೆಂದು ಸೂಚಿಸಲಾಗಿತ್ತು. ಇದರಿಂದ ಬಿಬಿಎಂಪಿ ವ್ಯಾಪ್ತಿಯ 64 ಶಾಲೆ–ಕಾಲೇಜುಗಳಲ್ಲಿ ಶಿಕ್ಷಕರು ಮತ್ತು ಉಪನ್ಯಾಸಕರು ಸೇರಿ 447 ಮಂದಿ ಕೆಲಸ ಮಾಡುತ್ತಿದ್ದು, ಯಾರೊಬ್ಬರಿಗೂ ಸೋಂಕು ದೃಢಪಟ್ಟಿಲ್ಲ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಜೆ. ಮಂಜುನಾಥ್ ಮಾಹಿತಿ ನೀಡಿದ್ದಾರೆ.

ಬಿಬಿಎಂಪಿಯಲ್ಲಿ ಜ.1 ರಿಂದ 33 ಪ್ರೌಢಶಾಲೆಗಳು, 15 ಪದವಿ ಪೂರ್ವ ಕಾಲೇಜುಗಳಲ್ಲಿ ದಿನಿತ್ಯ ತರಗತಿಗಳನ್ನು ಹಾಗೂ 16 ಪ್ರಾಥಮಿಕ ಶಾಲೆಗಳಲ್ಲಿ 6 ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾಗಮ ತರಗತಿ ಆರಂಭಿಸಲಾಗಿದೆ. ಇವರಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ 275 ಶಿಕ್ಷಕರು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ 172 ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರೆಲ್ಲರಿಗೂ ಕೋವಿಡ್ ಪರೀಕ್ಷೆ ಮಾಡಲಾಗಿದ್ದು ಯಾರೊಬ್ಬರಿಗೂ ಸೋಂಕು ದೃಢಪಟ್ಟಿಲ್ಲ. ಎಲ್ಲ ತರಗತಿಗಳು ಸುಸೂತ್ರವಾಗಿ ನಡೆಯುತ್ತಿವೆ ಎಂದು ಮಾಹಿತಿ ನೀಡಿದರು.

ಪ್ರತಿನಿತ್ಯ ಶಾಲೆಗೆ ಆಗಮಿಸುವ ಮಕ್ಕಳನ್ನು ಥರ್ಮಲ್ ಸ್ಕ್ರೀನಿಂಗ್ ಮಾಡಿ, ಕೈಗಳಿಗೆ ಸ್ಯಾನಿಟೈಸರ್ ಹಾಕಲಾಗುತ್ತಿದೆ. ಒಂದು ಕೊಠಡಿಯಲ್ಲಿ 15 ರಿಂದ 20 ಮಕ್ಕಳಿಗೆ ಪಾಠ ಮಾಡುತ್ತಿದ್ದು, ಕೋವಿಡ್ ಮಾರ್ಗಸೂಚಿಗಳ ಪಾಲನೆಗೆ

ಮಕ್ಕಳಲ್ಲಿ ಆಗಾಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ಹೇಳಿದರು.

## ರಾಜಕಾರಣಕ್ಕಾಗಿ ಲಸಿಕೆ ವಿರುದ್ಧ ಅಪಪ್ರಚಾರ | ಕೇಂದ್ರ-ರಾಜ್ಯ ಸರ್ಕಾರದಿಂದ ಜನರ ಆರೋಗ್ಯದ ಬಗ್ಗೆ ಕಾಳಜಿ

# ಜೀವದ ಬಗ್ಗೆ ವಿಪಕ್ಷಗಳಿಂದ ಚೆಲ್ಲಾಟ

• ದಿಗಂತ ವರದಿ, ಬೆಂಗಳೂರು

ಕೊರೋನಾ ಲಸಿಕೆಯ ಕುರಿತು ವಿರೋಧ ಪಕ್ಷಗಳು ಸಾರ್ವಜನಿಕರಿಗೆ ತಪ್ಪು ಸಂದೇಶ ನೀಡುತ್ತಿರುವುದು ಸರಿಯಲ್ಲ ಎಂದು ಸಂಸದ ಹಾಗೂ ರಾಷ್ಟ್ರೀಯ ಬಿಜೆಪಿ ಯುವ ಘಟಕದ ಅಧ್ಯಕ್ಷ ತೇಜಸ್ವಿ ಸೂರ್ಯ ತಿಳಿಸಿದರು.



■ **ಕೊರೋನಾ ಲಸಿಕೆ ವಿರುದ್ಧ ವಿಪಕ್ಷಗಳ ಹೇಳಿಕೆಗೆ ರಾಷ್ಟ್ರೀಯ ಬಿಜೆಪಿ ಯುವ ಘಟಕದ ಅಧ್ಯಕ್ಷ ತೇಜಸ್ವಿ ಸೂರ್ಯ ಪ್ರತಿಕ್ರಿಯೆ**

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಆರೋಗ್ಯಾಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿ ಬಳಿಕ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಕೋವಿಡ್ ಲಸಿಕೆಗೆ ಬಿಜೆಪಿ ಲಸಿಕೆ ಎಂದು ಬಣ್ಣಿಸಿರುವುದು ಸರಿಯಲ್ಲ, ಸಾರ್ವಜನಿಕರನ್ನು ತಪ್ಪು ದಾರಿಗೆ ಎಳೆಯುವುದು ಬೇಜವಾಬ್ದಾರಿಯ ನಡೆಯಾಗಿರುವ ಜತೆಗೆ ಕೇಂದ್ರ ಸರ್ಕಾರ ಜನರ ಆರೋಗ್ಯ ರಕ್ಷಣೆಗೆ ಕೈಗೊಂಡಿರುವ ಕ್ರಮವನ್ನು ರಾಜಕೀಯಗೊಳಿಸಬಾರದು ಎಂದರು.

**ಲಕ್ಷಾಂತರ ಜನರ ಜೀವ ಉಳಿವು:** ಕೊರೋನಾ ವ್ಯಾಕ್ಸಿನ್ ಬಂದ ಮೇಲೆ ದೇಶದಲ್ಲಿ ಲಕ್ಷಾಂತರ ಜನರ ಜೀವ ಉಳಿಯುತ್ತದೆ. ರಾಜಕೀಯ ಹೇಳಿಕೆ ನೀಡಿ ಜನರ ಜೀವನದ ಜೊತೆ ಚೆಲ್ಲಾಟ ಆಡಬಾರದು. ಕರ್ನಾಟಕದಲ್ಲಿ ಯಾವುದೇ ರಾಜಕೀಯ ಪಕ್ಷದವರು ವ್ಯಾಕ್ಸಿನ್ ಕುರಿತು ಹಗುರವಾಗಿ ಮಾತನಾಡಿರುವುದು ಸಮಾಧಾನ ತಂದಿದೆ. ಎಂದು ತಿಳಿಸಿದರು.

**ದೇಶಿ ವ್ಯಾಕ್ಸಿನ್‌ಕೂಡ ಸಿದ್ಧ:** ಕೋವಿಡ್ ಲಸಿಕೆಗೆ ಸಂಬಂಧಿಸಿದ ಸುಳ್ಳು ಸುದ್ದಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು. ಲಸಿಕೆಗಾಗಿ ಜನ ಕಾತುರದಿಂದ ಕಾಯುತ್ತಿದ್ದಾರೆ. ಹಲವು ಹಂತದ ಸಂಶೋಧನೆಗಳ ನಡೆಸಿದ ನಂತರವಷ್ಟೇ ಲಸಿಕೆ ಮಾರುಕಟ್ಟೆಗೆ ಮುಕ್ತವಾಗಲಿದೆ. ಲಸಿಕೆ ತೆಗೆದುಕೊಳ್ಳುವುದರಿಂದ ಮಕ್ಕಳಾಗದಿರುವುದು ಅಥವಾ ದೈಹಿಕವಾಗಿ ಸಮಸ್ಯೆಗೆ ಒಳಗಾಗುವುದಿಲ್ಲ. ಮೊದಲ ಬಾರಿಗೆ ಉಳಿದ ದೇಶಗಳಷ್ಟೇ ವೇಗವಾಗಿ ಭಾರತದ ಎರಡು ವ್ಯಾಕ್ಸಿನ್ ಸಿದ್ಧಪಡಿಸಿದೆ ಎಂದರು.

### ರಾಜಧಾನಿಯಲ್ಲಿ ಮೂರು ಹಂತದಲ್ಲಿ ವ್ಯಾಕ್ಸಿನ್



ಬೆಂಗಳೂರಿನಲ್ಲಿ ಮೂರು ಹಂತದಲ್ಲಿ ಕೋವಿಡ್ ವ್ಯಾಕ್ಸಿನ್ ನೀಡಲು ನಿರ್ಧರಿಸಲಾಗಿದೆ. ಮೊದಲ ಹಂತದಲ್ಲಿ 1.68 ಲಕ್ಷ ಜನ ಕೊರೊನಾ ವಾರಿಯರ್ಸ್‌ಗೆ, ಎರಡನೇ ಹಂತದಲ್ಲಿ ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು ಸೇರಿದಂತೆ ಎರಡರಿಂದ ಮೂರು ಲಕ್ಷ ಜನರಿಗೆ ಹಾಗೂ ಮೂರನೇ ಹಂತದಲ್ಲಿ 50 ವರ್ಷಕ್ಕಿಂತ ಮೇಲ್ಪಟ್ಟವರು ಹಾಗೂ ಆರೋಗ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಲಸಿಕೆ ನೀಡಲಾಗುವುದು ಎಂದರು.

> **ಲಸಿಕೆಗಾಗಿ ಜನ ಕಾತರದಿಂದ ಕಾಯುತ್ತಿದ್ದಾರೆ. ಹಲವು ಹಂತದ ಸಂಶೋಧನೆಗಳ ನಡೆಸಿದ ನಂತರ ವಷ್ಟೇ ಲಸಿಕೆ ಮಾರುಕಟ್ಟೆಗೆ ಮುಕ್ತವಾಗಲಿದೆ.**
> ■ ತೇಜಸ್ವಿ ಸೂರ್ಯ , ಸಂಸದ ಹಾಗೂ ಅಧ್ಯಕ್ಷರು. ರಾಷ್ಟ್ರೀಯ ಬಿಜೆಪಿ ಯುವ ಘಟಕ

## ಕೋವಿಡ್ ಲಸಿಕೆ ಬಗ್ಗೆ ಅನುಮಾನ ಪರಿಹರಿಸಿ

**ಮೈಸೂರು:** ಕೊರೋನಾ ವ್ಯಾಕ್ಸಿನ್ ನೀಡುವ ವಿಚಾರದಲ್ಲಿ ಬಿಜೆಪಿ ನೂರಕ್ಕೆ ನೂರು ರಾಜಕೀಯ ಮಾಡುತ್ತಿದೆ. ಇದನ್ನು ರಾಜಕೀಯ ಮಾಡಬಾರದು. ನಮಗೆ ರಾಜಕೀಯ ಮಾಡುವ ಉದ್ದೇಶ ಇಲ್ಲ ಎಂದು ಕೆಪಿಸಿಸಿ ವಕ್ತಾರ ಮಾಜಿ ಸಂಸದ ಆರ್.ಧ್ರುವನಾರಾಯಣ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಹಾರ ಚುನಾವಣೆ ವೇಳೆಯೇ ಇದು ಸಾಬೀತಾಗಿದೆ. ಕೋವಿಡ್ ವಿಚಾರದಲ್ಲಿ ಬಿಜೆಪಿಗೆ ವಿಶಾಲ ಮನಸ್ಥಿತಿ ಇರಬೇಕಾಗಿತ್ತು. ಆದರೆ, ಬಿಜೆಪಿಯವರು ಅದನ್ನು ಹೊಂದಿಲ್ಲ. ಕೋವಿಡ್ ವ್ಯಾಕ್ಸಿನ್ ಸಂಪೂರ್ಣ ಮಾಹಿತಿಯನ್ನು ಜನರಿಗೆ ನೀಡಬೇಕು. ಈ ಬಗ್ಗೆ ಇರುವ ಗೊಂದಲ ಬಗೆಹರಿಸಬೇಕು. ವ್ಯಾಕ್ಸಿನ್ ಕೊಡುವ ಮುನ್ನ ಎಲ್ಲಾ ಅನುಮಾನಗಳಿಗೆ ಉತ್ತರ ಕೊಡಬೇಕು ಎಂದು ಆಗ್ರಹಿಸಿದರು.

## ಕೊರೋನಾ ವಾರಿಯರ್‌ಸ್‌ಗೆ ಮಾಡಿದ ಅವಮಾನ

**ಹಳಿಯಾಳ:** ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ ಯಾದವ್ ಇತ್ತೀಚೆಗೆ ನೀಡಿದ ಹೇಳಿಕೆಯು ಕೋವಿಡ್ ವ್ಯಾಕ್ಸಿನ್ ತಯಾರಿಸಲು ವಿಜ್ಞಾನಿಗಳು, ಸಂಶೋಧಕರು ಹಾಗೂ ಕೋವಿಡ್ ಮುಕ್ತ ಭಾರತಕ್ಕಾಗಿ ಹಗಲು ರಾತ್ರಿ ದುಡಿದ ಕೊರೋನಾ ವಾರಿಯರ್ಸ್‌ಗೆ ಮಾಡಿದ ಅವಮಾನ ಎಂದು ಮಾಜಿ ಸಚಿವ ಆರ್.ವಿ.ದೇಶಪಾಂಡೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಜವಾಬ್ದಾರಿಯುತ ನಾಗರಿಕರಾಗಿ ಜಾಗೃತಿ ಹಾಗೂ ಆತ್ಮವಿಶ್ವಾಸ ಮೂಡಿಸುವ ಕೆಲಸ ನಮ್ಮದಾಗಬೇಕಾಗಿದೆ. ಕೇವಲ ರಾಜಕೀಯ ಉದ್ದೇಶಕ್ಕಾಗಿ ತಪ್ಪು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿರುವ ಅಖಿಲೇಶ್ ಯಾದವ್‌ರವರ ಹೇಳಿಕೆಯು ಬಾಲಿಶತನದಿಂದ ಕೂಡಿದೆ ಎಂದಿದ್ದಾರೆ.

ಕೊವಿಶೀಲ್ಡ್ ಹಾಗೂ ದೇಶೀಯವಾಗಿ ಅಭಿವೃದ್ಧಿಪಡಿಸಿದ ಕೊವ್ಯಾಕ್ಸಿನ್ ಲಸಿಕೆಯು ದೇಶದ ಆರ್ಥಿಕ ಸ್ಥಿತಿಯನ್ನೆ ಅಲುಗಾಡಿಸಿದ ಕೊವಿಡ್-19 ವಿರುದ್ಧ ಹೋರಾಡಲು ಆಶಾಕಿರಣವಾಗಿ ಗೋಚರಿಸಿದೆ. ಇದು ವಿಜ್ಞಾನಿಗಳ ಸತತ ಪರಿಶ್ರಮದ ಫಲವಾಗಿ ಮಾನವೀಯತೆಯ ಗೆಲುವಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.



## ಹೇಳಿಕೆ ನೀಡುವವರೇ ಮೊದಲು ಲಸಿಕೆ ಹಾಕಿಸಿಕೊಳ್ಳಲಿ

• ದಿಗಂತ ವರದಿ, ವಿಜಯಪುರ

ಯಾವುದೇ ವ್ಯಾಕ್ಸಿನ್ ಮಾನ್ಯತೆ ನೀಡಬೇಕಾದರೆ ಮೂರನೇ ಹಂತದ ಪ್ರಯೋಗ ಅವಶ್ಯವಿದೆ. ಈಗ ಲಸಿಕೆ ತುರ್ತು ಅವಶ್ಯಕವಿರುವುದು ನಿಜ. ಹಾಗಂತ ಸಂಪೂರ್ಣ ಪರೀಕ್ಷೆಯಾಗದೇ ಜನರ ಮೇಲೆ ಇದನ್ನು ಪ್ರಯೋಗ ಮಾಡುವಂತಿಲ್ಲ ಎಂದು ಶಾಸಕ ಎಂ.ಬಿ. ಪಾಟೀಲ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಆತ್ಮ ನಿರ್ಭರ ಹೆಸರಿನಲ್ಲಿ ಜನರ ಮೇಲೆ ಕೊರೋನಾ ಲಸಿಕೆ ಪ್ರಯೋಗ ಸರಿಯಲ್ಲ, ಮೊದಲು ಲಸಿಕೆಯ ಎಲ್ಲ ಪರೀಕ್ಷೆಗಳು ಪೂರ್ಣವಾಗಲಿ. ರಷ್ಯಾ ಅಧ್ಯಕ್ಷ ಪುಟಿನ್ ಮಾದರಿಯಲ್ಲಿ ಇದನ್ನು ಸಮರ್ಥಿಸುವವರು ಮೊದಲು ಲಸಿಕೆ ಬಳಸಲಿ ಎಂದು ಪ್ರಧಾನಿ ಹೆಸರೇಳದೆ ಪರೋಕ್ಷವಾಗಿ ಟೀಕಿಸಿದರು.

ಲಸಿಕೆ ವಿಷಯದಲ್ಲಿ ರಾಜಕೀಯ ಬೆರೆಸುವುದು ಸರಿಯಲ್ಲ, ಶಾಲೆ-ಕಾಲೇಜುಗಳು ಆರಂಭವಾಗಿವೆ, ಬಡ ವಿದ್ಯಾರ್ಥಿಗಳು, ಪೋಷಕರು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಿದೆ. ಕೊರೋನಾ ಬಗ್ಗೆ ಮುನ್ನೆಚ್ಚರಿಕೆ ವಹಿಸಿಕೊಂಡು ಮುಂದಡಿ ಇಡಬೇಕಾಗಿದೆ ಎಂದರು.

**ಬ್ರಿಟನ್ ಕೊರೋನಾ ಬಗ್ಗೆ ಅಧ್ಯಯನ ನಡೆಯಲಿ:** ಅಲ್ಲದೆ ಬ್ರಿಟನ್ ರೂಪಾಂತರ ಕೊರೋನಾ ವಿಚಾರವಾಗಿ ಪ್ರತಿಕ್ರಿಯಿಸಿ, ಇದರ ಬಗ್ಗೆ ಸಾಕಷ್ಟು ಅಧ್ಯಯನ ನಡೆಯಬೇಕಿದೆ. ಬ್ರಿಟನ್ ಕೊರೋನಾ ಈಗ ಬೆಂಗಳೂರು, ಕೇರಳಕ್ಕೆ ಕಾಲಿಟ್ಟಿದೆ. ಸರ್ಕಾರ ತಕ್ಷಣವೇ ತಜ್ಞರ ಜೊತೆ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕು. ಹಳೆಯ ಕೊರೋನಾ ಮಕ್ಕಳ ಮೇಲೆ ಅಷ್ಟೊಂದು ಪರಿಣಾಮ ಬೀರಿರಲಿಲ್ಲ, ಆದರೆ , ಬ್ರಿಟನ್ ಕೊರೋನಾ ಮಕ್ಕಳ ಮೇಲೆ ಯಾವ ರೀತಿ ಪರಿಣಾಮ ಬೀರಲಿದೆ ಎಂಬುದರ ಬಗ್ಗೆ ಅಧ್ಯಯನ ನಡೆಯಬೇಕಿದೆ ಎಂದರು.

ಹೊಸ ದಿಗಂತ

# ರೂಪಾಂತರ ಕೊರೋನಾ ಸೋಂಕಿತರ ಸಂಖ್ಯೆ 11ಕ್ಕೆ

**ಬೆಂಗಳೂರು:** ಎಲೆಕ್ಟ್ರಾನಿಕ್ ಸಿಟಿ ಭಾಗದ ಒಬ್ಬ ವ್ಯಕ್ತಿಗೆ ಮಂಗಳವಾರ ರೂಪಾಂತರ ಕೊರೋನಾ ಸೋಂಕು ಕಾಣಿಸಿಕೊಂಡಿದ್ದು, ಈ ಮೂಲಕ ಬಿಬಿಎಂಪಿ ಹಾಗೂ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ 11 ಜನರಿಗೆ ರೂಪಾಂತರ ಕೊರೋನಾ ಧೃಢಪಟ್ಟಿದೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ರಾಜೇಂದ್ರ, ಚೋಳನ್ ತಿಳಿಸಿದರು. ಬಿಬಿಎಂಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬ್ರಿಟನ್‌ನಿಂದ ವಾಪಾಸ್‌ಗಿದ್ದ ಶಿವಮೊಗ್ಗದ ಮೂರು ಮಂದಿಯಲ್ಲಿ ರೂಪಾಂತರ ಸೋಂಕು ಕಾಣಿಸಿಕೊಂಡಿತ್ತು.ಅವರೊಂದಿಗೆ ಸಂಪರ್ಕದಲ್ಲಿ ಇದ್ದ ವ್ಯಕ್ತಿ ಎಲೆಕ್ಟ್ರಾನಿಕ್ ಸಿಟಿಯಲ್ಲಿ ವಾಸವಿದ್ದರು. ಅವರಿಗೂ ಇದೀಗ ರೂಪಾಂತರ ಕೋವಿಡ್ ಸೋಂಕು ಕಾಣಿಸಿಕೊಂಡಿದೆ. ಈಗಾಗಲೇ ಅವರು ಸಾಂಸ್ಥಿಕ ಕ್ವಾರಂಟೈನ್‌ನಲ್ಲಿ ಇದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಸೋಂಕಿತರು 42 ಪ್ರಾಥಮಿಕ ಮತ್ತು 68 ಪರೋಕ್ಷ ಸಂಪರ್ಕಿತರಿದ್ದಾರೆ ಎಂದರು.

ವಿಶೇಷ ತಂಡ ರಚನೆ: ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ವಾಪಾಸ್ ಆಗಿ ನಾಪತ್ತೆಯಾದವರ ಪತ್ತೆಗೆ ಬಿಬಿಎಂಪಿಯ ಎಂಟು ವಲಯಗಳಲ್ಲಿ ವಿಶೇಷ ತಂಡ ರಚನೆ ಮಾಡಲಾಗಿದೆ. ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಡಿ.1ರಿಂದ 21ವರೆಗೆ 1,426 ಆಗಮಿಸಿದ್ದರು. ಡಿ.30 ರಂದು 553 ಮಂದಿ, ಡಿ.31 ರಂದು 486 ಮಂದಿ ಆಗಮಿಸಿದ್ದಾರೆ. ಈ ಪೈಕಿ ಡಿ.1ರಿಂದ ಡಿ.21 ವರೆಗೆ ಆಗಮಿಸಿದವರಲ್ಲಿ 78 ಮಂದಿ, ಡಿ.30 ರಂದು ಆಗಮಿಸಿದವರ ಪೈಕಿ 21 ಮಂದಿ ಹಾಗೂ ಡಿ.31 ರಂದು ಆಗಮಿಸಿದವರಲ್ಲಿ 14 ಮಂದಿ ಸೇರಿದಂತೆ ಒಟ್ಟು 114 ಮಂದಿ ನಾಪತ್ತೆ ಯಾಗಿದ್ದಾರೆ. ನಾಪತ್ತೆಯಾದವರ ಪತ್ತೆಗೆ ವಲಯವಾರು ವಿಶೇಷ ತಂಡಗಳನ್ನು ರಚನೆ

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ತುರ್ತು ಬಳಕೆಗೆ ಅನುಮತಿ ನೀಡಿದ 10 ದಿನಗಳ ಒಳಗೆ ಕೋವಿಡ್-19 ಲಸಿಕೆ ಬಿಡುಗಡೆ: ಆರೋಗ್ಯ ಸಚಿವಾಲಯ

ಹೊಸದಿಲ್ಲಿ, ಜ. 5: ತುರ್ತು ಬಳಕೆಗೆ ಅನುಮತಿ ನೀಡಿದ 10 ದಿನಗಳ ಒಳಗೆ ಕೋವಿಡ್-19 ಲಸಿಕೆ ಬಿಡುಗಡೆಗೊಳಿಸಲು ಸರಕಾರ ಸಿದ್ಧವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಂಗಳವಾರ ಹೇಳಿದೆ. ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಗೆ ಭಾರತದ ಔಷಧ ನಿಯಂತ್ರಕ ಅನುಮತಿ ನೀಡಿದ ಬಳಿಕ ಕೇಂದ್ರ ಆರೋಗ್ಯ ಸಚಿವಾಲಯ ಈ ಹೇಳಿಕೆ ನೀಡಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತಾಡಿದ ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ 'ಕೋ ವಿನ್ ವಿತರಣೆ ನಿರ್ವಹಣೆ ಯೋಜನೆ'ಯ ಮಾಹಿತಿ ನೀಡಿದರು.

ದೇಶದಲ್ಲಿ ಕರ್ನಾಲ್, ಮುಂಬೈ, ಚೆನ್ನೈ ಹಾಗೂ ಕೋಲ್ಕತಾದಲ್ಲಿ ಜಿಎಂಎಸ್‌ಡಿ ಎಂದು ಕರೆಯಲಾಗುವ 4 ಪ್ರಾಥಮಿಕ ಲಸಿಕೆ ಸಂಗ್ರಹಾಗಾರ ಹಾಗೂ 37 ಲಸಿಕೆ ಸಂಗ್ರಹಾಗಾರ ಇರಲಿದೆ. ಈ ಸಂಗ್ರಹಾಗಾರಗಳು ಲಸಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಲಿವೆ ಹಾಗೂ ವಿತರಣೆ ಮಾಡಲಿವೆ ಎಂದು ಅವರು ಹೇಳಿದರು.

ಸಂಗ್ರಹ ಮಾಡಲಾದ ಲಸಿಕೆಗಳ ಸಂಖ್ಯೆ ಹಾಗೂ ಉಷ್ಣಾಂಶ ನಿಗಾವನ್ನು ಡಿಜಿಟಲ್ ಆಗಿ ನಿರ್ವಹಿಸಲಾಗುವ ಸೌಲಭ್ಯಗಳನ್ನು ಕೂಡಾ ಇದು ಒಳಗೊಂಡಿದೆ. ನಮ್ಮ ದೇಶದಲ್ಲಿ ಈ ಸೌಲಭ್ಯ ದಶಕಗಳ ಹಿಂದಿನಿಂದಲೂ ಇದೆ ಎಂದು ಅವರು ತಿಳಿಸಿದರು.

ಸ್ವಯಂಚಾಲಿತ ಅಧಿವೇಶನ ಹಂಚಿಕೆ, 12 ಭಾಷೆಗಳಲ್ಲಿ ಎಸ್‌ಎಂಎಸ್ ರವಾನೆ, 24X7 ಸಹಾಯ ವಾಣಿ, ಸಂಯೋಜಿತ ದತ್ತಾಂಶ ಮರು ಪಡೆಯಲು ಡಿಜಿಟಲ್ ಲಾಕರ್, ಲಸಿಕೆಗಳ ಸಂಗ್ರಹಣೆ, ಕ್ಯುಆರ್ ಕೋಡ್ ಪ್ರಮಾಣ ಪತ್ರ ಮೊದಲಾದವು 'ಕೋವಿನ್ ವಿತರಣೆ ವ್ಯವಸ್ಥೆ ಯೋಜನೆ'ಯ ಕೆಲವು ಪ್ರಮುಖ ಅಂಶಗಳು ಎಂದು ರಾಜೇಶ್ ಭೂಷಣ್ ಹೇಳಿದ್ದಾರೆ.

Bengaluru Edition
Jan 6, 2021 Page No.6

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ರಾಜ್ಯದಲ್ಲಿ 11 ಮಂದಿಗೆ ರೂಪಾಂತರಿತ ಕೊರೋನ

ಬೆಂಗಳೂರು, ಜ.5: ಯು.ಕೆ.ಯಿಂದ ಬಂದಿರುವ 75 ಮಂದಿ ಹಾಗೂ ಸಂಪರ್ಕಿತರ ಪೈಕಿ 37 ಮಂದಿಗೆ ಕೊರೋನ ಸೋಂಕು ದೃಢಪಟ್ಟಿದೆ. ಈ ಪೈಕಿ 11 ಮಂದಿಗೆ ಮಾತ್ರ ರೂಪಾಂತರಗೊಂಡ ಕೊರೋನ ಸೋಂಕು ದೃಢಪಟ್ಟಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಸ್ಪಷ್ಟಪಡಿಸಿದ್ದಾರೆ.

ಮಂಗಳವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇವರಿಗೆ ಸಂಬಂಧಿಸಿದಂತೆ 17 ಮಂದಿ ಪ್ರಾಥಮಿಕ ಸಂಪರ್ಕಿತರಾಗಿದ್ದಾರೆ. ರೂಪಾಂತರಿತ ಸೋಂಕು ಬಂದವರ ಸಂಖ್ಯೆ ಏರಿಕೆಯಾಗಿಲ್ಲ ಎಂದು ತಿಳಿಸಿದರು.

ಗೃಹ ಇಲಾಖೆಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದು, ಯು.ಕೆ.ಯಿಂದ ಬಂದ ಉಳಿದವರ ಸಂಪರ್ಕ ಪತ್ತೆ ಮಾಡಲು ಸೂಚಿಸಲಾಗಿದೆ. ಅದೇ ರೀತಿ ಬಿಬಿಎಂಪಿ ಆಯುಕ್ತರೊಂದಿಗೂ ಚರ್ಚಿಸಲಾಗಿದೆ. ಆದಷ್ಟು ಶೀಘ್ರದಲ್ಲಿ ಉಳಿದವರ ಸಂಪರ್ಕ ಪತ್ತೆಯಾಗಲಿದೆ ಎಂದು ಸುಧಾಕರ್ ಹೇಳಿದರು.

Bengaluru Edition
Jan 6, 2021 Page No.8

ಸಂಜೆ ವಾಣಿ
1982

# ದೇಶದಲ್ಲಿ ಬ್ರಿಟನ್ ರೂಪಾಂತರ ಭೀತಿ

## ಸೋಂಕಿತರ ಸಂಖ್ಯೆ 58ಕ್ಕೆ ಏರಿಕೆ:ಆರೋಗ್ಯ ಸಚಿವಾಲಯದ ಮಾಹಿತಿ

**ನವದೆಹಲಿ,ಜ.೫**-ದೇಶದಲ್ಲಿ ರೂಪಾಂತರ ಕೊರೊನಾ ವೈರಸ್ ಸೋಂಕಿತರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದ್ದು, ದೇಶದಲ್ಲಿ ಇಂದು ಒಂದೇ ದಿನ 20 ಕೊರೊನಾ ಸೋಂಕಿತರಲ್ಲಿ ರೂಪಾಂತರ ಕೊರೊನಾ ವೈರಸ್ ಪತ್ತೆಯಾಗಿದೆ.

ಒಟ್ಟು ರೂಪಾಂತರ ಕೊರೊನಾ ವೈರಸ್ ಸೋಂಕಿತರ ಸಂಖ್ಯೆ 58ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲೂ ಇಂದು ಒಬ್ಬರಿಗೆ ರೂಪಾಂತರ ಕೊರೊನಾ ವೈರಸ್ ದೃಢಪಟ್ಟಿದ್ದು, ರಾಜ್ಯದಲ್ಲಿ ರೂಪಾಂತರ ಕೊರೊನಾ ವೈರಸ್ ಸೋಂಕಿತರ ಸಂಖ್ಯೆ 11ಕ್ಕೆ ಏರಿಕೆಯಾಗಿದೆ. ಈ ಪೈಕಿ ಬೆಂಗಳೂರಿನವರಾಗಿದ್ದು, 5 ಮಂದಿ ಶಿವಮೊಗ್ಗಕ್ಕೆ ಸೇರಿದವರು.

ದೇಶದಲ್ಲಿ ಇದುವರೆಗೂ ಬ್ರಿಟನ್‌ನ ರೂಪಾಂತರ ಕೊರೊನಾ ವೈರಸ್‌ನ 58 ಪ್ರಕರಣಗಳು ಪತ್ತೆಯಾಗಿವೆ ಎಂದು ಕೇಂದ್ರದ ಆರೋಗ್ಯ ಸಚಿವಾಲಯ ಹೇಳಿದೆ.

ಬ್ರಿಟನ್‌ನಲ್ಲಿ ರೂಪಾಂತರ ವೈರಸ್ ಪತ್ತೆಯಾದ ನಂತರ ಬ್ರಿಟನ್‌ನಿಂದ ದೇಶಕ್ಕೆ ವಾಪಸ್ಸಾದವರನ್ನು ಕೊರೊನಾ ಪರೀಕ್ಷೆಗೆ ಒಳಪಡಿಸಲಾಗಿದ್ದು, ಇದುವರೆಗೂ 58 ರೂಪಾಂತರ ಕೊರೊನಾ ಸೋಂಕು ಪ್ರಕರಣಗಳು ಪತ್ತೆಯಾಗಿವೆ ಎಂದು ಕೇಂದ್ರದ ಆರೋಗ್ಯ ಸಚಿವಾಲಯ ಪ್ರಕಟಣೆಯಲ್ಲಿ ಹೇಳಿದೆ.

ಕಳೆದ ಭಾನುವಾರದವರೆಗೆ ದೇಶದಲ್ಲಿ 29 ರೂಪಾಂತರ ವೈರಸ್ ಪ್ರಕರಣಗಳು ಪತ್ತೆಯಾಗಿದ್ದವು. ನಿನ್ನೆ 9 ಪ್ರಕರಣ, ಇಂದು 20 ಪ್ರಕರಣ ಪತ್ತೆಯಾಗಿ ಈಗ ಈ ರೂಪಾಂತರ ವೈರಸ್ ಪ್ರಕರಣಗಳ ಸಂಖ್ಯೆ 58ಕ್ಕೆ ಏರಿಕೆಯಾಗಿದೆ.

ಈ ರೂಪಾಂತರ ವೈರಸ್ ದೃಢಪಟ್ಟಿರುವವರನ್ನು ಆಸ್ಪತ್ರೆಗಳಲ್ಲಿ ಪ್ರತ್ಯೇಕ ಕೊಠಡಿಗಳಲ್ಲಿ ಐಸೋಲೇಷನ್‌ನಲ್ಲಿಡಲಾಗಿದ್ದು, ಇವರ ಸಂಪರ್ಕಿತರನ್ನು ಕ್ವಾರಂಟೈನ್ ಮಾಡಲಾಗಿದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.

ಕಳೆದ ನ. 25 ರಿಂದ ಡಿ. 23ರ ಮಧ್ಯರಾತ್ರಿವರೆಗೆ ಬ್ರಿಟನ್‌ನಿಂದ 33 ಸಾವಿರ ಪ್ರಯಾಣಿಕರು ದೇಶದ ವಿವಿಧ ವಿಮಾನ ನಿಲ್ದಾಣಗಳಲ್ಲಿ ಬಂದಿಳಿದಿದ್ದಾರೆ. ಈ ಪ್ರಯಾಣಿಕರನ್ನೆಲ್ಲ ಪತ್ತೆ ಹಚ್ಚಿ ಅವರನ್ನು ಆರ್‌ಟಿ-ಪಿಸಿಆರ್‌ಗೆ ಒಳಪಡಿಸಲಾಗಿದ್ದು, ಈ ಪೈಕಿ ಇದುವರೆಗೂ 58 ಪ್ರಯಾಣಿಕರಲ್ಲಿ ರೂಪಾಂತರ ವೈರಸ್ ಪತ್ತೆಯಾಗಿದ್ದು, ಇವರಿಂದ ಸೋಂಕು ಹರಡದಂತೆ ಎಲ್ಲ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಬ್ರಿಟನ್ ರೂಪಾಂತರ ಕೊರೊನಾ ಸೋಂಕಿತರ ಸಂಖ್ಯೆ ಏರಿಕೆ.
- ದೇಶದಲ್ಲಿ 58, ರಾಜ್ಯದಲ್ಲಿ 11 ಸೋಂಕಿತರಿಗೆ ರೂಪಾಂತರ ವೈರಸ್ ದೃಢ.
- ಬೆಂಗಳೂರಿನಲ್ಲಿ ಇಂದು ಮತ್ತೊಬ್ಬ ಸೋಂಕಿತರಲ್ಲಿ ರೂಪಾಂತರ ವೈರಸ್ ಪತ್ತೆ.
- ಬೆಂಗಳೂರಿನಲ್ಲಿ ಏಳು ಮಂದಿ, ಶಿವಮೊಗ್ಗದಲ್ಲಿ ನಾಲ್ವರಲ್ಲಿ ರೂಪಾಂತರ ವೈರಸ್ ಪತ್ತೆ.



### ನಗರದಲ್ಲಿ 500 ಮಂದಿ ನಾಪತ್ತೆ

ಈ ಮಧ್ಯೆ ಬೆಂಗಳೂರಿನ 8 ವಲಯದಲ್ಲಿ ಸುಮಾರು 500 ಮಂದಿ ಸೋಂಕಿತರು ನಾಪತ್ತೆಯಾಗಿದ್ದಾರೆ.

ಕೊರೊನಾ ಸೋಂಕು ತಗುಲಿದ್ದಾಗ ತಪ್ಪು ವಿಳಾಸ ನೀಡಿ ಒಂದು ವಾರದಿಂದ ನಾಪತ್ತೆಯಾಗಿರುವುದು ಆತಂಕಕ್ಕೆ ಕಾರಣವಾಗಿದೆ.

ನಗರದಲ್ಲಿ ಒಟ್ಟು 506 ಕೊರೊನಾ ಸೋಂಕಿತರಿದ್ದಾರೆ ಎಂದು ಹೇಳಲಾಗಿದ್ದು, ಕೋವಿಡ್ ಟೆಸ್ಟ್ ವೇಳೆ ಮೊಬೈಲ್ ನಂಬರ್ ಮತ್ತು ವಿಳಾಸ ತಪ್ಪಾಗಿ ನೀಡಿದ್ದಾರೆ. ನಂತರ ಸೋಂಕು ದೃಢಪಟ್ಟಾಗ ಸುಳ್ಳು ಮಾಹಿತಿ ನೀಡಿರುವುದು ಬಹಿರಂಗವಾಗಿದೆ. ಇದಕ್ಕೆ ಪಾಲಿಕೆ ನಿರ್ಲಕ್ಷ್ಯವೇ ಕಾರಣ ಎಂಬ ಆರೋಪ ಕೇಳಿಬಂದಿದೆ. ನಗರದಲ್ಲೇ ಇದ್ದಾರಾ ಅಥವಾ ಬೇರೆ ಹಳ್ಳಿಗಳಿಗೆ ಹೋಗಿದ್ದಾರಾ ಎಂಬುದು ಪತ್ತೆ ಹಚ್ಚಬೇಕಾಗಿದೆ.

- ಬೆಂಗಳೂರು ಪೂರ್ವ – 190
- ಮಹದೇವಪುರ – 150
- ಬೊಮ್ಮನಹಳ್ಳಿ – 88
- ಬೆಂಗಳೂರು ಪಶ್ಚಿಮ – 58
- ಯಲಹಂಕ – 52
- ಆರ್ ಆರ್ ನಗರ – 28
- ಬೆಂಗಳೂರು ದಕ್ಷಿಣ – 18.
- ದಾಸರಹಳ್ಳಿ – 7 ಮಂದಿ ನಾಪತ್ತೆಯಾಗಿದ್ದಾರೆ.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಬೆಂಗಳೂರಿನಲ್ಲಿ 7 ಮಂದಿಗೆ
# ಹೈಸ್ಪೀಡ್ ಕೊರೊನಾ

**ಬೆಂಗಳೂರು,ಜ.5-** ಇತ್ತೀಚೆಗೆ ಬ್ರಿಟನ್‍ನಿಂದ ಆಗಮಿಸಿದ್ದ ನಗರದ ಮತ್ತೊಬ್ಬ ವ್ಯಕ್ತಿಗೆ ರೂಪಾಂತರಿ ವೈರಸ್ ದೃಢಪಟ್ಟಿದೆ.

ಇತ್ತೀಚೆಗೆ ಬ್ರಿಟನ್‍ನಿಂದ ನಗರಕ್ಕೆ ಬಂದಿದ್ದ 10 ಜನರ ಸ್ವ್ಯಾಬ್‍ನ್ನು ಜೆನೆಟಿಕ್ ಪರೀಕ್ಷೆಗಾಗಿ ನಿಮ್ಹಾನ್ಸ್‌ಗೆ ರವಾನಿಸಲಾಗಿತ್ತು . ಈ 10 ಮಂದಿಯಲ್ಲಿ ಒಬ್ಬರಿಗೆ ರೂಪಾಂತರ ವೈರಸ್ ಅಟ್ಯಾಕ್ ಆಗಿರುವುದು ಖಚಿತಪಟ್ಟಿದೆ.

ನಿಮ್ಹಾನ್ಸ್ ವೈದ್ಯಾಧಿಕಾರಿಗಳು ಆರೋಗ್ಯ ಇಲಾಖೆಗೆ ವರದಿ ರವಾನಿಸಿದ್ದಾರೆ. ಇದರೊಂದಿಗೆ ನಗರದಲ್ಲಿ ಇದುವರೆಗೂ ಏಳು ಮಂದಿಗೆ ರೂಪಾಂತರ ವೈರಸ್ ತಗುಲಿದಂತಾಗಿದೆ.

ಈ ಮೊದಲು ವಸಂತಪುರದಲ್ಲಿ ತಾಯಿ-ಮಗಳು , ಜೆಪಿನಗರದ 34 ವರ್ಷದ ವ್ಯಕ್ತಿಯೊಬ್ಬರಿಗೆ ಸೋಂಕು ಇರುವುದು ಖಚಿತವಾಗಿತ್ತು . ...ಪುಟ 2

## ಹೈಸ್ಪೀಡ್ ಕೊರೊನಾ

ನಂತರ ರಾಜಾಜಿನಗರ ಒಬ್ಬರು ಮತ್ತು ಇತರ ಎರಡು ಪ್ರದೇಶಗಳಲ್ಲಿ ಇಬ್ಬರು ಸೇರಿದಂತೆ 6 ಮಂದಿಗೆ ರೂಪಾಂತರಿ ವೈರಸ್ ಅಟ್ಯಾಕ್ ಆಗಿತ್ತು . ಈಗ ಮತ್ತೊಬ್ಬ ವ್ಯಕ್ತಿಗೂ ಹೈಸ್ಪೀಡ್ ವೈರಸ್ ಅಟ್ಯಾಕ್ ಆಗಿರುವುದರಿಂದ ಬೆಂಗಳೂರು ನಗರವೊಂದರಲ್ಲೇ 7 ಮಂದಿಗೆ ರೂಪಾಂತರಿ ವೈರಸ್ ತಗುಲಿರುವುದು ನಗರದ ಜನತೆಯಲ್ಲಿ ಆತಂಕ ಶುರುವಾಗಿದೆ.

ಬೆಂಗಳೂರಿನಲ್ಲಿ 7 ಮಂದಿಗೆ, ರಾಜ್ಯದ ಬೇರೆಡೆ 4 ಮಂದಿಗೆ ಸೇರಿ 11 ಜನರಿಗೆ ಹೈಸ್ಪೀಡ್ ಕೊರೊನಾ ತಗುಲಿದೆ.

ಈ 11 ಮಂದಿ ಜೊತೆ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕ ಹೊಂದಿದವರ ಪತ್ತೆಹಚ್ಚುವ ಕಾರ್ಯವನ್ನು ಅಧಿಕಾರಿಗಳು ತ್ವರಿಗೊಳಿಸಿದ್ದಾರೆ. ಬ್ರಿಟನ್‍ನಿಂದ ವಾಪಸ್ಸಾದ 2250ಕ್ಕೂ ಹೆಚ್ಚು ಮಂದಿಯನ್ನು ಪತ್ತೆ ಹಚ್ಚಿ ಸ್ವ್ಯಾಬ್ ಪಡೆದು ಪರೀಕ್ಷೆ ನಡೆಸಲಾಗಿದೆ. ಬ್ರಿಟನ್‍ನಿಂದ ವಾಪಸ್ಸಾದವರಲ್ಲಿ 14 ಮಂದಿ ಇನ್ನೂ ನಾಪತ್ತೆಯಾಗಿದ್ದು , ಅವರನ್ನು ಪತ್ತೆಹಚ್ಚಲು ಇದುವರೆಗೆ ಸಾಧ್ಯವಾಗದ ಕಾರಣ ಇತರರಿಗೂ ರೂಪಾಂತರಿ ಕೊರೊನಾ ತಗುಲುವ ಸಾಧ್ಯತೆ ಇರುವುದರಿಂದ ನಾಗರಿಕರಲ್ಲಿ ತೀವ್ರ ಆತಂಕ ಶುರುವಾಗಿದೆ.

ಬಿಬಿಎಂಪಿ ಅಧಿಕಾರಿಗಳು ಈಗಾಗಲೇ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದ್ದಾರೆ.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಲಸಿಕೆ 100% ಓಕೆ

## ಸದ್ಯದಲ್ಲಿಯೇ ಎಲ್ಲಾ ಅನುಮಾನ ದೂರ

**ನವದೆಹಲಿ, ಜ.5-** ಕೊರೊನಾ ಲಸಿಕೆ ಕುರಿತಂತೆ ಸಾರ್ವಜನಿಕ ವಲಯದಲ್ಲಿರುವ ಎಲ್ಲಾ ಗೊಂದಲಗಳನ್ನು ಜಂಟಿ ಹೇಳಿಕೆ ಮೂಲಕ ಶೀಘ್ರವೇ ನಿವಾರಣೆ ಮಾಡುವುದಾಗಿ ಸೆರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿಇಒ ಆಧಾರ್ ಪೂನವಾಲ ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಸಾರ್ವ ಜನಿಕ ವಲಯದಲ್ಲಿರುವ ...ಪುಟ 2

# ಲಸಿಕೆ 100% ಓಕೆ

ಗೊಂದಲಗಳ ಬಗ್ಗೆ ನಾನು ಎರಡು ವಿಷಯ ಹೇಳಲು ಬಯಸುತ್ತೇನೆ. ಮೊದಲನೆಯದಾಗಿ ಲಸಿಕೆಗಳನ್ನು ಎಲ್ಲಾ ದೇಶಗಳಿಗೂ ರಫ್ತು ಮಾಡಲು ಅನುಮತಿ ಸಿಕ್ಕಿದೆ. ಎರಡನೆಯದಾಗಿ ತಪ್ಪು ಗ್ರಹಿಕೆಯಿಂದಾಗಿ ಉಂಟಾಗಿರುವ ಗೊಂದಲಗಳನ್ನು ಭಾರತ್ ಬಯೋಟೆಕ್ ಸಂಸ್ಥೆಯ ಜತೆಯಾಗಿ ಜಂಟಿ ಹೇಳಿಕೆ ನೀಡುವ ಮೂಲಕ ಎಲ್ಲಾ ಗೊಂದಲಗಳನ್ನು ಬಗೆಹರಿಸುತ್ತೇವೆ ಎಂದು ತಿಳಿಸಿದ್ದಾರೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮತ್ತು ಅಸ್ಟ್ರಜೆನಿಕ ಜತೆಯಾಗಿ ಸೆರಂ ಸಂಸ್ಥೆ ಕೋವಿಶೀಲ್ಡ್ ಲಸಿಕೆಯನ್ನು ಅಭಿವೃದ್ಧಿಪಡಿಸಿದ್ದು, ಅದರ ತುರ್ತು ಬಳಕೆಗೆ ಈಗಾಗಲೇ ಕೇಂದ್ರ ಔಷಧಿ ನಿಯಂತ್ರಕ ಸಂಸ್ಥೆ ಅನುಮತಿ ನೀಡಿದೆ. ಇನ್ನು ಪುಣೆಯ ವೈರಾಣು ಸಂಸ್ಥೆ ಮತ್ತು ಐಸಿಎಂಆರ್ ಸಮ್ಮುಖದಲ್ಲಿ ಭಾರತ್ ಬಯೋಟೆಕ್ ಸಂಸ್ಥೆ ಕೋವ್ಯಾಕ್ಸಿನ್ ಲಸಿಕೆಯನ್ನು ತಯಾರಿಸಿದೆ.

ಕೋವ್ಯಾಕ್ಸಿನ್ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆಯುತ್ತಿರುವ ನಡುವೆಯೇ ತುರ್ತು ಸಂದರ್ಭದ ಲಸಿಕೆ ಬಳಕೆಗೆ ಕೇಂದ್ರ ಔಷಧಿ ನಿಯಂತ್ರಕ ಸಂಸ್ಥೆ ಅನುಮತಿ ನೀಡಿದೆ ಎಂಬ ಆರೋಪ ಕೇಳಿ ಬಂದಿದೆ.

ಕೋವ್ಯಾಕ್ಸಿನ್ ಭಾರತೀಯ ಮೂಲದ್ದಾಗಿದ್ದು, ಆತ್ಮನಿರ್ಭರ್ ಯೋಜನೆಯಡಿ ಸ್ವದೇಶಿ ನಿರ್ಮಿತ ಲಸಿಕೆ ಎಂದು ಪ್ರಚಾರ ಮಾಡಲಾಗುತ್ತಿದೆ. ಕೋವಿಶೀಲ್ಡ್ ಅಭಿವೃದ್ಧಿಪಡಿಸಲು ವಿದೇಶಿ ಸಂಸ್ಥೆಗಳು ನೆರವು ನೀಡಿದ್ದು, ಅದಕ್ಕೆ ಅನುಮತಿ ನೀಡಲು ಪ್ರಭಾವಿ ಉದ್ಯಮಿಗಳು ಪ್ರಭಾವ ಬೀರಿದ್ದರು ಎಂಬ ಆರೋಪ ಕೇಳಿ ಬಂದಿದೆ.

ಈ ಎರಡೂ ಲಸಿಕೆಗಳ ಸುರಕ್ಷತೆ ಬಗ್ಗೆ ಕೇಂದ್ರ ಔಷಧಿ ನಿಯಂತ್ರಕರ ಸಂಸ್ಥೆ ಸ್ಪಷ್ಟ ಭರವಸೆ ನೀಡಿದ ಹೊರತಾಗಿಯೂ ಹಲವಾರು ಅಪಸ್ವರಗಳು ಕೇಳಿ ಬಂದಿವೆ. ನಿನ್ನೆ ಭಾರತ್ ಬಯೋಟೆಕ್‌ನ ವ್ಯವಸ್ಥಾಪಕ ನಿರ್ದೇಶಕ ಕೃಷ್ಣಎಲ್ಲಾ ಅವರು ಸುದೀರ್ಘ ಪತ್ರಿಕಾಗೋಷ್ಠಿ ನಡೆಸಿ ಹಲವಾರು ಸ್ಪಷ್ಟನೆಗಳನ್ನು ನೀಡಿದ್ದರು.

ಅದರ ಹೊರತಾಗಿಯೂ ಕೂಡ ಆಕ್ಷೇಪಗಳು ಕೇಳಿ ಬರುತ್ತಿವೆ. ಪ್ರಖ್ಯಾತ ವಕೀಲ ಪ್ರಶಾಂತ್ ಭೂಷಣ್ ಅವರು ಭಾರತ್ ಬಯೋಟೆಕ್ ಸಂಸ್ಥೆಯ ಕೋವ್ಯಾಕ್ಸಿನ್ ಲಸಿಕೆ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್‌ಗೆ ಒಳಪಡುತ್ತಿದೆ. ಅದರ ಸುರಕ್ಷತೆ ಬಗ್ಗೆ ಮೂಲ ದತ್ತಾಂಶಗಳು ಲಭ್ಯವಿಲ್ಲ. ಅಸ್ಟ್ರಜೆನಿಕ ಸಂಸ್ಥೆ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ತಯಾರಿಸಿರುವ ಲಸಿಕೆಯ ಸುರಕ್ಷತೆ ಬಗ್ಗೆಯೂ ಗೊಂದಲಗಳಿವೆ ಎಂದು ಹೇಳಿದ್ದಾರೆ.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಬ್ರಿಟನ್‌ನಿಂದ ಬಂದಿರುವ 114 ಜನ ಇನ್ನೂ ನಾಪತ್ತೆ

**ಬೆಂಗಳೂರು, ಜ.5-** ಬ್ರಿಟನ್‌ನಿಂದ ವಾಪಸಾಗಿ ನಾಪತ್ತೆಯಾಗಿರುವ 114 ಮಂದಿಯನ್ನು ಪತ್ತೆ ಹಚ್ಚಲು ಇದುವರೆಗೂ ಸಾಧ್ಯವಾಗದಿರುವುದು ಹಲವಾರು ಸಂಶಯಗಳಿಗೆ ಎಡೆ ಮಾಡಿಕೊಟ್ಟಿದ್ದು, ಅವರಿಂದ ನಗರದಲ್ಲಿ ರೂಪಾಂತರ ವೈರಸ್ ಹಾವಳಿ ಹೆಚ್ಚಾಗುವ ಸಾಧ್ಯತೆಗಳಿವೆ.

ಡಿಸೆಂಬರ್ ಅಂತ್ಯದಲ್ಲಿ 4,348 ಪ್ರಯಾಣಿಕರು ಬ್ರಿಟನ್‌ನಿಂದ ವಾಪಸಾಗಿದ್ದರು. ಇವರಲ್ಲಿ 2465 ಮಂದಿ ಬೆಂಗಳೂರಿನ ನಿವಾಸಿಗಳೇ ಆಗಿದ್ದು, ಅವರನ್ನೆಲ್ಲಾ ಪತ್ತೆ ಹಚ್ಚಿ ಕೊರೊನಾ ಪರೀಕ್ಷೆ ನಡೆಸಲಾಗಿತ್ತು. ಆದರೆ ಬ್ರಿಟನ್‌ನಿಂದ ವಾಪಸಾದ 114 ಮಂದಿ ಮಾತ್ರ ಇದುವರೆಗೂ ಪತ್ತೆಯಾಗಿಲ್ಲ. ಬಿಬಿಎಂಪಿ ದಾಖಲೆಯಲ್ಲಿ 114 ಮಂದಿ ನಾಪತ್ತೆಯಾಗಿದ್ದಾರೆ ಎಂದು ನಮೂದಾಗಿದ್ದರೂ ಆರೋಗ್ಯ ಸಚಿವರು ಕೇವಲ 75 ಮಂದಿ ಪತ್ತೆಯಾಗಿಲ್ಲ ಎಂದು ತದ್ವಿರುದ್ಧ ಹೇಳಿಕೆ ನೀಡುತ್ತಿರುವುದು ಹಲವಾರು ಸಂಶಯಗಳಿಗೆ ಎಡೆ ಮಾಡಿಕೊಟ್ಟಿದೆ.

ನಾಪತ್ತೆಯಾದವರನ್ನು 48 ಗಂಟೆಯಲ್ಲಿ ಪತ್ತೆ ಮಾಡಲಾಗುವುದು ಎಂದು ಗೃಹ ಇಲಾಖೆ ಹೇಳಿಕೆ ನೀಡಿ ಮೂರು ದಿನ ಕಳೆದರೂ ಇದುವರೆಗೂ ನಾಪತ್ತೆಯಾದವರ ಪತ್ತೆ ಮಾಡಲು ಸಾಧ್ಯವಾಗಿಲ್ಲ. ಬಿಬಿಎಂಪಿ ಅಧಿಕಾರಿಗಳು, ಆರೋಗ್ಯ ಇಲಾಖೆ ಮತ್ತು ಗೃಹ ಇಲಾಖೆ, ಸಹಾಯ ಕೋರಿದರೂ ನಾಪತ್ತೆಯಾದವರನ್ನು ಪತ್ತೆ ಹಚ್ಚಲು ಸಾಧ್ಯವಾಗುತ್ತಿಲ್ಲ.

ನಾಪತ್ತೆಯಾಗಿರುವ 114 ಮಂದಿ ತಮ್ಮ ಮೊಬೈಲ್ ಫೋನ್‌ಗಳನ್ನು ಹಾಗೂ ಸಿಮ್‌ಗಳನ್ನು ಬದಲಾಯಿಸಿಕೊಂಡು ಪರ್ಯಾಯ ಸ್ಥಳದಲ್ಲಿ ವಾಸಿಸುತ್ತಿರುವ ಶಂಕೆ ವ್ಯಕ್ತವಾಗಿದೆ.

ನಾಪತ್ತೆಯಾದ ಎಲ್ಲರನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿಕೆ ನೀಡುತ್ತಿದ್ದರೂ ಇದುವರೆಗೂ ನಾಪತ್ತೆಯಾದ ಒಬ್ಬನೇ ಒಬ್ಬ ವ್ಯಕ್ತಿಯನ್ನು ಪತ್ತೆ ಹಚ್ಚಲು ಸಾಧ್ಯವಾಗಿಲ್ಲ.

ನಾಪತ್ತೆಯಾದವರನ್ನು ಪತ್ತೆ ಹಚ್ಚಲು ಏಕಿಷ್ಟು ವಿಳಂಬ. ಬ್ರಿಟನ್‌ನಿಂದ ಆಗಮಿಸಿ ತಲೆಮರೆಸಿಕೊಂಡಿರುವ 114 ಮಂದಿಗೆ ರೂಪಾಂತರ ಕೊರೊನಾ ವೈರಸ್ ಅಟ್ಯಾಕ್ ಆಗಿದ್ದರೆ ಅಕ್ಕ ಪಕ್ಕದ ನಿವಾಸಿಗಳ ಪಾಡೇನು? ತಲೆಮರೆಸಿಕೊಂಡಿರುವ ಈ 114 ಮಂದಿ ಬೆಂಗಳೂರಿಗೆ ಡೇಂಜರ್ ಆಗಿ ಪರಿವರ್ತನೆಯಾದರೂ ಆಶ್ಚರ್ಯ ಪಡುವಂತಿಲ್ಲ.